ಮಂಗಳೂರು ಫೆಬ್ರವರಿ 07–ಫೆಬ್ರವರಿ 25: 2026 ಸಂಪುಟ 2, ಸಂಚಿಕೆ 13, ಪುಟಗಳು–8 RNI:KNKAN/26/A0422 www.ullalavani.com alavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ

ಕಡಲ ಮಗಲ್

ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿರಿ

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಚ್ಚಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ಗ್ರಾಮಚಾವಡಿ ದಕ್ಷ ಯುವ ಬಳಗದ 17ನೇ ವರ್ಷದ ವಾರ್ಷಿಕೋತ್ಸವ
ಪುಟ 4 ಕುರ್ನಾಡು ಮಂಡಲದ ಮುಡಿಪುವಿನಲ್ಲಿ ನಡೆದ ಹಿಂದೂ ಸಂಗಮ
ಪುಟ 5 ಮಗನ ಹೆಸರಿನ ಆಂಬ್ಯುಲೆನ್ಸ್ ಲೋಕಾರ್ಪಣೆ
ಪುಟ 6 ಉಳ್ಳಾಲದ ಮಂದಿ ಸ್ವಾಭಿಮಾನದಿಂದ ಬಾಳಲು ವೀರರಾಣಿ ಅಬ್ಬಕ್ಕಳೇ ಕಾರಣ

## ಕೋಟೆಕಾರು ಸಾಮಾನ್ಯ ಸಭೆ ಮತ್ತೆ ಚರ್ಚೆಗೆ ಬಂದ ಕುಂಪಲ–ಮಡ್ಯಾರ್ ರಸ್ತೆ



**ಕೋಟೆಕಾರ್:** ಇಲ್ಲಿನ ಪಟ್ಟಣ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಉಳ್ಳಾಲವಾಣಿ ನಡೆಸುತ್ತಿರುವ ಕುಂಪಲ–ಮಡ್ಯಾರ್ ರಸ್ತೆ ಸಂಪರ್ಕ ರಸ್ತೆಯ ಕುರಿತು ಮತ್ತೆ ಚರ್ಚೆಗೆ ಬಂದಿದೆ.

ಕೋಟೆಕಾರ್ ಪ.ಪಂ.ಅಧ್ಯಕ್ಷ ದಿವ್ಯ ಸತೀಶ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕೌನ್ಸಿಲರ್ ಹರೀಶ್ ರಾವ್, ಅವರು ರಸ್ತೆಯ ಕುರಿತು ಪ್ರಸ್ತಾಪಿಸಿದ್ದಾರೆ.

ಪ್ರತಿಕ್ರಿಯಿಸಿದ ಅಧ್ಯಕ್ಷೆ ದಿವ್ಯಾ ಸತೀಶ್ ಶೆಟ್ಟಿ ಇವರು, ಸರಕಾರಿ ಜಾಗವನ್ನು ಗುರುತಿಸುವ ಕಾರ್ಯವನ್ನು ಮಾಡಲಾಗಿದೆ. ಖಾಸಗಿ ಜಾಗದ ಮಾತುಕತೆಯಲ್ಲಿ ಹೆಚ್ಚಿನ ಕ್ರಯವನ್ನು ಮಾಲೀಕರು ತಿಳಿಸಿರುವುದರಿಂದ ಅದನ್ನು ಭರಿಸಲು ಕಷ್ಟ. ಹಾಗಾಗಿ ಮುಂದೆ ಬೇರೆ ಕಡೆಯತ್ತ ಜಾಗವನ್ನು ಗುರುತಿಸುವ ಪ್ರಕ್ರಿಯೆಗೆ ಮುಂದಾಗುತ್ತಿದ್ದೇವೆ ಎಂದಿದ್ದಾರೆ.

ಕೌನ್ಸಿಲರ್ ಸುಜಿತ್ ಮಾಡೂರು, ನಿವೇಶನ ರಹಿತರ ಹಾಗೂ ಸರ್ಕಾರಿ ಜಾಗ ಕಬಳಿಕೆ ವಿರುದ್ಧ ಮಾತನಾಡಿದ್ದು, ಗ್ರಾಮಕರಣಿಕರು ಗೈರು ಆಗಿರುವುದರ ವಿರುದ್ಧ ಧ್ವನಿ ಎತ್ತಿದ್ದಾರೆ. ಇದರಿಂದಾಗಿ ಬಡವರಿಗೆ ಅನ್ಯಾಯ ಆಗಿದೆ ၊, ಬಡವರಿಗೆ ಯಾಕೆ ನ್ಯಾಯ ಕೊಡುತ್ತಿಲ್ಲ ಎಂದು ಪ್ರಶ್ನಿಸಿದರಲ್ಲದೇ ಈ ವಿಚಾರದಲ್ಲಿ ನಿರಂತರ ಹೋರಾಟ ಇದೆ ಎಂದು ಎಚ್ಚರಿಸಿದರು.

- **ಗ್ರಾಮಕರಣಿಕ ಸಭೆಗೆ ಬಂದು ಸರಿಯಾಗಿ ಮಾಹಿತಿ ನೀಡುತ್ತಿಲ್ಲ.**
- **ವಸತಿ ಯೋಜನೆಗೆ ಸರ್ಕಾರಿ ಜಾಗ ಒದಗಿಸದೇ ಬಡವರಿಗೆ ಅಧಿಕಾರಿಗಳು ಅನ್ಯಾಯ ಎಸಗಿದ್ದಾರೆ**
- **ಅಭಿವೃದ್ಧಿ ಕಾಮಗಾರಿಗೆ ಅನುದಾನ ಮಂಜೂರು ಆಗಿ ಕೆಲವು ಕಡೆ ಅಭಿವೃದ್ಧಿ ಕಾಮಗಾರಿ ಆಗಿ ಹಣ ಉಳಿಕೆ ಆಗಿದೆ.**

ಅಭಿವೃದ್ಧಿ ಕಾಮಗಾರಿಗೆ ಅನುದಾನ ಮಂಜೂರು ಆಗಿ ಕೆಲವು ಕಡೆ ಅಭಿವೃದ್ಧಿ ಕಾಮಗಾರಿ ಆಗಿ ಹಣ ಉಳಿಕೆ ಆಗಿದೆ. ಆದರೂ ಕೂಡ ನಾಲ್ಕು ಸದಸ್ಯರ ವಾರ್ಡ್‌ಗಳಲ್ಲಿ ಕೆಲಸ ಆಗಿಲ್ಲ. ಕೆಲಸ ಆಗದ ವಾರ್ಡ್‌ಗಳ ಕೆಲಸ ಮಾಡಿಸಿ ಅಹ್ಮದ್ ಅಜ್ಜಿನಡ್ಕ ಹೇಳಿದರು. ಸುಜಿತ್ ಮಾಡೂರು ಅಭಿವೃದ್ಧಿ ಕಾಮಗಾರಿಗೆ ಹಣ ನೀಡಿ, ಇದರಲ್ಲಿ ತಾರತಮ್ಯ ನೀತಿ ಬೇಡ ಎಂದು ಆಗ್ರಹಿಸಿದರು.

ಅಭಿವೃದ್ಧಿಯಲ್ಲಿ ತಾರತಮ್ಯ ಆಗಿಲ್ಲ. ಎಲ್ಲದಕ್ಕೂ ದಾಖಲಾತಿ ಇದೆ. ಈ ವಿಚಾರದಲ್ಲಿ ತಪ್ಪು ಸಂದೇಶ ನೀಡುವುದು ಬೇಡ ಎಂದು ಅಧ್ಯಕ್ಷೆ ದಿವ್ಯ ಸತೀಶ್ ಹೇಳಿದರು.

ಮುಖ್ಯಾಧಿಕಾರಿ ಮಾಲಿನಿ, ಉಪಾಧ್ಯಕ್ಷರಾದ ಪ್ರವೀಣ್, ಸ್ಥಾಯಿ ಸಮಿತಿ ಅಧ್ಯಕ್ಷ ಧೀರಜ್ ಉಪಸ್ಥಿತರಿದ್ದರು.

# ಮೊದಲ ಬೋಟ್ ಆ್ಯಂಬುಲೆನ್ಸ್ ಉಳ್ಳಾಲದ ಮೀನುಗಾರರ ವಿಭಿನ್ನ ಪ್ರಯತ್ನ

**ಮಂಗಳೂರು:** ರಸ್ತೆ ಅಪಘಾತಗಳು ಅಥವಾ ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ಜೀವ ಉಳಿಸಲು ಸೈರನ್ ಮೊಳಗಿಸುತ್ತಾ ಧಾವಿಸುವ ಅಂಬುಲೆನ್ಸ್‌ಗಳು ಸಾಮಾನ್ಯ ದೃಶ್ಯ. ಆದರೆ ಸಮುದ್ರ ಮಧ್ಯೆ ಅಪಘಾತಗಳು ಸಂಭವಿಸಿದಾಗ ಗಾಯಾಳುಗಳನ್ನು ತಕ್ಷಣ ಕರಾವಳಿಗೆ ತಲುಪಿಸುವ ಸೌಲಭ್ಯಗಳ ಕೊರತೆಯಿಂದ ಅನೇಕ ಬಾರಿ ಜೀವಹಾನಿ ಸಂಭವಿಸುತ್ತಿತ್ತು. ಈ ದೀರ್ಘಕಾಲದ ಸಮಸ್ಯೆಗೆ ಪರಿಹಾರವಾಗಿ ಮಂಗಳೂರು ತಾಲೂಕಿನ ಉಳ್ಳಾಲದ ಮೀನುಗಾರರು ರಾಜ್ಯದಲ್ಲೇ ಮೊದಲ ಬಾರಿಗೆ 'ಬೋಟ್ ಅಂಬುಲೆನ್ಸ್' ಸೇವೆಯನ್ನು ಆರಂಭಿಸಿದ್ದು, ಎಲ್ಲೆಡೆ ಗಮನ ಸೆಳೆದಿದೆ.

ಈ ತುರ್ತು ಬೋಟ್ ಸೇವೆಯನ್ನು ಉಳ್ಳಾಲ ವಲಯ ನಾಡದೋಣಿ ಮತ್ತು ಗಿಲ್‌ನೆಟ್ ಮೀನುಗಾರರ ಸಂಘ ಆರಂಭಿಸಿದೆ. ದೋಣಿ ಮುಳುಗಡೆ, ಸಮುದ್ರದಲ್ಲಿನ ಬೆಂಕಿ ಅವಘಡಗಳು ಅಥವಾ ಮೀನುಗಾರರಿಗೆ ಏಕಾಏಕಿ ಉಂಟಾಗುವ ಆರೋಗ್ಯ ಸಮಸ್ಯೆಗಳ ಸಂದರ್ಭದಲ್ಲಿ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಗಾಯಾಳುಗಳನ್ನು ವೇಗವಾಗಿ ಕರಾವಳಿಗೆ ತಲುಪಿಸುವುದೇ ಈ ಸೇವೆಯ ಉದ್ದೇಶ. ಕರಾವಳಿಯುದ್ದಕ್ಕೂ ಸಮುದ್ರ ಅಂಬುಲೆನ್ಸ್‌ಗಾಗಿ ದಶಕಗಳಿಂದ ಬೇಡಿಕೆ ಇದ್ದರೂ, ತಾಂತ್ರಿಕ ಹಾಗೂ ಆರ್ಥಿಕ ಅಡಚಣೆಗಳಿಂದ ಸರ್ಕಾರದ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದ ನೆರವಿಗಾಗಿ ಕಾಯದೆ ಮೀನುಗಾರರೇ ಒಗ್ಗೂಡಿ ಈ ಸೇವೆಯನ್ನು ಆರಂಭಿಸಿರುವುದು ವಿಶೇಷ.

ವಿಶೇಷವಾಗಿ ವಿನ್ಯಾಸಗೊಳಿಸಿದ ಈ ಬೋಟ್‌ನಲ್ಲಿ ಸೈರನ್, ಕೆಂಪು ಎಚ್ಚರಿಕಾ ದೀಪಗಳು, ಸ್ಟ್ರೆಚರ್, ಆಮ್ಲಜನಕ ಸಿಲಿಂಡರ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಹಾಗೂ ಲೈಫ್ ಜಾಕೆಟ್‌ಗಳನ್ನು ಅಳವಡಿಸಲಾಗಿದೆ. ಸೈರನ್ ಶಬ್ದ ಕೇಳುತ್ತಿದ್ದಂತೆ ಇತರೆ ದೋಣಿಗಳು ದಾರಿ ಬಿಡುವಂತೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಸಾರ್ವಜನಿಕ ಘೋಷಣಾ ವ್ಯವಸ್ಥೆಯನ್ನೂ ಅಳವಡಿಸಿದ್ದು, ತುರ್ತು ಸಂದರ್ಭಗಳಲ್ಲಿ ಕರಾವಳಿಯಲ್ಲಿರುವವರೊಂದಿಗೆ ಸಂವಹನ ನಡೆಸಲು ಸಹಕಾರಿಯಾಗುತ್ತದೆ.

ಈ ಸೇವೆಯನ್ನು ನಿರ್ವಹಿಸಲು ಮೂವರು ತರಬೇತಿ ಪಡೆದ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಅವರು ಕಠಿಣ ಸಮುದ್ರ ಪರಿಸ್ಥಿತಿಗಳಲ್ಲೂ ಈಜಲು ಸಮರ್ಥರಾಗಿದ್ದಾರೆ. ದೋಣಿ ಮುಳುಗಡೆಯಂತಹ ಸಂದರ್ಭಗಳಲ್ಲಿ ಉಸಿರಾಟದ ತೊಂದರೆಯಿಂದಾಗುವ ಸಾವುಗಳನ್ನು ತಡೆಯುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ. ಬೋಟ್ ಅಂಬುಲೆನ್ಸ್ ಮೂಲಕ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಗಾಯಾಳುಗಳನ್ನು ಶೀಘ್ರವಾಗಿ ಕರಾವಳಿಗೆ ಕರೆದೊಯ್ಯಲು ಸಾಧ್ಯವಾಗುತ್ತದೆ.

ಪ್ರಸ್ತುತ ಒಂದು ಬೋಟ್ ಅಂಬುಲೆನ್ಸ್ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದಿಂದ ಆರ್ಥಿಕ ನೆರವು ದೊರೆತಲ್ಲಿ ಹೆಚ್ಚಿನ ಸುಧಾರಿತ ವೈದ್ಯಕೀಯ ಸೌಲಭ್ಯಗಳನ್ನು ಅಳವಡಿಸಿ ಜಿಲ್ಲೆ ಸೇವೆಯನ್ನು ವಿಸ್ತರಿಸುವ ಉದ್ದೇಶವನ್ನು ಮೀನುಗಾರರ ಸಂಘ ಹೊಂದಿದೆ. ಕರಾವಳಿಯಲ್ಲಿ ಜೀವ ರಕ್ಷಣೆಗೆ ಮಾದರಿಯಾದ ಈ ಉಪಕ್ರಮ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.




### ತಕ್ಷಣ ನೆರವು ದೊರಕಬೇಕೆಂಬ ಉದ್ದೇಶದಿಂದ ಈ ತುರ್ತು ಬೋಟ್ ಆಂಬ್ಯುಲೆನ್ಸ್ ವ್ಯವಸ್ಥೆ

**ಮೀನುಗಾರರು ಸಮುದ್ರದಲ್ಲಿ ಕಾರ್ಯನಿರತರಾಗಿರುವ ವೇಳೆ ಯಾವುದೇ ತುರ್ತು ಪರಿಸ್ಥಿತಿ ಉಂಟಾದರೂ, ಅಥವಾ ದೋಣಿ ಅಪಘಾತಕ್ಕೊಳಗಾಗಿ ಮಗುಚಿದಂತಹ ಸಂದರ್ಭಗಳಲ್ಲಿ ತಕ್ಷಣ ನೆರವು ದೊರಕಬೇಕೆಂಬ ಉದ್ದೇಶದಿಂದ ಈ ತುರ್ತು ಬೋಟ್ ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ನಾವು ಸ್ಥಾಪಿಸಿದ್ದೇವೆ.**



**ಇದು ಸಂಪೂರ್ಣವಾಗಿ ಖಾಸಗಿ ನಿಧಿಗಳ ಮೂಲಕ ರೂಪುಗೊಂಡ ಸೇವೆಯಾಗಿದ್ದು, ಸಮುದ್ರದ ಮಧ್ಯದಲ್ಲೇ ಸಂಭವಿಸುವ ಅಪಘಾತಗಳು, ಅಸ್ವಸ್ಥತೆಗಳು ಅಥವಾ ಪ್ರಕೃತಿ ವಿಕೋಪಗಳ ಸಮಯದಲ್ಲಿ ಮೀನುಗಾರರ ಅಮೂಲ್ಯ ಜೀವಗಳನ್ನು ರಕ್ಷಿಸುವುದೇ ಇದರ ಪ್ರಮುಖ ಗುರಿಯಾಗಿದೆ. ಸಾಮಾನ್ಯ ಆಂಬ್ಯುಲೆನ್ಸ್‌ಗಳು ತಲುಪಲಾಗದ ಸ್ಥಳಗಳಲ್ಲಿ, ಈ ಬೋಟ್ ಆಂಬ್ಯುಲೆನ್ಸ್ ಕ್ಷಿಪ್ರವಾಗಿ ಕಾರ್ಯನಿರ್ವಹಿಸಿ ಗಾಯಾಳುಗಳನ್ನು ಸುರಕ್ಷಿತವಾಗಿ ಕರೆಯತ್ತ ತಲುಪಿಸುವ ಮೂಲಕ ಪ್ರಾಣಾಪಾಯವನ್ನು ಕಡಿಮೆ ಮಾಡಲಿದೆ. ಯಾವುದೇ ವಿಪತ್ತು ಎದುರಾದರೂ, ಮೀನುಗಾರರಿಗೆ ತಕ್ಷಣದ ವೈದ್ಯಕೀಯ ನೆರವು ಒದಗಿಸುವ ಮಾನವೀಯ ಸಂಕಲ್ಪದಿಂದ ಈ ಸೇವೆಯನ್ನು ನಾವು ಆರಂಭಿಸಿದ್ದೇವೆ.**

## ಉಳ್ಳಾಲ ತಾಲೂಕು ಪ್ರವಾಸಿ ಮಂದಿರದ ಶಂಕು ಸ್ಥಾಪನೆ



**ಉಳ್ಳಾಲ:** ರಾಜಕೀಯ ನಾಯಕರು ಅಥವಾ ಸಾರ್ವಜನಿಕರ ಜೊತೆ ಚರ್ಚೆ ನಡೆಸಲು ಒಂದು ಗೆಸ್ಟ್ ಹೌಸ್ಸಿನ ಅವಶ್ಯಕತೆಯಿತ್ತು. ಹಾಗಾಗಿ ಉಳ್ಳಾಲ ತಾಲೂಕು ಪ್ರವಾಸಿ ಮಂದಿರದ ಶಂಕು ಸ್ಥಾಪನೆ ನೆರವೇರಿದೆ ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ಇವರು ಕೊಣಾಜೆ ವ್ಯಾಪ್ತಿಯ ಅಸೈಗೋಳಿ ದಡಸ್‌ನಲ್ಲಿ ನಿರ್ಮಾಣಗೊಳ್ಳಲಿರುವ ಉಳ್ಳಾಲ ತಾಲೂಕು ಪ್ರವಾಸಿ ಮಂದಿರದ ಶಂಕು ಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದ್ದರು.

ಕೊಣಾಜೆ ವಿಶ್ವವಿದ್ಯಾನಿಲಯ ↘ 2ನೇ ಪುಟಕ್ಕೆ

## ಉಳ್ಳಾಲವಾಣಿ ನಿರಂತರ ಶ್ರಮ ಕಡೆಗೂ ನಾಯಿಯಿಂದಲೇ ಹತ್ಯೆ ವರದಿ ಸಾಬೀತು

**ಸೋಮೇಶ್ವರ:** ಕುಂಪಲ ಬೈಪಾಸ್ ಸಮೀಪ 60ರ ಹರೆಯದ ದಯಾನಂದ ಗಟ್ಟಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ಎಫ್ ಎಸ್ ಎಲ್ ವರದಿ ಬಂದಿದ್ದು, ನಾಯಿಯೇ ಸಾವಿಗೆ ಕಾರಣ ಎಂಬುದಾಗಿ ಸಾಬೀತಾಗಿದೆ. ಈ ಕುರಿತು ಉಳ್ಳಾಲವಾಣಿ ಉಳ್ಳಾಲ ಪೊಲೀಸ್ ಠಾಣಾಧಿಕಾರಿ, ಸೋಮೇಶ್ವರ ಪುರಸಭೆ ಮುಖ್ಯಾಧಿಕಾರಿ ಜೊತೆಗೆ ನಿರಂತರ ಸಂಭಾಷಣೆ ನಡೆಸಿ ತಡವಾಗಿರುವುದನ್ನು ಪ್ರಶ್ನಿಸುತ್ತಾ ಬಂದಿದ್ದು, ಫೆ.5 ರಂದು ಅಂತಿಮ ವರದಿ ಬಂದಿರುವ ಕುರಿತು ಪೊಲೀಸ್ ಇಲಾಖೆ ಸ್ಪಷ್ಟಪಡಿಸಿದೆ.



ಕುಂಪಲ ಮೂರುಕಟ್ಟೆ ನಿವಾಸಿ ದಯಾನಂದ ಗಟ್ಟಿ (60) ನ.14ರ ಬೆಳಿಗ್ಗೆ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದ ಸ್ಥಿತಿಯಲ್ಲಿ ಕುಂಪಲ ಬೈಪಾಸ್ ಸಮೀಪದ ಮನೆ ಆವರಣದಲ್ಲಿ ಪತ್ತೆಯಾಗಿದ್ದರು. ಆರಂಭದಲ್ಲಿ ಹಲವು ಶಂಕೆಗಳು ವ್ಯಕ್ತವಾದರೂ, ಸ್ಥಳೀಯರ ಕಂಡ ಪ್ರಕಾರ ನಾಯಿ ಅವರ ಮೇಲಿರುವುದನ್ನು ಸ್ಪಷ್ಟಪಡಿಸಿ, ನಾಯಿಗಾಗಿ ಹುಡುಕಾಟ ನಡೆಸಿ ಅದರ ಮುಖದ ಮೇಲಿದ್ದ ರಕ್ತದ ಕುರುಹುಗಳನ್ನು ಪರಿಶೀಲಿಸಿ ಸ್ಥಳಕ್ಕಾಗಮಿಸಿದ್ದ ↘ 7ನೇ ಪುಟಕ್ಕೆ

## ಡಾ.ಸಾಯಿಗೀತಾ, ರಾಜಶ್ರೀ ಉಳ್ಳಾಲ್‌ಗೆ ಅಬ್ಬಕ್ಕ ಪ್ರಶಸ್ತಿ

**ಫೆ.14: ತೊಕ್ಕೊಟ್ಟಿನಲ್ಲಿ ನಡೆಯುವ ಅಬ್ಬಕ್ಕ ಉತ್ಸವದಲ್ಲಿ ಪ್ರದಾನ**

**ಉಳ್ಳಾಲ:** ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ವತಿಯಿಂದ ಪ್ರತಿವರ್ಷ ನೀಡುವ ವೀರರಾಣಿ ಅಬ್ಬಕ್ಕ ಪ್ರಶಸ್ತಿ–2025–26ನೇ ಸಾಲಿನ ಪ್ರಶಸ್ತಿಗೆ ಕಲೆಯಲ್ಲಿ ವಿದುಷಿ ರಾಜಶ್ರೀ ಉಳ್ಳಾಲ್ ಹಾಗು ಸಾಹಿತ್ಯದಲ್ಲಿ ಡಾ.ಸಾಯಿಗೀತಾ ಆಯ್ಕೆಯಾಗಿದ್ದಾರೆ.

ಉಳ್ಳಾಲ ಭಾಗದವರೇ ಆದ ವಿದುಷಿ ರಾಜಶ್ರೀ ಅವರು ಸಣ್ಣ ಪ್ರಾಯದಲ್ಲೇ ತನ್ನ ತಂದೆಯವರಾದ ಕರ್ನಾಟಕ ಕಲಾ ತಿಲಕ ಮೋಹನ್ ಕುಮಾರ್ ಉಳ್ಳಾಲ್ ಇವರಿಂದ ಭರತನಾಟ್ಯ ಶಿಕ್ಷಣವನ್ನು ಪಡೆದು, ಕರ್ನಾಟಕ ಸರಕಾರದ ನೃತ್ಯ ವಿದ್ವತ್ ಪರೀಕ್ಷೆಯಲ್ಲಿ ಪದವಿಯನ್ನು, ಬೆಂಗಳೂರಿನ ನಾಟ್ಯ ಇನ್ಸ್ಟಿಟ್ಯೂಟ್ ಆಫ್ ಕಥಕ್ ಆ್ಯಂಡ್ ಕೋರಿಯೋಗ್ರಾಫಿಯಲ್ಲಿ ಬಿಎ ↘ 2ನೇ ಪುಟಕ್ಕೆ


ವಿದುಷಿ ರಾಜಶ್ರೀ ಉಳ್ಳಾಲ್


ಡಾ.ಸಾಯಿಗೀತಾ

## ಚೆಂಬುಗುಡ್ಡೆಯಲ್ಲಿ ಭಾವೈಕ್ಯತೆಯ ಸಂದೇಶ
# ಪಾದಯಾತ್ರೆಗೆ ತಂಪು ಪಾನೀಯ ವಿತರಣೆ

**ತೊಕ್ಕೊಟ್ಟು:** ಉಳ್ಳಾಲ ತಾಲೂಕಿನ ಚೆಂಬುಗುಡ್ಡೆಯಲ್ಲಿ ಕ್ರೈಸ್ತ, ಮುಸ್ಲಿಂ ಹಾಗೂ ಹಿಂದೂ ಬಾಂಧವರು ಒಂದಾಗಿ ಭಾವೈಕ್ಯತೆಯ ಅಪೂರ್ವ ಉದಾಹರಣೆ ಮೆರೆದರು. ದಿವ್ಯಜ್ಯೋತಿ ಕ್ರಿಕೆರ?ಸ್ ವತಿಯಿಂದ ಪಂಡಿತ್ ಹೌಸ್‌ನಿಂದ ತಲಪಾಡಿ ದೇವಿಪುರ ದುರ್ಗಾಪರಮೇಶ್ವರಿ ಕ್ಷೇತ್ರದವರೆಗೆ ಹಮ್ಮಿಕೊಳ್ಳಲಾದ 'ನಮ್ಮೆಲ್ಲರ ನಡಿಗೆ ಶ್ರೀ ಕ್ಷೇತ್ರ ತಲಪಾಡಿ ದೇವಿಪುರದ ಕಡೆಗೆ' ಎಂಬ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಹಿಂದೂ ಬಾಂಧವರಿಗೆ ಚೆಂಬುಗುಡ್ಡೆ ನಿವಾಸಿಗಳಾದ ಕ್ರೈಸ್ತ ಹಾಗೂ ಮುಸ್ಲಿಂ ಬಾಂಧವರು ತಂಪು ಪಾನೀಯಗಳನ್ನು ವಿತರಿಸುವ ಮೂಲಕ ಸೌಹಾರ್ದತೆಯ ಸಂದೇಶ ಸಾರಿದರು.

ಶಾಸಕರೂ ಹಾಗೂ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ಖಾಸಗಿ ಆಪ್ತ ಸಹಾಯಕರಾದ ಪ್ರಕಾಶ್ ಪಿಂಟೋ ಅವರ ನೇತೃತ್ವದಲ್ಲಿ ಈ ಸಮಾಜಮುಖಿ ಕಾರ್ಯ ನೆರವೇರಿತು. ಧಾರ್ಮಿಕ ಭಿನ್ನತೆಗಳನ್ನೆಲ್ಲ ಮೀರಿ, ಮಾನವೀಯತೆ ಮುಖ್ಯ ಎಂಬ ಸಂದೇಶವನ್ನು ಈ ಕಾರ್ಯ ಸ್ಪಷ್ಟವಾಗಿ ಸಾರಿತು.

ವಿಶೇಷವೆಂದರೆ ಸಂಜೆಯ ನಮಾಝ್ ಸಮಯದಲ್ಲಿಯೇ ಪಾದಯಾತ್ರೆ ಸಾಗುತ್ತಿದ್ದರೂ, ಮುಸ್ಲಿಂ ಬಾಂಧವರು ನಮಾಝ್ ಮುಗಿಸಿ ಪಾದಯಾತ್ರಿಕರಿಗೆ ತಂಪಾದ ಪಾನೀಯಗಳನ್ನು ವಿತರಿಸುವ ಮೂಲಕ ಧಾರ್ಮಿಕ ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜದ ಮುಂದೆ ಪ್ರತಿಪಾದಿಸಿದರು.





ಈ ಸಂದರ್ಭದಲ್ಲಿ ಜಹಬೀರ್, ಇಮ್ರಾನ್ ಕೆರೆಬೈಲ್, ಸಿದಾಕ್, ಪ್ರದೀಪ್, ಅಪ್ಪು, ಹಸನ್, ಸುಧೀರ್ ಶೆಟ್ಟಿ, ಆಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ಒಂದೊಮ್ಮೆ ಸೂಕ್ಷ್ಮ ಪ್ರದೇಶವೆಂದು ಗುರುತಿಸಿಕೊಂಡು, ಸಾಮಾಜಿಕ ಉದ್ವಿಗ್ನತೆಗಳ ನೆರಳಿನಲ್ಲೇ ಕಾಣಿಸಿಕೊಳ್ಳುತ್ತಿದ್ದ ಉಳ್ಳಾಲ ತಾಲೂಕು, ಇತ್ತೀಚಿನ ವರ್ಷಗಳಲ್ಲಿ ಸ್ಪಷ್ಟವಾದ ಬದಲಾವಣೆಯ ಹಾದಿಯನ್ನು ಹಿಡಿದಿದೆ. ಹಿಂದಿನ ಕೆಲ ಘಟನೆಗಳಿಂದಾಗಿ 'ಸೂಕ್ಷ್ಮ ಪ್ರದೇಶ' ಎಂಬ ಮುದ್ರೆ ಬಿದ್ದಿದ್ದ ಈ ಪ್ರದೇಶ, ಇಂದು ಅದೇ ಗುರುತನ್ನು ಮುರಿದು ಹಾಕಿ, ಸೌಹಾರ್ದತೆ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿ ಹೊರಹೊಮ್ಮುತ್ತಿರುವುದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಧರ್ಮ, ಜಾತಿ ಮತ್ತು ಭಾಷಾ ವೈವಿಧ್ಯತೆಗಳ ನಡುವೆಯೂ ಪರಸ್ಪರ ಗೌರವ, ಸಹಿಷ್ಣುತೆ ಮತ್ತು ಸಹಕಾರದೊಂದಿಗೆ ಬದುಕುವ ಮನೋಭಾವವು ಉಳ್ಳಾಲದಲ್ಲಿ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ. ಚೆಂಬುಗುಡ್ಡೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕಾಣಿಸುತ್ತಿರುವ ಭಾವೈಕ್ಯತಾ ಕಾರ್ಯಕ್ರಮಗಳು, ಸಮಾಜಮುಖಿ ಚಟುವಟಿಕೆಗಳು ಮತ್ತು ಪರಸ್ಪರ ಸಹಾಯದ ಮನೋಭಾವವು ಈ ಬದಲಾವಣೆಗೆ ಸ್ಪಷ್ಟ ಸಾಕ್ಷಿಯಾಗಿದೆ.

### ಸಕ್ರಿಯ ಪ್ರಕಾಶ್ ಪಿಂಟೋ ಅವರ ಸಮಾಜಮುಖಿ ಪಾತ್ರ

**ಎಲ್ಲಾ ಧರ್ಮಗಳನ್ನೂ ಒಗ್ಗೂಡಿಸಿಕೊಂಡು ಸಮಾಜಮುಖಿ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಸದಾ ಸಕ್ರಿಯರಾಗಿರುವ ಪ್ರಕಾಶ್ ಪಿಂಟೋ, ಜನರ ಸಂಕಷ್ಟಗಳಿಗೆ ಧ್ವನಿಯಾಗುವ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರ ಸೌಹಾರ್ದತೆಯ ಸಂದೇಶಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಎಲ್ಲರ ಮನಗಳಲ್ಲಿ ಸ್ಥಾನ ಪಡೆದಿದ್ದಾರೆ. ಚೆಂಬುಗುಡ್ಡೆಯಲ್ಲಿ ನಡೆದ ಈ ಘಟನೆ ಧಾರ್ಮಿಕ ಸೌಹಾರ್ದತೆ, ಸಹಬಾಳ್ವೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಮತ್ತೊಮ್ಮೆ ಸಮಾಜಕ್ಕೆ ನೆನಪಿಸಿದಂತಾಯಿತು.**



## ಸಂಪಾದಕೀಯ

# ಮಂಗಳೂರು ಪೊಲೀಸ್ ಕಮಿಷನರ್ ಮಾದರಿ ಇತರ ಜಿಲ್ಲೆಗಳು ಹಾಗೂ ಮಹಾನಗರಗಳಲ್ಲಿ ಯಾಕೆ ಅಪರೂಪ?

ಒಬ್ಬ ಮಂಗಳೂರು ಪೊಲೀಸ್ ಕಮಿಷನರ್ (ಐಪಿಎಸ್) ತಮ್ಮ ವೃತ್ತಿಪರತೆ, ತಟಸ್ಥತೆ ಮತ್ತು ಸಂವಿಧಾನಬದ್ಧ ಕಾರ್ಯವೈಖರಿಯಿಂದ ಜನರ ವಿಶ್ವಾಸ ಗಳಿಸಲು ಸಾಧ್ಯವಾಗಿರುವುದು ಕೇವಲ ವ್ಯಕ್ತಿಗತ ಸಾಧನೆಯಲ್ಲ; ಅದು ಪೊಲೀಸ್ ಆಡಳಿತ ಹೇಗಿರಬೇಕು ಎಂಬುದಕ್ಕೆ ಒಂದು ಮಾದರಿ. ಆದರೆ ಇದೇ ಮಾದರಿ ರಾಜ್ಯದ ಇತರ ಜಿಲ್ಲೆಗಳು ಹಾಗೂ ಮಹಾನಗರಗಳಲ್ಲಿ ಯಾಕೆ ಅಪರೂಪವಾಗುತ್ತಿದೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಹೆಚ್ಚಾಗಿ ಕೇಳಿಬರುತ್ತಿದೆ.

ಸಮಸ್ಯೆ ವ್ಯಕ್ತಿಯಲ್ಲಿ ಮಾತ್ರವಲ್ಲ, ಸಂಪೂರ್ಣ ವ್ಯವಸ್ಥೆಯಲ್ಲಿದೆ. ಪೊಲೀಸ್ ವ್ಯವಸ್ಥೆ ಇಂದು ರಾಜಕೀಯ ಒತ್ತಡ, ಆಡಳಿತಾತ್ಮಕ ಹಸ್ತಕ್ಷೇಪ, ಸ್ಥಳೀಯ ಶಕ್ತಿಕೇಂದ್ರಗಳ ಪ್ರಭಾವ ಮತ್ತು ಅಧಿಕಾರಿಗಳಿಗೆ ನೀಡಲಾಗುವ ಸ್ವಾತಂತ್ರ್ಯದ ಕೊರತೆಯಿಂದ ಸಂಕಷ್ಟದಲ್ಲಿದೆ. ಕಾನೂನು ಜಾರಿಗೆ ಆದ್ಯತೆ ನೀಡಬೇಕಾದ ಸಂಸ್ಥೆ, ಕೆಲವೊಮ್ಮೆ ಶಕ್ತಿಶಾಲಿಗಳ ಇಚ್ಛೆಗೆ ತಲೆಬಾಗಬೇಕಾದ ಪರಿಸ್ಥಿತಿಗೆ ತಳ್ಳಲ್ಪಡುತ್ತಿದೆ. ಇದರ ಪರಿಣಾಮವಾಗಿ ಕಾನೂನಿನ ಸಮಾನ ಅನ್ವಯ, ನ್ಯಾಯ ಮತ್ತು ಭದ್ರತೆ ಎಂಬ ಮೂಲಭೂತ ಅಂಶಗಳು ಹಿನ್ನಡೆಗೊಳ್ಳುತ್ತಿವೆ.

ಈ ಹಿನ್ನೆಲೆಯಲ್ಲಿ ಮಂಗಳೂರು ಮಾದರಿ ಗಮನಾರ್ಹ. ಸಂವಿಧಾನವನ್ನು ಕೇಂದ್ರಬಿಂದುವಾಗಿ ಇಟ್ಟುಕೊಂಡು, "ಕಾನೂನಿನ ಮುಂದೆ ಎಲ್ಲರೂ ಸಮಾನರು" ಎಂಬ ತತ್ತ್ವವನ್ನು ನಿರಂತರವಾಗಿ ಅನುಸರಿಸಿದಾಗ, ಶಿಸ್ತು, ಭದ್ರತೆ ಮತ್ತು ಜನವಿಶ್ವಾಸ ನಿರ್ಮಾಣ ಸಾಧ್ಯವೆಂಬುದನ್ನು ಅದು ತೋರಿಸಿದೆ. ಪೊಲೀಸ್ ಅಧಿಕಾರಿಯ ಪಾತ್ರ ರಾಜಕೀಯ ಶಕ್ತಿಯ ಸಾಧನವಲ್ಲ; ಅದು ಸಂವಿಧಾನದ ರಕ್ಷಕನಾಗಿರಬೇಕು ಎಂಬ ಸತ್ಯವನ್ನು ಮಂಗಳೂರು ಅನುಭವ ಮತ್ತೆ ಒತ್ತಿ ಹೇಳುತ್ತದೆ.

ಪೊಲೀಸ್ ವ್ಯವಸ್ಥೆಯ ಯಶಸ್ಸು ವ್ಯಕ್ತಿಗತ ಶೌರ್ಯ, ದರ್ಪ ಅಥವಾ ಪ್ರಚಾರದಲ್ಲಿ ಅಡಗಿಲ್ಲ. ಅದು ಸಂಸ್ಥಾತ್ಮಕ ಸ್ವಾತಂತ್ರ್ಯ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯಲ್ಲಿ ನೆಲೆಗೊಂಡಿದೆ. ಒಳ್ಳೆಯ ಕೆಲಸಕ್ಕೆ ರಾಜಕೀಯ ರಕ್ಷಣೆ ಅಗತ್ಯವಿಲ್ಲ; ಸಂವಿಧಾನಾತ್ಮಕ ಬೆಂಬಲವೇ ಸಾಕು. ಜನರು ಪೊಲೀಸ್ ವ್ಯವಸ್ಥೆಯಿಂದ ನಿರೀಕ್ಷಿಸುವುದು ಅಧಿಕಾರದ ಭೀತಿ ಅಲ್ಲ, ನ್ಯಾಯದ ಭರವಸೆ ಮತ್ತು ಮಾನವೀಯ ನಡೆ. ಈ ಮೌಲ್ಯಗಳು ನೆಲೆಸಿದಾಗಲೇ ಪೊಲೀಸ್ ವ್ಯವಸ್ಥೆ ಜನರ ವಿಶ್ವಾಸಾರ್ಹ ಸಂಸ್ಥೆಯಾಗುತ್ತದೆ.

ಇದಲ್ಲದೆ, ಪೊಲೀಸ್ ವ್ಯವಸ್ಥೆಯ ಮೇಲಿನ ಜನವಿಶ್ವಾಸ ಕುಸಿಯುತ್ತಿರುವುದಕ್ಕೆ ಕೇವಲ ಕಾನೂನು ಜಾರಿಗೆ ಸಂಬಂಧಿಸಿದ ವಿಫಲತೆಗಳೇ ಕಾರಣವಲ್ಲ; ಪೊಲೀಸರ ನಡೆ, ಸಂವಹನ ಮತ್ತು ಮಾನವೀಯತೆಯ ಕೊರತೆಯೂ ಮಹತ್ತರ ಪಾತ್ರವಹಿಸುತ್ತಿದೆ. ನಾಗರಿಕನಿಗೆ ಪೊಲೀಸ್ ಠಾಣೆ ನ್ಯಾಯದ ದ್ವಾರವಾಗಬೇಕಾದರೆ, ಅದು ಭಯದ ಕೇಂದ್ರವಾಗಬಾರದು. ದೂರುದಾರನನ್ನು ಶಂಕಿತನಂತೆ ಕಾಣುವ ಪ್ರವೃತ್ತಿ, ಬಲಿಷ್ಠರ ಮುಂದೆ ಮೌನ ಹಾಗೂ ದುರ್ಬಲರ ಮುಂದೆ ಗಟ್ಟಿತನ ತೋರಿಸುವ ಧೋರಣೆ ವ್ಯವಸ್ಥೆಯ ಮೂಲ ಉದ್ದೇಶವನ್ನೇ ಪ್ರಶ್ನಿಸುವಂತಾಗಿದೆ.

ಇಂತಹ ಸಂದರ್ಭದಲ್ಲೇ ಮಂಗಳೂರು ಮಾದರಿಯ ಪ್ರಾಮುಖ್ಯತೆ ಮತ್ತಷ್ಟು ಹೆಚ್ಚುತ್ತದೆ. ಕಾನೂನು ಜಾರಿಗೆ ಮಾತ್ರ ಸೀಮಿತವಾಗದೆ, ಸಮಾಜದೊಂದಿಗೆ ಸಂವಾದ ನಡೆಸುವ ಪೊಲೀಸ್ ಆಡಳಿತವು ಶಾಶ್ವತ ಶಾಂತಿ ಮತ್ತು ಭದ್ರತೆಗೆ ದಾರಿ ಮಾಡಿಕೊಡುತ್ತದೆ. ಧರ್ಮ, ಜಾತಿ, ಭಾಷೆ ಅಥವಾ ರಾಜಕೀಯ ಹಿನ್ನೆಲೆಗಳಾಚೆ ನಿಂತು ಕಾರ್ಯನಿರ್ವಹಿಸಿದಾಗಲೇ ಪೊಲೀಸ್ ವ್ಯವಸ್ಥೆ ನಿಷ್ಪಕ್ಷಪಾತ ಸಂಸ್ಥೆಯಾಗಿ ಗುರುತಿಸಿಕೊಳ್ಳುತ್ತದೆ.

ರಾಜ್ಯ ಮಟ್ಟದಲ್ಲಿ ಪೊಲೀಸ್ ಸುಧಾರಣೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದರೂ, ಅವು ಕಾಗದದ ಮೇಲಿನ ಪ್ರಸ್ತಾವನೆಗಳಾಗಿ ಉಳಿಯಬಾರದು. ಅಧಿಕಾರಿಗಳಿಗೆ ನಿಗದಿತ ಅವಧಿಯ ಹುದ್ದೆ ಭದ್ರತೆ, ಅನಗತ್ಯ ವರ್ಗಾವಣೆಗಳಿಗೆ ಕಡಿವಾಣ, ಹಾಗೂ ರಾಜಕೀಯ ಹಸ್ತಕ್ಷೇಪದಿಂದ ರಕ್ಷಿಸುವ ವ್ಯವಸ್ಥೆಗಳು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು. ಅದೇ ರೀತಿ, ತಪ್ಪು ಮಾಡಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಹೊಣೆಗಾರಿಕೆ ವ್ಯವಸ್ಥೆಯೂ ಸಮಾನವಾಗಿ ಅಗತ್ಯ.

ಅಂತಿಮವಾಗಿ ಹೇಳಬೇಕಾದರೆ, ಪೊಲೀಸ್ ವ್ಯವಸ್ಥೆಯ ಭವಿಷ್ಯವು ವ್ಯಕ್ತಿಗತ ವೈಶಿಷ್ಟ್ಯಗಳಲ್ಲಿ ಅಲ್ಲ, ಸಂಸ್ಥೆಯ ಆತ್ಮದಲ್ಲಿದೆ. ಸಂವಿಧಾನಾತ್ಮಕ ಮೌಲ್ಯಗಳು ಕಾರ್ಯಪ್ರವೃತ್ತಿಯಲ್ಲಿ ಕಾಣಿಸಿಕೊಂಡಾಗ ಮಾತ್ರ, ಜನರು ಪೊಲೀಸ್ ವ್ಯವಸ್ಥೆಯನ್ನು ಶಕ್ತಿಯ ಸಂಕೇತವಾಗಿ ಅಲ್ಲ ನ್ಯಾಯದ ಆಶ್ರಯವಾಗಿ ಕಾಣಲು ಸಾಧ್ಯವಾಗುತ್ತದೆ.

**ಸಂಪಾದಕ**

## ಗ್ರಾಮಚಾವಡಿ ಕೊಣಾಜೆ ಇಲ್ಲಿನ ದಕ್ಷ ಯುವ ಬಳಗದ 17ನೇ ವರ್ಷದ ವಾರ್ಷಿಕೋತ್ಸವ

# ಸಾಮೂಹಿಕ ಸತ್ಯಾನಾರಾಯಣ ಪೂಜೆ, ಧಾರ್ಮಿಕ ಸಭೆ

**ಕೊಣಾಜೆ:** ದಕ್ಷ ಯುವ ಬಳಗ ಗ್ರಾಮಚಾವಡಿ ಕೊಣಾಜೆ ಇದರ 17ನೇ ವರ್ಷದ ವಾರ್ಷಿಕೋತ್ಸವವು ಸಾಮೂಹಿಕ ಸತ್ಯನಾರಾಯಣ ಪೂಜೆ, ಧಾರ್ಮಿಕ ಸಭಾ ಕಾರ್ಯಕ್ರಮದ ಮೂಲಕ ಶ್ರೀರಾಮ ಭಜನಾ ಮಂದಿರ ಕೋಟಿಪದವುನಲ್ಲಿ ಸಂಪನ್ನಗೊಂಡಿದೆ.




ತಲಪಾಡಿ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದ ಪ್ರಧಾನ ಅರ್ಚಕರಾದ ಗಣೇಶ್ ಭಟ್ ಇವರ ಪೌರೋಹಿತ್ಯದಲ್ಲಿ ಪೂಜಾ ಕೈಂಕರ್ಯಗಳು ಸಮಾಪನಗೊಂಡಿದ್ದು, ಬಳಿಕ ಧಾರ್ಮಿಕ ಸಭಾ ಕಾರ್ಯಕ್ರಮ ನಡೆದಿದೆ. ಕಾರ್ಯಕ್ರಮಕ್ಕೆ ಮೈಥಿಲಿ ಮಾತೃ ಮಂಡಳಿ ಕೋಟಿಪದವು ಇದರ ಅಧ್ಯಕ್ಷರಾದ ಭಾರತಿ ಎಸ್ ರೈ ದೀಪ ಪ್ರಜ್ವಲನೆಗೈಯುವ ಮೂಲಕ ಚಾಲನೆ ನೀಡಿದ್ರು. ಬಳಿಕ ಮಾತನಾಡಿ, ದಕ್ಷ ಯುವ ಬಳಗ ಸಂಘದ ಯುವಕರ ಕಾರ್ಯವನ್ನು ಶ್ಲಾಘಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲು ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು.

ಸಹಕಾರ ರತ್ನ ಪುರಸ್ಕೃತರಾದ ಮುಡಿಪು ಅಮ್ಮೆಂಬಳ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ಟಿ.ಜಿ.ರಾಜಾರಾಮ ಭಟ್ ಅವರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಇವರು, ಸಮಾಜಸೇವೆಗೆ ಸಹಕಾರಿ ಕ್ಷೇತ್ರ ಸಹಕರಿಯಾಗುತ್ತದೆ. ಸಾರ್ವಜನಿಕವಾಗಿ ಸಹಕಾರ ಸಂಘನೆಗಳಲ್ಲಿ ಇದ್ದರೆ ಇಂತಹ ದಕ್ಷ ಯುವ ಬಳಗ ರೀತಿಯಲ್ಲಿ ಒಂದು ಸಂಸ್ಥೆ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸುತ್ತದೆ. ದಕ್ಷತೆಯಿಂದ ಜನಮಾನಸಕ್ಕೆ ಸಹಕಾರ ನೀಡುತ್ತಾ ಬಂದಿರು ದಕ್ಷ ಬಳಗ ಇಂದು 17ವರ್ಷವನ್ನು ಪೂರೈಸಿದೆ ಎನ್ನುತ್ತಾ ಸಂಘಟನೆಯ ಕಾರ್ಯಕ್ಷಮತೆಯನ್ನು ಹಾಡಿಹೊಗಳಿದರು.

ಉರಗತಜ್ಞರಾದ ಡಾ.ಕೆ.ಎಂ.ಬಾಲಕೃಷ್ಣ ಅವರಿಗೆ ಗ್ರಾಮ ಗೌರವ ಪ್ರಶಸ್ತಿಯನ್ನು ನೀಡಿ, ಸನ್ಮಾನಿಸಲಾಯಿತು. ಬಳಿಕ ಇವರು ಮಾತನಾಡಿ, ಕೊಣಾಜೆ, ಪಜೀರು ಭಾಗದಲ್ಲಿ ಸಾವಿರಾರು ಹಾವುಗಳನ್ನು ರಕ್ಷಣೆ ಮಾಡಿದ್ದೇನೆ. ಹಾವಿಗೆ ದೈವತ್ವವಿದೆ ಎಂಬುವುದನ್ನು ಇವತ್ತಿಗೂ ನಂಬುತ್ತೇನೆ. ನನಗೂ ಒಂದೂವರೆ ವರ್ಷದ ಹಿಂದೆ ಹಾವು ಕಚ್ಚಿ, ಹದಿನೈದು ದಿನ ಚಿಕಿತ್ಸೆಯಲ್ಲಿದ್ದೆ. ಹಾವು ಕಚ್ಚಿದಾಗ ಗಾಬರಿಯಾಗದೆ ಶಾಂತವಾಗಿರುವುದು ಅತಿ ಮುಖ್ಯ, ಏಕೆಂದರೆ ಆತಂಕವು ವಿಷವನ್ನು ವೇಗವಾಗಿ ಹರಡುತ್ತದೆ. ತಕ್ಷಣವೇ ಕಚ್ಚಿದ ಜಾಗವನ್ನು ಸೋಪಿನ ನೀರಿನಿಂದ ತೊಳೆದು, ಗಾಯವನ್ನು ಕದಲಿಸದೆ ಹೃದಯದ ಮಟ್ಟಕ್ಕಿಂತ ಕೆಳಗೆ ಇರಿಸಿ ಆಸ್ಪತ್ರೆಗೆ ಧಾವಿಸಿ. ಯಾವುದೇ ಕಾರಣಕ್ಕೂ ಗಾಯವನ್ನು ಕತ್ತರಿಸಬೇಡಿ ಅಥವಾ ಬಾಯಿಯಿಂದ ವಿಷ ಹೀರುವ ಪ್ರಯತ್ನ ಮಾಡಬೇಡಿ ಎಂದು ಮಾಹಿತಿಯನ್ನು ನೀಡಿದ್ದಾರೆ.

ಇದೇ ಸಂದರ್ಭ ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಮಾಳ ಕೃಷ್ಣ ಪ್ರಸಾದ್ ಹಾಗು ಕೃಷಿ ಸಖಿ ಫಾರ್ಮಸ್ ರಿಲೇಶನ್‌ಶಿಪ್ ಅವಾರ್ಡ್ ಪಡೆದ ಪೂರ್ಣಿಮಾ ಪುರಂದರ ಶೆಟ್ಟಿ ಕೊಣಾಜೆ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಇನ್ನು ಈ ಕಾರ್ಯಕ್ರಮದಲ್ಲಿ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರ, ಪೂರ್ಣಗಿರಿ ಮುಲಾರ ಇದರ ಅಧ್ಯಕ್ಷರಾದ ನಾರಾಯಣ ಕಂಬಳಕೋಡಿ, ಶ್ರೀರಾಮ ಭಜನಾ ಮಂದಿರ ಕೋಟಿಪದವು ಇದರ ಅಧ್ಯಕ್ಷರಾದ ಸುಂದರ ಕೋಟ್ಯಾನ್ ತಾಕಟ್ಟೆ, ದಕ್ಷ ಯುವ ಬಳಗ ಗ್ರಾಮಚಾವಡಿಯ ಅಧ್ಯಕ್ಷರಾದ ಕೃಷ್ಣಪ್ರಸಾದ್ ಹಾಗು ಮತ್ತಿತರರು ಉಪಸ್ಥಿತರಿದ್ದರು.

# ತ್ಯಾಜ್ಯ ಘಟಕ ನಿರ್ಮಾಣಕ್ಕೆ ತಲಪಾಡಿ ಗ್ರಾ.ಪಂ. ಯೋಜನೆ: ಸ್ಥಳೀಯರ ಆಕ್ಷೇಪ, ಪ್ರತಿಭಟನೆ



**ಉಳ್ಳಾಲ;** ತಲಪಾಡಿ ಗ್ರಾಮ ಪಂಚಾಯತ್ ಘನ ತ್ಯಾಜ್ಯ ಘಟಕವನ್ನು ತಲಪಾಡಿಯಿಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಕಡೆ ಹೋಗುವ ರಸ್ತೆಯ ಸಮೀಪವಿರುವ ನಾರ್ಲ ಪಡೀಲ್ ಪಶು ಆಸ್ಪತ್ರೆ ಬಳಿ ನಿರ್ಮಾಣ ಮಾಡುವ ಯೋಜನೆಗೆ ಮುಂದಾಗಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯ, ಪರಿಸರ ಮತ್ತು ಮಕ್ಕಳ ಭವಿಷ್ಯಕ್ಕೆ ಗಂಭೀರ ಹಾನಿ ಉಂಟುಮಾಡುವ ಸಾಧ್ಯತೆ ಇದೆ ಎಂದು ಆರೋಪಿಸಿ ಸ್ಥಳೀಯರು ನಾರ್ಲ ಪಡೀಲ್ ಪಶು ಆಸ್ಪತ್ರೆಯ ಬಳಿ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಸ್ಥಳೀಯರಾದ ಯಶು ಪಕ್ಕಳ ಮಾತನಾಡಿ, ಈ ಪ್ರದೇಶದಲ್ಲಿ ಕೇವಲ ಎರಡು ಮೂರು ಮನೆಗಳ ಸಹಿ ಹಾಕಿಸಿಕೊಂಡು ಕಾರ್ಖಾನೆಗಳು ತಲೆ ಎತ್ತಿನಿಂತಿದೆ. ಇದೀಗ ಕಸ ವಿಲೇವಾರಿ ಘಟಕ ನಿರ್ಮಾಣವಾದರೆ ಪರಿಸರದ ಜೊತೆಗೆ ಸಾರ್ವಜನಿಕರು ಸಂಕಷ್ಟವನ್ನು ಎದುರಿಸಬೇಕಾದೀತು. ಅದಲ್ಲದೇ ಘಟಕಕ್ಕೆ ಬೇಲಿ ನಿರ್ಮಿಸುವುದರ ಮೂಲಕ ಭದ್ರತೆ ಮಾಡಿದರೂ, ಇದೇ ಪ್ರದೇಶದಲ್ಲಿ ಗಾಂಜಾ ಅಥವಾ ಇನ್ನಿತರ ಅಕ್ರಮ ಚಟುವಟಿಕೆಗಳನ್ನು ನಡೆಯುವ ಸಾಧ್ಯತೆ ಇದೆ. ಅಂಗನವಾಡಿ ಕೇಂದ್ರ, ಪಶು ಆಸ್ಪತ್ರೆ ವಿರುವ ತಾಣದಲ್ಲಿ ಕಸ ವಿಲೇವಾರಿ ಘಟಕ ಇರೋದಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ನಿಂತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ ಅಂತ ಹೇಳಿದ್ದಾರೆ.

ಪ್ರತಿಭಟನಾ ಸ್ಥಳಕ್ಕೆ ತಲಪಾಡಿ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾದ ಮಂಜಪ್ಪ ಅಗಮಿಸಿದ್ದು, ಅವರಿಗೆ ಸ್ಥಳೀಯರು ಮನವಿಯನ್ನು ಸಲ್ಲಿಸಿದ್ದಾರೆ. ಕಸ ತ್ಯಾಜ್ಯವಿಲೇವಾರಿ ಘಟಕವನ್ನು ತಲಪಾಡಿ ಗ್ರಾಮದ ಬೇರೆ ಪ್ರದೇಶಗಳಲ್ಲಿ ಸ್ಥಾಪಿಸಲು ಸಾಕಷ್ಟು ಸ್ಥಳಾವಕಾಶವಿದ್ದರೂ ಈ ಘಟಕವನ್ನು ನಾರ್ಲ ಪಡೀಲ್ ಶಾಲೆಯ ಬಳಿ ಸ್ಥಾಪಿಸಲು ತಲಪಾಡಿ ಗ್ರಾಮ ಪಂಚಾಯತ್ ಎಲ್ಲಾ ರೀತಿಯ ತಯಾರಿಯನ್ನು ನಡೆಸಿರುವುದು ಖಂಡನೀಯ. ಈ ಪ್ರದೇಶವು ಜನವಸತಿ ಪ್ರದೇಶವಾಗಿದ್ದು ಹಾಗೂ ದಿನಂಪ್ರತಿ ನೂರಾರು ಜನರು ಸಂಚರಿಸುವ ಮಾರ್ಗವನ್ನು ಹೊಂದಿದ್ದು ಮತ್ತು ಸಮೀಪದಲ್ಲಿ ಶಾಲೆ ಕೂಡ ಇದೆ. ಹಾಗಾಗಿ ಈ ಪ್ರದೇಶದಲ್ಲಿ ಘಟಕ ನಿರ್ಮಿಸುವ ವಿಚಾರವನ್ನು ಹಿಂಪಡೆಯುವಂತೆ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮನವಿ ಸ್ವೀಕರಿಸಿ ಮಾತನಾಡಿದ ಕಾರ್ಯದರ್ಶಿ ಅವರು, ಘನ ತ್ಯಾಜ್ಯ ಘಟಕದ ನಿರ್ಮಾಣಕ್ಕೆ ಕೇವಲ ಜಾಗದ ಗುರುತನ್ನು ಹಾಕಿದ್ದೇವೆ. ನಿರ್ಮಿಸುವುದರ ಬಗ್ಗೆ ಚರ್ಚೆಯಾಗಬೇಕಷ್ಟೇ. ಇದೀಗ ಘನ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಗ್ರಾಮ ಪಂಚಾಯತಿಯ ಘಟಕವಿದ್ದರೇ ಉತ್ತಮ ಎಂಬ ಕಲ್ಪನೆಯಲ್ಲಿ ನಿರ್ಮಾಣಕ್ಕೆ ಮುಂದಾಗಿದೆ. ತ್ಯಾಜ್ಯಗಳನ್ನು ವರ್ಷಾನುಗಟ್ಟಲೆ ಇಡುವುದಿಲ್ಲ. ವಾರದಲ್ಲಿ ಒಮ್ಮೆ ಶಂಭೂರು ಘಟಕಕ್ಕೆ ಇಲ್ಲಿನ ತ್ಯಾಜ್ಯಗಳನ್ನು ಕೊಂಡೊಯ್ಯಲು ವಾಹನಗಳು ಬರುತ್ತವೆ. ಈ ಬಗ್ಗೆ ಗ್ರಾಮ ಸಭೆ ನಡೆಸಿ ಗ್ರಾಮಸ್ಥರ ಅಭಿಪ್ರಾಯವನ್ನು ಸಂಗ್ರಹಿಸಿಸುತ್ತೇವೆ ಎನ್ನುತ್ತಾಲೇ ಸ್ಥಳೀಯರು, ಯಾವುದೇ ಗ್ರಾಮ ಸಭೆ, ಚರ್ಚೆಯ ಅಗತ್ಯವಿಲ್ಲ. ನಾವು ಇಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಅವಕಾಶವನ್ನು ಮಾಡಿಕೊಡುವುದಿಲ್ಲ ಎಂದೇ ಗಟ್ಟಿ ಧ್ವನಿಯಲ್ಲಿ ಹೇಳಿದ್ದಾರೆ. ಬಳಿಕ ಕಾರ್ಯದರ್ಶಿಗಳು ವಾಪಾಸ್ಸಾದರು.

ಈ ಪ್ರತಿಭಟನೆಯಲ್ಲಿ ತಲಪಾಡಿ ಗ್ರಾಮ ಪಂಚಾಯತ್ ಸದಸ್ಯರು ವೈಭವ್ ಶೆಟ್ಟಿ, ಪ್ರಶಾಂತ್, ಶ್ರೀರಾಮ ಭಜನಾ ಮಂಡಳಿಯ ಅಧ್ಯಕ್ಷ ಸುದೀಪ್ ಶೆಟ್ಟಿ ನಾರ್ಲ, ರಾಜೇಶ್ ಕೊಟ್ಟಾರಿ, ರಿಕ್ಷಾ ಚಾಲಕ–ಮಾಲಕರ ಸಂಘದ ಪದಾಧಿಕಾರಿಗಳು, ಸದಸ್ಯರು, ಸ್ಥಳೀಯರು ಸೇರಿದಂತೆ ಅನೇಕರು ಭಾಗಿಯಾಗಿದ್ದಾರೆ.

# ಕಾಪಿಕಾಡ್ ಶ್ರೀಉಮಾಮಹೇಶ್ವರಿ ದೇವಳಕ್ಕೆ 1 ಲಕ್ಷ ದೇಣಿಗೆ ನೀಡಿದ ಯು.ಟಿ.ಖಾದರ್



**ಉಳ್ಳಾಲ:** ಉಳ್ಳಾಲ ಕಾಪಿಕಾಡ್ ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಹಾಗೂ ವರ್ಷಾವಧಿ ಜಾತ್ರಾಮಹೋತ್ಸವ ಪ್ರಯುಕ್ತ ಕ್ಷೇತ್ರದಲ್ಲಿ ಸಮಿತಿಯ ಗೌರವಾಧ್ಯಕ್ಷ ಯು.ಟಿ.ಖಾದರ್ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸ್ಪೀಕರ್ ಮಾತನಾಡಿ, ಫೆ.1ರಿಂದ ಬ್ರಹ್ಮಕಲಶ, ಜಾತ್ರಾಮಹೋತ್ಸವ ವಿಜೃಂಭಣೆಯಿಂದ ನಡೆಯಲಿದೆ. ಕ್ಷೇತ್ರದ ಅಭಿವೃದ್ಧಿಗೆ ಸರಕಾರದಿಂದ ಅನುದಾನವನ್ನು ಒದಗಿಸಲು ಪ್ರಯತ್ನಿಸುತ್ತೇನೆ. ವೈಯಕ್ತಿಯ ನೆಲೆಯಲ್ಲಿ 1ಲಕ್ಷ ರೂಪಾಯಿ ಕ್ಷೇತ್ರಕ್ಕೆ ದೇಣಿಗೆಯಾಗಿ ನೀಡುವುದಾಗಿ ಹೇಳಿದರು. ಉಮಾಮಹೇಶ್ವರಿ ಕ್ಷೇತ್ರ ಬೇರೆ ಬೇರೆ ಭಾಗಗಳಿಂದ ಭಕ್ತಾದಿಗಳು ಆಗಮಿಸುವಂತಹ ಪ್ರವಾಸಿ ಯಾತ್ರಿಕರ ಕೇಂದ್ರವಾಗಲಿ ಎನ್ನುತ್ತಾ ಉಳ್ಳಾಲ ಕ್ಷೇತ್ರ ಸೌಹಾರ್ದತೆಯ ಗೂಡು ಎಂದರು.

ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಸುರೇಶ್ ಭಟ್ನಗರ ಮಾತನಾಡಿ, ಉಮಾಮಹೇಶ್ವರಿ ಕ್ಷೇತ್ರ ನವೀಕೃತಗೊಂಡ ದೇವಳವಾಗಿದ್ದು, ಈ ಭಾಗದಲ್ಲಿ ಸಮಸ್ಯೆಗಳು ಉಲ್ಬಣಿಸಿದಾಗ ಅಷ್ಟಮಂಗಳ ಪ್ರಶ್ನೆಯಲ್ಲಿ ಕಂಡು ಬಂದಂತೆ ನಿರ್ಮಿಸಿದ ದೇವಸ್ಥಾನವಾಗಿದೆ. ಫೆ.1ರಿಂದ ನಡೆಯಲಿರುವ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ, ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುವಂತೆ ಕೋರಿದರು.

ಈ ಸಂದರ್ಭ ಉಳ್ಳಾಲ ತಾಲೂಕಿನ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಸೇವಾ ಸಮಿತಿಯ ಅಧ್ಯಕ್ಷರಾದ ದಿನೇಶ್ ರೈ ಕಳ್ಳಿಗೆ, ಪ್ರಧಾನ ಕಾರ್ಯದರ್ಶಿಯಾದ ಗಣೇಶ್ ಕಾಪಿಕಾಡ್, ಆಡಳಿತ ಮೊಕ್ತೇಸರರಾದ ಎ.ಜೆ.ಶೇಖರ್, ದಿನೇಶ್ ಕೆ ಅತ್ತಾವರ, ಟಿ.ರಘುರಾಮ್ ಶೆಟ್ಟಿ, ಪ್ರಧಾನ ಅರ್ಚಕರಾದ ಪರಮೇಶ್ವರ ಜೋಷಿ, ಗೌರವ ಸಲಹೆಗಾರರು, ಸಮಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಸೋಮೇಶ್ವರ ಅಂಚನ್ ಮೂಲಸ್ಥಾನ ಗುರಿಕಾರ ಮನೆಯಲ್ಲಿ ವಾರ್ಷಿಕ ಪ್ರತಿಷ್ಠಾ ಮಹೋತ್ಸವ, ಅಶ್ಲೇಷಾ ಬಲಿಪೂಜೆ ಹಾಗೂ ನೇಮೋತ್ಸವ

**ಸೋಮೇಶ್ವರ :** ಅಂಚನ್ ಮೂಲಸ್ಥಾನ ಗುರಿಕಾರಮನೆ, ಸೋಮೇಶ್ವರದ ಶ್ರೀ ಕಂಡ ಪಂಜುರ್ಲಿ, ಧೂಮಾವತಿ, ಬಂಟ ಮೈಸಂದಾಯ, ಕಲ್ಲುರ್ಟಿ ಪಂಜುರ್ಲಿ ಹಾಗೂ ಪರಿವಾರ ದೈವಗಳ ಧರ್ಮಚಾವಡಿ (ಗುರಿಕಾರ ಮನೆ), ಅಂಚೆ ಕೋಟೆಕಾರು, ಸೋಮೇಶ್ವರ (ಉಳ್ಳಾಲ ರೈಲ್ವೆ ಗೇಟಿನ ಹತ್ತಿರ), ಇಲ್ಲಿ ಫೆಬ್ರವರಿ 6ರಿಂದ 9ರವರೆಗೆ ವಾರ್ಷಿಕ ಪ್ರತಿಷ್ಠಾ ಮಹೋತ್ಸವ, ಅಶ್ಲೇಷಾ ಬಲಿಪೂಜೆ ಹಾಗೂ ಶ್ರೀದೈವಗಳ ನೇಮೋತ್ಸವಗಳು ಭಕ್ತಿಭಾವದಿಂದ ಜರಗಲಿವೆ.



ಫೆಬ್ರವರಿ 6ರ ಶುಕ್ರವಾರ ಬೆಳಿಗ್ಗೆ 7 ಗಂಟೆಯಿಂದ ದೈವಗಳಿಗೆ ಸಾನಿಧ್ಯ ಕಲಶ ಪೂಜೆ, ಕಲಶಾಭಿಷೇಕ, ಪನಿಯಾರ ಸಮರ್ಪಣೆ, ನಾಗ ಸಾನಿಧ್ಯದಲ್ಲಿ ಕಲಶ, ತನುಸೇವೆ ಹಾಗೂ ಅಶ್ಲೇಷಾ ಬಲಿ ಉತ್ಸವಗಳು ನಡೆಯಲಿವೆ. ಮಧ್ಯಾಹ್ನ 12 ಗಂಟೆಗೆ ಶ್ರೀ ವೆಂಕಟರಮಣ ದೇವರ ಮುಡಿತು ಕಟ್ಟುವ ಕಾರ್ಯಕ್ರಮ ಜರುಗಲಿದ್ದು, ಮಧ್ಯಾಹ್ನ 12.30ಕ್ಕೆ ಮಹಾಪೂಜೆ ನಂತರ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ 7 ಗಂಟೆಗೆ ಅಣ್ಣಪ್ಪ ಪಂಜುರ್ಲಿ, ಧೂಮಾವತಿ ಹಾಗೂ ಬಂಬ ಮಹಿಷಂತಾಯ ದೈವಗಳಿಗೆ ನೇಮೋತ್ಸವ ಜರುಗಲಿದೆ.

ಫೆಬ್ರವರಿ 7ರ ಶನಿವಾರ ರಾತ್ರಿ 7 ಗಂಟೆಯಿಂದ ಕಲ್ಲುರ್ಟಿ ಪಂಜುರ್ಲಿ ಹಾಗೂ ಗುಳಿಗ ದೈವಗಳಿಗೆ ನೇಮೋತ್ಸವ ನಡೆಯಲಿದೆ. ಫೆಬ್ರವರಿ 9ರ ಭಾನುವಾರ ಸಂಜೆ 5 ಗಂಟೆಗೆ ಶ್ರೀ ದೈವಗಳಿಗೆ ವಾರ್ಷಿಕ ಪರ್ವ ಜರಗಲಿದೆ.

ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಿಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಅನುಗ್ರಹ ಪಡೆಯಬೇಕೆಂದು ಧರ್ಮಚಾವಡಿ ಅಧ್ಯಕ್ಷ ಶ್ರೀ ಗೋಪಾಲ್ ಅಂಚನ್ ಬಡಕಬೈಲು ಹಾಗೂ ಸರ್ವಸದಸ್ಯರು ಮತ್ತು ಆಡಳಿತ ಸಮಿತಿ ಕೋರಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9880761484 ಅನ್ನು ಸಂಪರ್ಕಿಸಬಹುದು.

# ಕೋಟೆಕಾರು: ನೆಲ್ಲಿಸ್ಥಳದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

**ಕೋಟೆಕಾರು :** ಇಲ್ಲಿನ ನೆಲ್ಲಿಸ್ಥಳ ಶ್ರೀ ಕಾಳಿಕಾಂಬಾ ವಿಶ್ವಕರ್ಮ ಸೇವಾ ಸಂಘದ ವತಿಯಿಂದ ಇದೇ ಬರುವ ಫೆಬ್ರವರಿ 08, 2026 (ಆದಿತ್ಯವಾರ) ಸಂಜೆ ಗಂಟೆ 6.00ರಿಂದ ಶ್ರೀ ಕ್ಷೇತ್ರ ನೆಲ್ಲಿಸ್ಥಳದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಭಕ್ತಿಭಾವದಿಂದ ಜರಗಲಿದೆ.



ಈ ಧಾರ್ಮಿಕ ಕಾರ್ಯಕ್ರಮವು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿಯನ್ನು ಬೆಳೆಸುವ ಉದ್ದೇಶದಿಂದ ಆಯೋಜಿಸಲಾಗಿದ್ದು, ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಭಕ್ತರು ಕುಟುಂಬ ಸಮೇತರಾಗಿ ಆಗಮಿಸಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುವಂತೆ ಸಂಘದ ವತಿಯಿಂದ ಕೋರಲಾಗಿದೆ. ಈ ಪುಣ್ಯ ಕಾರ್ಯಕ್ಕೆ ಸರ್ವರಿಗೂ ಆದರದ ಸ್ವಾಗತವನ್ನು ಕೋಟೆಕಾರು ನೆಲ್ಲಿಸ್ಥಳ ಶ್ರೀ ಕಾಳಿಕಾಂಬಾ ವಿಶ್ವಕರ್ಮ ಸೇವಾ ಸಂಘ ತಿಳಿಸಿದೆ.

# ಪ್ರವಾಸಿ ಮಂದಿರದ ಶಂಕು ಸ್ಥಾಪನೆ

↗1ನೇ ಪುಟದಿಂದ

ಸ್ಥಾಪನೆಯಾಗಿ ಹಿಂದೆ ಹಿರಿಯ ನಾಯಕರಾದ ವೀರಪ್ಪ ಮೊಯ್ಲಿ ಹಾಗೂ ತಂದೆಯವರಾದ ಹಾಜಿ ಯು.ಟಿ.ಫರೀದ್ ಅವರ ಪರಿಶ್ರಮ ಅಗಾಧ. ಅಂದು ವಿ.ವಿ ಸ್ಥಾಪನೆಗೊಂಡ ಪರಿಣಾಮ ಇಂದು ವಿದ್ಯಾಸಂಸ್ಥೆಗಳು ತಲೆಎತ್ತಿನಿಂತಿದೆ. ಇದೀಗ ಪ್ರವಾಸಿ ಮಂದಿರ ನಿರ್ಮಾಣಗೊಳ್ಳಲಿದೆ. ಮುಂದಿನ ದಿನಗಳಲ್ಲಿ ಮುಡಿಪು ಭಾಗದಲ್ಲಿ ಹೆಲಿಪ್ಯಾಡ್ ಹಾಗೂ ಗೆಸ್ಟ್ ಹೌಸ್ ನಿರ್ಮಿಸುವ ಬಗ್ಗೆ ಯೋಜನೆ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ಈ ಸಂದರ್ಭ ಅಚ್ಯುತ ಗಟ್ಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಉಳ್ಳಾಲ ತಾಲೂಕು ವಿದ್ಯಾಸಂಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುವ ಪ್ರದೇಶ. ಉಳ್ಳಾಲ ತಾಲೂಕು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದರಿ ತಾಲೂಕು ಎನಿಸಿಕೊಳ್ಳುವ ಲಕ್ಷಣ ಕಾಣುತ್ತಿದೆ. ಇದಕ್ಕೆಲ್ಲ ಕಾರಣ ಉಳ್ಳಾಲ ಕ್ಷೇತ್ರದ ಶಾಸಕರಾದ ಯು.ಟಿ.ಖಾದರ್ ಫರೀದ್. ಹೌದು, ಸುಮಾರು ಕೋಟಿ ವೆಚ್ಚದಲ್ಲಿ ಅಭಿವೃದ್ಧಿಯ

> **ನಾನು ನೆಮ್ಮದಿಯಿಂದ ಕರ್ತವ್ಯ ನಿರ್ವಹಿಸಲು ಹಾಗೂ ಯಶಸ್ಸಿಗೆ ಕಾರ್ಯಕರ್ತರು ಕಾರಣ. ತಳಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಆಲಿಸಿ ಅದನ್ನು ನನ್ನ ಕಿವಿಗೆ ತಲುಪಿಸುವ ಕಾರ್ಯವನ್ನು ಮಾಡುವ ಮುಖೇನ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯ.**
> ■ **ಯು.ಟಿ.ಖಾದರ್ ಫರೀದ್,**
> **ವಿಧಾನ ಸಭಾಧ್ಯಕ್ಷರು**

ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ. ಮುಂದಕ್ಕೆ ಇವರು ರಾಜ್ಯದ ಮುಖ್ಯಮಂತ್ರಿ ಯಾದರೆ ನಾವೆಲ್ಲರೂ ಸ್ವೀಕರಿಸೋಣ ಅಂತ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಗಟ್ಟಿ, ಮುಡಾದ ಅಧ್ಯಕ್ಷರಾದ ಸದಾಶಿವ ಉಳ್ಳಾಲ್, ಕಣಚೂರು ಸಂಸ್ಥೆಯ ಸ್ಥಾಪಕಾಧ್ಯಕ್ಷರಾದ ಡಾ.ಹಾಜಿ ಯು.ಕೆ ಮೋನು, ಇಬ್ರಾಹೀಂ ಕೊಡಿಜಾಲ್, ಹಿರಿಯರಾದ ಟಿ.ಎಸ್ ಅಬ್ದುಲ್ಲಾ, ಸಲಾಂ ಉಚ್ಚಿಲ, ಚಂದ್ರಿಕಾ ರೈ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# "ನಮ್ಮ ನಡೆ ಮಂಗಳೂರು ವಿಶ್ವವಿದ್ಯಾನಿಲಯದ ಕಡೆ" ಹೊಸ ಪರಿಕಲ್ಪನೆಗೆ ಕುಲಪತಿ ಪ್ರೊ.ಪಿ.ಎಲ್. ಧರ್ಮ ಚಾಲನೆ

**ಕೊಣಾಜೆ:** ನಮ್ಮ ಪರಿಸರದಲ್ಲಿ ದೇವಸ್ಥಾನ, ಮಸೀದಿ, ಚರ್ಚ್ ಗಳ ಕಡೆ ಭಕ್ತರ ನಡೆ ಎಂಬುವುದನ್ನು ನೋಡುತ್ತಾ ಇರುತ್ತೇವೆ. ಇದೇ ರೀತಿ ವಿಶ್ವವಿದ್ಯಾನಿಲಯ ಕೂಡಾ ಒಂದು ಪವಿತ್ರ ಕ್ಷೇತ್ರ ಇದ್ದಂತೆ. ಆದ್ದರಿಂದ ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಗೆ ಮಂಗಳೂರು ವಿವಿಯ ಸೌಲಭ್ಯಗಳು, ಕ್ಯಾಂಪಸ್ ಪರಿಸರವನ್ನು ಪರಿಚಯಿಸುವ ನಿಟ್ಟಿನಲ್ಲಿ " ನಮ್ಮ ನಡೆ ಮಂಗಳೂರು ವಿಶ್ವವಿದ್ಯಾನಿಲಯದ ಕಡೆ" ಎಂಬ ವಿನೂತನ ಯೋಜನೆಯನ್ನು ರೂಪಿಸಲಾಗಿದೆ ಎಂದು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ಹೇಳಿದರು. ಅವರು ಬುಧವಾರ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರ ಬಂಗಲೆಯಲ್ಲಿ ಮಂಗಳೂರಿನ ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್ ಇದರ ನ್ಯೂಸ್ ಲೆಟರ್ ಬಿಡುಗಡೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ನೂತನ ಪರಿಕಲ್ಪನೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್ ತಮ್ಮ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರವನ್ನು ಮಂಗಳೂರು ವಿವಿ ಕ್ಯಾಂಪಸ್ ನಲ್ಲಿ ಆಯೋಜಿಸುವ ಮೂಲಕ ವಿವಿ ಆವರಣದಲ್ಲಿ ಅನೇಕ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡು ಇಲ್ಲಿಯ ಎಲ್ಲಾ ವಿಭಾಗಗಳು, ಲ್ಯಾಬ್, ಸಂಶೋಧನಾ ಕೇಂದ್ರಗಳು,ಗ್ರಂಥಾಲಯ ಸೇರಿದಂತೆ ಸಸ್ಯೋದ್ಯಾನ ಮೊದಲಾದವುಗಳ ಬಗ್ಗೆ ಮಾಹಿತಿಯನ್ನು ಅರಿತುಕೊಂಡಿದ್ದಾರೆ. ಇವರ ಪ್ರೇರಣೆಯಂತೆ ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳು ಕೂಡಾ ಕ್ಯಾಂಪಸ್ ಗೆ ಆಕರ್ಷಿಸುವ ನಿಟ್ಟಿನಲ್ಲಿ ಈ ವಿನೂತನ ಪರಿಕಲ್ಪನೆಯನ್ನು ರೂಪಿಸಲಾಗಿದೆ ಎಂದರು.



ವಿವಿ ಕ್ಯಾಂಪಸ್‌ನಲ್ಲಿ ಅಂತರಾಷ್ಟ್ರೀಯ ಮಟ್ಟದ ಲ್ಯಾಬ್, ಸಂಶೋಧನಾ ಕೇಂದ್ರಗಳೂ ಇವೆ. ಈ ನೂತನ ಪರಿಕಲ್ಪನೆಯ ಮೂಲಕ ವಿದ್ಯಾರ್ಥಿಗಳಿಗೆ ಇವೆಲ್ಲದರ ಮಾಹಿತಿಯನ್ನು ಪಡೆಯಲು ಅವಕಾಶವಾಗಲಿದೆ ಎಂದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ಗಣೇಶ್ ಸಂಜೀವ್, ಪರೀಕ್ಷಾಂಗ ಕುಲಸಚಿವರಾದ ಪ್ರೊ.ದೇವೇಂದ್ರಪ್ಪ, ಹಣಕಾಸು ಅಧಿಕಾರಿ ಪಂಚಲಿಂಗ ಸ್ವಾಮಿ, ವಿಶ್ರಾಂತ ಪ್ರಾಧ್ಯಾಪಕಿ ಡಾ.ಶಾನಿ, ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್‌ನ ಅಧ್ಯಕ್ಷರಾದ ಡಾ.ರಾಘವೇಂದ್ರ ಹೊಳ್ಳ ಮೊದಲಾದವರು ಉಪಸ್ಥಿತರಿದ್ದರು. ಮಂಗಳೂರು ವಿವಿಯ ಕ್ಯಾಂಪಸ್‌ನಲ್ಲಿ ಸುಮಾರು ಮೂರು ಎಕರೆಗಿಂತಲೂ ಹೆಚ್ಚಿನ ವಿಸ್ತಾರ ಪ್ರದೇಶದಲ್ಲಿರುವ ಹಾಗೂ ಅಪರೂಪದ ಸಸ್ಯ,ಮರಗಳು, ಔಷಧೀಯ ಸಸ್ಯಗಳಿರುವ ಸಸ್ಯೋದ್ಯಾನವನ್ನು ಸ್ವಸ್ತಿಕ ಕಾಲೇಜು ರೋಟರಿ ಕ್ಲಬ್‌ನ ಸಹಕಾರದೊಂದಿಗೆ ಕುಲಪತಿಯವರ ಮಾರ್ಗದರ್ಶನದೊಂದಿಗೆ ಸಂರಕ್ಷಣೆ, ಅಭಿವೃದ್ಧಿ ಪಡಿಸುವ ಯೋಜನೆ ರೂಪಿಸಲಾಗಿದೆ. ಡಾ.ರಾಘವೇಂದ್ರ ಹೊಳ್ಳ ಅಧ್ಯಕ್ಷರು, ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್

# ಡಾ.ಸಾಯಿಗೀತಾ, ರಾಜಶ್ರೀ ಉಳ್ಳಾಲ್‌ಗೆ ಅಬ್ಬಕ್ಕ ಪ್ರಶಸ್ತಿ

↗1ನೇ ಪುಟದಿಂದ

ಪದವಿಯನ್ನು, ಹಾಗು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಭರತನಾಟ್ಯದಲ್ಲಿ ಎಂಬಿಎ ಪದವಿಯನ್ನು ಪಡೆದುಕೊಂಡಿದ್ದಾರೆ. ವಿದುಷಿ ರಾಜಶ್ರೀ ಉಳ್ಳಾಲ್ ಅವರು ರಾಜ್ಯ ಸರ್ಕಾರ ನಡೆಸುವ ಭರತನಾಟ್ಯ ಪ್ರಾಥಮಿಕ, ಮಾಧ್ಯಮಿಕ, ವಿದ್ವತ್ ಪರೀಕ್ಷೆಗಳಿಗೆ ಪರೀಕ್ಷಕರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮಂಗಳೂರು ವಿವಿಯಲ್ಲಿ ಲಲಿತಕಲಾ ವಿಭಾಗದ ಅಧ್ಯಯನ ಮಂಡಳಿಯ ಸದಸ್ಯರಾಗಿ, ನೃತ್ಯಕಲಾ ಪಠ್ಯವಸ್ತು ತಯಾರಿಕೆಯ ಸದಸ್ಯರಾಗಿ ನಿಯೋಜನೆಗೊಂಡಿದ್ದಾರೆ. ಭಾರತದಲ್ಲಿ ಮಾತ್ರವಲ್ಲದೇ ಗಲ್ಫ್ ರಾಷ್ಟ್ರಗಳಲ್ಲಿ ನೃತ್ಯ ಪ್ರದರ್ಶಿಸಿ ಹಲವಾರು ಸನ್ಮಾನಗಳನ್ನು ಪಡೆದುಕೊಂಡಿದ್ದಾರೆ. ಅವರು ತಮ್ಮ ನೃತ್ಯ ಪ್ರತಿಭೆ ಮತ್ತು ಸೇವೆಗಾಗಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ

ದೇರಳಕಟ್ಟೆಯ ನಿಟ್ಟೆ ವಿಶ್ವವಿದ್ಯಾಲಯದ ಮಾನವಿಕ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಹಾಗೂ ಇದೇ ಸಂಸ್ಥೆಯಲ್ಲಿ ಡಾ.ಕೆ.ಆರ್.ಶೆಟ್ಟಿ ತುಳು ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ



**ಡಾ.ಸಾಯಿಗೀತಾ ಅವರು ಆಂಧ್ರಪ್ರದೇಶದ ಕೊಪ್ಪಮ್ಮುನ ದ್ರಾವಿಡ ವಿಶ್ವವಿದ್ಯಾನಿಲಯದಲ್ಲಿ ತುಳುವಪರಿಪುಡ್ ಪೊಣ್ಣ ಮೂಲಕಟ್ಟ್ ಎಂಬ ವಿಚಾರದ ಬಗ್ಗೆ ಅಧ್ಯಯನ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ.**

ತುಳುಸಾಹಿತ್ಯ ಪದಕೋಶ ರಚನೆಯಲ್ಲಿ ಅಗಾಧವಾದ ಕಾಳಜಿ, ಆಸಕ್ತಿಯನ್ನು ಹೊಂದಿರುವ ಡಾ.ಸಾಯಿಗೀತಾ ಅವರು ಆಂಧ್ರಪ್ರದೇಶದ ಕೊಪ್ಪಮ್ಮುನ ದ್ರಾವಿಡ ವಿಶ್ವವಿದ್ಯಾನಿಲಯದಲ್ಲಿ ತುಳುವಪರಿಪುಡ್ ಪೊಣ್ಣ ಮೂಲಕಟ್ಟ್ ಎಂಬ ವಿಚಾರದ ಬಗ್ಗೆ ಅಧ್ಯಯನ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ. ತುಳುಭಾಷೆಯಲ್ಲಿ ಬರೆದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮೊದಲ ಪ್ರೌಢ ಪ್ರಬಂಧ ಇದಾಗಿದ್ದು, ಗಮನರ್ಹವಾಗಿದೆ. ಕನ್ನಡ ಎಂಎ ಪದವೀಧರರಾಗಿದ್ದು, ಕಮ್ಯೂನಿಕೇಟಿವ್ ಇಂಗ್ಲೀಷ್ ಹಾಗು ಮಾಸ್ ಕಮ್ಯೂನಿಕೇಶನ್ ಆ್ಯಂಡ್ ಜರ್ನಲಿಸಂ ವಿಷಯಗಳಲ್ಲಿ ಪೋಸ್ಟ್ ಗ್ರಾಜುವೇಟ್ ಡಿಪ್ಲೋಮಾ ಮಾಡಿದ್ದಾರೆ. ಡಾ.ಸಾಯಿಗೀತಾ ಅವರು ಸಂಶೋಧನೆ,ಪದಕೋಶ, ಕವನಸಂಕಲನ, ಜೀವನಚರಿತ್ರೆ, ಭಾಷೆ ಕಲಿಯುವಿಕೆಯ ಪಠ್ಯ, ಅನುವಾದ ಹಾಗೂ ಸಂಪಾದಿತ ಪುಸ್ತಕಗಳು ಸೇರಿ 70ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು ಪ್ರಶಸ್ತಿಗಳನ್ನು ಹರಸಿದವರಲ್ಲ. ಆದ್ರೆ ಇವರ ಸಾಹಿತ್ಯದ ಸಾಧನೆಯನ್ನು ಗುರುತಿಸಿ ಹಲವಾರು ಪ್ರಶಸ್ತಿಗಳು ಇವರ ಮುಡಿಗೇರಿದೆ. ಇದೀಗ ಅವರ ಸಾಹಿತ್ಯದ ಅಗಣಿತ ಸೇವೆಗಾಗಿ ವೀರರಾಣಿ ಅಬ್ಬಕ್ಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

# ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ (ರಿ.)

## ವೀರರಾಣಿ ಅಬ್ಬಕ್ಕ ಉತ್ಸವ 2025–26



ಅಧ್ಯಕ್ಷತೆ
ಸನ್ಮಾನ್ಯ
ಡಾ. ಯು.ಟಿ. ಖಾದರ್ ಫರೀದ್,
ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಹಾಗೂ ಶಾಸಕರು ಮಂಗಳೂರು ಕ್ಷೇತ್ರ

ಪ್ರಶಸ್ತಿ ಪ್ರದಾನ :
ಸನ್ಮಾನ್ಯ
ಡಾ. ಎಮ್.ಎನ್. ರಾಜೇಂದ್ರಕುಮಾರ್
ಅಧ್ಯಕ್ಷರು, ಎಸ್‌ಸಿಡಿಸಿಸಿ ಬ್ಯಾಂಕ್ ಮಂಗಳೂರು

ಪ್ರಧಾನ ಅಭ್ಯಾಗತರು
ಸನ್ಮಾನ್ಯ
ಶ್ರೀ ಡಿ.ವಿ. ಸದಾನಂದ ಗೌಡ
ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾಜಿ ಕೇಂದ್ರ ಸಚಿವರು

ಬಿನ್ನವತ್ತಳೆ ಪ್ರದಾನ
ಸನ್ಮಾನ್ಯ
ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ
ಮಾನ್ಯ ಸಂಸದರು
ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ

**ಉತ್ಸವ ಉದ್ಘಾಟನೆ**
ಸನ್ಮಾನ್ಯ ಶ್ರೀಮತಿ ಅನಿತಾ ಸುರೇಂದ್ರ ಕುಮಾರ್, ರಾಣಿ ಅಬ್ಬಕ್ಕ ವಂಶಸ್ಥರು, ಶ್ರೀಕ್ಷೇತ್ರ ಧರ್ಮಸ್ಥಳ

**ಸಾಹಿತ್ಯ / ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ**
ಸನ್ಮಾನ್ಯ ಶ್ರೀ ಆಶಾಜ್ಯೋತಿ ರೈ, ಅಧ್ಯಕ್ಷರು, ಆಶಾ ಚಾರಿಟೆಬಲ್ ಟ್ರಸ್ಟ್

ಸ್ಥಳ: ಡಾ. ಅಂಬೇಡ್ಕರ್ ರಂಗಮಂದಿರ, ತೊಕ್ಕೊಟ್ಟು ಒಳಪೇಟೆ

ವೀರರಾಣಿ ಅಬ್ಬಕ್ಕ ಪ್ರಶಸ್ತಿ ಮಾನ್ಯರು (ಸಾಹಿತ್ಯ)
ಡಾ। ಸಾಯಿಗೀತಾ

ವೀರರಾಣಿ ಅಬ್ಬಕ್ಕ ಪ್ರಶಸ್ತಿ ಮಾನ್ಯರು (ಕಲೆ)
ವಿದುಷಿ ಶ್ರೀಮತಿ ರಾಜಶ್ರೀ ಉಳ್ಳಾಲ್

ಫೆಬ್ರವರಿ 14 ಶನಿವಾರ 2026

**ಹುಟ್ಟು ಹಬ್ಬದ 80ನೇ ವರ್ಷಾಚರಣೆಯ ಗೌರವ ಸನ್ಮಾನ**
ಸನ್ಮಾನ್ಯ ಶ್ರೀ ಕೆ. ಜಯರಾಮ ಶೆಟ್ಟಿ,
ಮಾಜಿ ಶಾಸಕರು ಹಾಗೂ ಸ್ವಾಗತಾಧ್ಯಕ್ಷರು, ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ (ರಿ.)

ಮಧ್ಯಾಹ್ನ ಗಂಟೆ 2.00 : ವೇದಿಕೆ ಮುಹೂರ್ತ ಮತ್ತು ಅಬ್ಬಕ್ಕ ಪ್ರತಿಮೆಗೆ ಮಾಲಾರ್ಪಣೆ
ಮಧ್ಯಾಹ್ನ ಗಂಟೆ 2.00-3.00 : 'ನಾಡು – ನುಡಿ ಗೀತೋತ್ಸವ'
ಪ್ರಸ್ತುತಿ : ಶ್ರೀಮತಿ ಯಶಸ್ವಿನಿ ಉಳ್ಳಾಲ್ – ಸ್ವರ ಮಾಧುರ್ಯ ತಂಡ
ಮಧ್ಯಾಹ್ನ ಗಂಟೆ 3.00-3.30 : ಬ್ಯಾರಿ ಕಾರ್ಯಕ್ರಮ
ದಫ್ ಕಾರ್ಯಕ್ರಮ :ಅಲ್ ಅಝ್ಹರಿಯಾ ದಫ್ ತಂಡ
ಬ್ಯಾರಿ ಹಾಡುಗಳ ಸಂಭ್ರಮ: ಹುಸೈನ್ ಕಾಟಿಪಳ್ಳ ಬಳಗ, ಮಂಗಳೂರು
ಸಹಯೋಗ : ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ
ಮಧ್ಯಾಹ್ನ ಗಂಟೆ 3.30-4.00 : ಸಾಂಸ್ಕೃತಿಕ ಕಾರ್ಯಕ್ರಮ
ಪ್ರಸ್ತುತಿ : ಯುವವಾಹಿನಿ (ರಿ.) – ಕೊಲ್ಯ ಘಟಕ

ಸಂಜೆ ಗಂಟೆ 4.00 - 4.30 : ಕೊಂಕಣಿ ಕಾರ್ಯಕ್ರಮ
ಕುಡುಂಬಿ ನೃತ್ಯ
ಸಹಯೋಗ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ
ಸಂಜೆ ಗಂಟೆ 4.30 - 5.00 : ಹಾಸ್ಯ ವೈವಿಧ್ಯ
ಬಲೇ ತೆಲಿಪಾಲೆ
ಪ್ರಸ್ತುತಿ : ಬಲೇ ತೆಲಿಪಾಲೆ ಖ್ಯಾತಿಯ ಪ್ರಶಂಸಾ ಕಾಪು ತಂಡ
ಸಂಜೆ ಗಂಟೆ 5.00 - 5.30 : ಸ್ವಾಗತ ನೃತ್ಯ
ಪ್ರಸ್ತುತಿ : ವಿದುಷಿ ಶ್ರೀಮತಿ ರೇಶ್ಮಾ ನಿರ್ಮಲ್ ಭಟ್
ನೃತ್ಯಲಹರಿ ನಾಟ್ಯಾಲಯ (ರಿ.), ಪಜೀರು

**ಸಂಜೆ 5.30ರಿಂದ ರಾತ್ರಿ 7:30ರ ವರೆಗೆ ಸಭಾ ಕಾರ್ಯಕ್ರಮ**

ರಾತ್ರಿ ಗಂಟೆ 7.30 - 8.00 :
ಮೂಲ ಜಾನಪದ ವೈವಿಧ್ಯಮಯ ನೃತ್ಯ
ಸಹಯೋಗ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಪ್ರಸ್ತುತಿ : ಕಲಾಭಿ, ಮಂಗಳೂರು

ರಾತ್ರಿ ಗಂಟೆ 8.00 - 8.30 :
ತುಳು ನಾಟಕ – 'ಜಾಗರ್ತೆ'
ಸಹಯೋಗ : ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ನಿರ್ದೇಶನ : ದಿನೇಶ್ ಅತ್ತಾವರ

ರಾತ್ರಿ ಗಂಟೆ 8.30 - 9.30 :
ಯಕ್ಷ ನೃತ್ಯ
ಪ್ರಸ್ತುತಿ : ಪಾಂಚಜನ್ಯ ಯಕ್ಷ ನಾಟ್ಯಾಲಯ, ಮಂಜನಾಡಿ –
ನಿರ್ದೇಶನ : ಅಶ್ವಥ್ ಮಂಜನಾಡಿ

ಸಂಪರ್ಕ ವಿಳಾಸ : ದಿನಕರ ಉಳ್ಳಾಲ್, ಅಧ್ಯಕ್ಷರು, ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ (ರಿ.)
ಅಪ್ಪಯ್ಯ ಮ್ಯಾನ್ಷನ್, ತೊಕ್ಕೊಟ್ಟು ಒಳಪೇಟೆ ಪೆರ್ಮನ್ನೂರು ಉಳ್ಳಾಲ, ದ.ಕ. - 575 017
ಮೊಬೈಲ್ : 9880088333, 9740676951 (ಕಾರ್ಯದರ್ಶಿ)

---

**NOW OPEN Near ULLAL**

# ಉಕಾಸ ಕಲ್ಪರಸ

ಉಡುಪಿ ಕಲ್ಪರಸ ಕೋಕೊನಟ್ & ಆಲ್‌ಸ್ಪೈಸ್ ಪ್ರೊಡ್ಯೂಸರ್ ಕಂಪೆನಿ ಲಿ. ಇದರ ಅಧಿಕೃತ ಮಾರಾಟ ಮಳಿಗೆ



## ತೆಂಗಿನ ಮರದ ಹೊಂಬಾಳೆಯ ನೈಸರ್ಗಿಕ ರಸ

ತೆಂಗಿನ ಮರದ ಇನ್ನೂ ಅರಳದ ಹೊಂಬಾಳೆಯನ್ನು ಹದಗೊಳಿಸಿ, ಶೀತಲೀಕೃತ ಪೆಟ್ಟಿಗೆಯ ಮೂಲಕ ಸಂಗ್ರಹಿಸುವ ಕಾರಣ ಸತ್ವ ಹಾಗೂ ಪೋಷಕಾಂಶಗಳಿಂದ ಕೂಡಿದ ಆರೋಗ್ಯದಾಯಕ ರಸವಾಗಿದೆ. ಕಲ್ಪರಸದಲ್ಲಿ ಹೇರಳವಾಗಿ ಖನಿಜಾಂಶಗಳು, ಪ್ರೋಟೀನುಗಳು, ವಿಟಮಿನ್ನುಗಳನ್ನು ಇರುವುದರಿಂದ ಸೇವಿಸುವವರ ಆರೋಗ್ಯವನ್ನು ವೃದ್ಧಿಸುತ್ತದೆ.

ಇದರ ಉಪ ಉತ್ಪನ್ನಗಳಾದ ಉಕಾಸ ಗುಡ ಹಾಗೂ ಉಕಾಸ ಶರ್ಕರ ಕೂಡ ಲಭ್ಯವಿದೆ.

ಇದರ ಉಪ ಉತ್ಪನ್ನಗಳಾದ ಉಕಾಸ ಗುಡ ಹಾಗೂ ಉಕಾಸ ಶರ್ಕರ ಕೂಡ ಲಭ್ಯವಿದೆ.



**ಸ್ವದೇಶಿ ಉತ್ಪನ್ನಗಳು ಹಾಗೂ ನ್ಯಾಚುರಲ್ ಕ್ಯಾಂಡಿ ನಮ್ಮಲ್ಲಿ ದೊರೆಯುತ್ತದೆ.**

## ಉಡುಪಿ ನ್ಯಾಚುರಲ್

Ullal Near Sahara Hospital Mangalore

ಸ್ವದೇಶಿ ಉತ್ಪನ್ನಗಳ ಮಳಿಗೆ    Mob : 8618140100

---



# ಸನಾತನ ಹಿಂದೂ ಸೇವಾ ಪ್ರತಿಷ್ಠಾನ

ಇದೊಂದು ಧರ್ಮ ಜಾಗೃತಿಗಾಗಿ ಬೆಳಕು ಕಾಣುತ್ತಿರುವ ಸಮಾನ ಮನಸ್ಕರ ಬಳಗವಾಗಿದ್ದು ಸುತ್ತಮುತ್ತಲ ಪರಿಸರದಲ್ಲಿ ಧಾರ್ಮಿಕ ಶ್ರದ್ಧೆ ಪ್ರಸರಿಸುವುದು. ಜೀವನ ಮಟ್ಟದಲ್ಲಿ ಆರ್ಥಿಕ ಇಲ್ಲವೇ ದೈಹಿಕವಾಗಿ ಅಶಕ್ತರಾಗಿರುವವರಿಗೆ ನೆರವಾಗುವುದು, ಯುವ ಜನಾಂಗಕ್ಕೆ ಹಿಂದೂ ಧರ್ಮದ ನಿಜಾರ್ಥದ ಪ್ರಜ್ಞೆ ಮೂಡಿಸುವುದು ಸೇರಿದಂತೆ ಸಾಮಾಜಿಕ ಕಳಕಳಿಯ ನಮ್ಮ ಈ ನೂತನ ಸಂಘಟನೆಯ ಉದ್ದೇಶವಾಗಿದೆ.

**ಉದ್ಘಾಟನಾ ಸಮಾರಂಭ**

ತಾ. 15–02–2026ನೇ ಆದಿತ್ಯವಾರ ಸಂಜೆ 6.00 ಗಂಟೆಗೆ
ದಿ। ಲೋಕಯ್ಯ ಗಟ್ಟಿ ವೇದಿಕೆ, ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ದೇವಸ್ಥಾನ, ಶ್ರೀ ಕ್ಷೇತ್ರ ಕುತ್ತಾರು

ಮಧ್ಯಾಹ್ನ 2.00 ಗಂಟೆಗೆ **ಮಂಡಲ ಜ್ಯೋತಿ ಪ್ರಜ್ವಲನೆ**

ಮಧ್ಯಾಹ್ನ 3.00 ಗಂಟೆಗೆ **ನೃತ್ಯ ವೈವಿಧ್ಯ**

ಸ್ಟಾರ್ ಮೆಲೊಡೀಸ್ ಮಂಗಳೂರು ಇವರಿಂದ **ಸುಗಮ ಸಂಗೀತ**

ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಮಹಿಳಾ ಸದಸ್ಯರಿಂದ ತುಳು ಕಿರು ನಾಟಕ

**ವೀರರಾಣಿ ಅಬ್ಬಕ್ಕ**

ರಾತ್ರಿ 8.00 ಗಂಟೆಗೆ ವಿಜಯಕುಮಾರ್ ಕೊಡಿಯಾಲ್ ಬೈಲ್ ನಿರ್ದೇಶನದಲ್ಲಿ ಕಲಾಸಂಗಮದ ಶಿವದೂತೆ ಗುಳಿಗೆ ನಾಟಕ ತಂಡದಿಂದ ಮತ್ತೊಂದು ದಂಡಯಾತ್ರೆ **ಛತ್ರಪತಿ ಶಿವಾಜಿ**



ಸಂಜೆ 6,00ರಿಂದ **ಸನಾತನ ಧರ್ಮಸಭೆ**

**ಜಯರಾಮಾಭಿನಂದನೆ**

ಮಾಜಿ ಶಾಸಕರಾದ ಶ್ರೀ ಕೆ. ಜಯರಾಮ ಶೆಟ್ಟಿಯವರಿಗೆ
80ನೇ ವರ್ಷದ ಜನ್ಮ ದಿನಾಚರಣೆಯ ಅಭಿನಂದನಾ ಕಾರ್ಯಕ್ರಮ

**ಸನಾತನಾಭಿವಂದನೆ**

**ಹಿರಿಯ ಧರ್ಮ ಸೇವಾಳುಗಳಿಗೆ ಗೌರವಾರ್ಪಣೆ**

| | |
|---|---|
| ಗೌರವಾಧ್ಯಕ್ಷರು | : ಶ್ರೀ ವಿವೇಕ್ ಶೆಟ್ಟಿ ಬೊಳ್ಳಗುತ್ತು, ಉದ್ಯಮಿ, ಮುಂಬೈ |
| ಅಧ್ಯಕ್ಷರು | : ಶ್ರೀ ಸುರೇಶ್ ಚೌಟ ಕಕ್ಕೆಮಜಲು ಕೊಣಾಜೆ |
| ಉಪಾಧ್ಯಕ್ಷರು | : ಶ್ರೀ ಜಗನ್ನಾಥ್ ಸಾಲ್ಯಾನ್ ಕುತ್ತಾರ್, ಶ್ರೀ ಶ್ರೀಕರ ಶೆಟ್ಟಿ ಬೋಳಿಯಾರ್ |
| ಪ್ರಧಾನ ಕಾರ್ಯದರ್ಶಿ | : ಶ್ರೀ ದಿನೇಶ್ ಗಟ್ಟಿ ಕುತ್ತಾರ್ (ಮಾಜಿ ಕೌನ್ಸಿಲರ್) |
| ಜೊತೆ ಕಾರ್ಯದರ್ಶಿ | : ಶ್ರೀ ಲೋಕೇಶ್ ಎಕ್ಕೂರು, ಶ್ರೀ ಲತೀಶ್ ರೈ ಅಂಬ್ಲಮೊಗರು, ಶ್ರೀ ರಾಜೇಂದ್ರ ಪ್ರಸಾದ್ ಗಟ್ಟಿ ಕಾಪಿಕಾಡ್ ಶ್ರೀ ರಾಮಚಂದ್ರ ಶೆಟ್ಟಿ ಸಂತೋಷನಗರ |
| ಸಂಘಟನಾ ಕಾರ್ಯದರ್ಶಿ | : ಶ್ರೀ ಶಿವರಾಮ ಶೆಟ್ಟಿ ಕುಂಪಲ |
| ಕೋಶಾಧಿಕಾರಿ | : ಶ್ರೀ ಸುನಿಲ್ ಕುಮಾರ್ ಮಂಗಳೂರು |
| ಪ್ರಧಾನ ಸಂಚಾಲಕರು | : ಶ್ರೀ ಪವಿತ್ರ ಕುಮಾರ್ ಗಟ್ಟಿ ಕುತ್ತಾರ್, ಶ್ರೀ ಕೆ. ಕೃಷ್ಣ ಶೆಟ್ಟಿ ತಾಮಾರ್, ಶ್ರೀ ರಮೇಶ್ ಕೊಲ್ಯ |

---

॥ ಶ್ರೀ ವೈದ್ಯನಾಥ ಪ್ರಸನ್ನ:॥ ॥ಶ್ರೀ ದುರ್ಗಾಲಯ ಪ್ರಸನ್ನ॥

# ಧರ್ಮಅರಸು ಶ್ರೀ ತೋಡಕುಕ್ಕಿನಾರ್ ದೈವಸ್ಥಾನ ಜೀರ್ಣೋದ್ಧಾರ ಸಮಿತಿ ಕಣಂತೂರು

ಅಂಚೆ : ಬಾಳೆಪುಣಿ, ಉಳ್ಳಾಲ ತಾಲೂಕು – 574153



8 ಫೆಬ್ರವರಿ 2026 ಆದಿತ್ಯವಾರ

ಪೂರ್ವಾಹ್ನ 10 ರಿಂದ

ಸರ್ವದೋಷ ಪರಿಹಾರಾರ್ಥವಾಗಿ

## ಮುಷ್ಠಿ ಕಾಣಿಕೆ ಸಮರ್ಪಣೆ

ಜೀರ್ಣೋದ್ಧಾರದ ಪ್ರಯುಕ್ತ

## ವಿಜ್ಞಾಪನಾ ಪತ್ರ ಬಿಡುಗಡೆ ನಿಧಿ ಸಂಚಯನ

ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ದೈವಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

ಶ್ರೀ ವೈದ್ಯನಾಥ ಸೇವಾ ಸಂಘ ಹಾಗೂ ಮಹಿಳಾ ಸಮಿತಿ ಶ್ರೀ ಕ್ಷೇತ್ರ ಕಣಂತೂರು
ಆಡಳಿತ ಮಂಡಳಿ ಹಾಗೂ ಜೀರ್ಣೋದ್ಧಾರ ಸಮಿತಿ ಶ್ರೀ ಕ್ಷೇತ್ರ ಕಣಂತೂರು
ಶ್ರೀ ಕ್ಷೇತ್ರದ ಸಮಸ್ತ ಸಿಬ್ಬಂದಿ ವರ್ಗ



ಶುಭಕೋರುವ

**ಸಂತೋಷ್ ಕುಮಾರ್ ರೈ ಬೋಳಿಯಾರ್**

## ಜಾನಪದ ಪರಿಷತ್ತಿನ ಡಾ.ಜೀ.ಶಂ.ಪರಮ ಶಿವಯ್ಯ ಪ್ರಶಸ್ತಿಗೆ ಪ್ರೊ.ಕೆ.ಚಿನ್ನಪ್ಪ ಗೌಡ ಆಯ್ಕೆ



**ಕೊಣಾಜೆ:** ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ಇವರು ಕೊಡಮಾಡುವ 2026 ನೇ ಸಾಲಿನ ಡಾ.ಜಿ.ಶಂ.ಪರಮಶಿವಯ್ಯ ಪ್ರಶಸ್ತಿಗೆ ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರು ಆಯ್ಕೆಯಾಗಿದ್ದಾರೆ.

ರಾಮನಗರದ ಜಾನಪದ ಲೋಕದಲ್ಲಿ ಫೆಬ್ರವರಿ 7 ಮತ್ತು 8 ರಂದು ಕರ್ನಾಟಕ ಜಾನಪದ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆಯಲಿರುವ ವಿದ್ಯಾರ್ಥಿ ಲೋಕೋತ್ಸವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ನಡೆಯಲಿದೆ.

ಕರ್ನಾಟಕ ಜಾನಪದ ಪರಿಷತ್ತು ಡಾ.ಕೆ.ಚಿನ್ನಪ್ಪ ಗೌಡರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಸಾಧನೆಯನ್ನು ಗುರುತಿಸಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಿದೆ. ಈ ಪ್ರಶಸ್ತಿಯು ರೂ. 25,000 ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಜಾನಪದ ಪರಿಷತ್ತುವಿನ ಇತರ ಪ್ರಶಸ್ತಿಗಳಾದ ನಾಡೋಜ ಎಚ್ ಎಲ್ ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿಗೆ ಜಾನಪದ ವಿದ್ವಾಂಸ ಹಿ.ಶಿ.ರಾಮೇಚಂದ್ರೇ ಗೌಡ, ನಾಡೋಜ ಡಾ.ಜಿ.ನಾರಾಯಣ ಜಾನಪದ ಲೋಕ ಪ್ರಶಸ್ತಿಗೆ ವಾದನ ಕಲಾವಿದರಾದ ಚಿಕ್ಕಣ್ಣ, ಶ್ರೀಮತಿ ಲಕ್ಷ್ಮಮ್ಮ ನಾಗೇಗೌಡ ಪ್ರಶಸ್ತಿಗೆ ಜನಪದ ಛಾಂಯಾಗ್ರಾಹಕರಾದ ಡಾ.ಸಿರಿಗಂಧ ಶ್ರೀನಿವಾಸ ಮೂರ್ತಿ ಅವರು ಆಯ್ಕೆಯಾಗಿದ್ದು ಹಾಗೆಯೇ ಜಾನಪದ ಕ್ಷೇತ್ರದ ಇತರ ಪ್ರಶಸ್ತಿಗಳಿಗೆ ನಾಡಿನ ಸಾಧಕರು ಆಯ್ಕೆಯಾಗಿದ್ದಾರೆ.

ಫೆ.8 ರಂದು ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಆದಿ ಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಉಪಸ್ಥಿತಿಯಲ್ಲಿ ಸಾರಿಗೆ ಸಚಿವರಾದ ರಾಮಲಿಂಗ ರೆಡ್ಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## ರೆಂಜಾಡಿ ಸೇತುವೆ ನಿರ್ಮಾಣಕ್ಕೆ ಸ್ಪೀಕರ್ ಯು.ಟಿ.ಖಾದರ್ ಶಿಲಾನ್ಯಾಸ



**ಬೆಳ್ಮ :** ಇಲ್ಲಿನ ರೆಂಜಾಡಿಯಲ್ಲಿರುವ ಸೇತುವೆ ಗ್ರಾಮದ ಪ್ರಮುಖ ಸಂಪರ್ಕ ಸೇತುವೆಯಾಗಿದೆ. ತಂದೆ ಯು.ಟಿ. ಫರೀದ್ ಅವರು ಶಾಸಕರಾಗಿದ್ದಾಗ ಇಲ್ಲಿ ಸೇತುವೆ ನಿರ್ಮಿಸಿ ದ್ವೀಪದಂತಹ ಈ ಪ್ರದೇಶಕ್ಕೆ ಸಂಪರ್ಕ ಕಲ್ಪಿಸಿದ್ದರು.

ಇದೀಗ 50 ವರ್ಷದ ಶಿಥಿಲಾವಸ್ಥೆಯಲ್ಲಿದ್ದ ಈ ಸೇತುವೆಯನ್ನು ಪುನರ್ ನಿರ್ಮಾನ ಮಾಡುವಂತೆ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದು, ಶಿಲಾನ್ಯಾಸವೂ ನಡೆದಿದೆ. ಅದಷ್ಟು ತ್ವರಿತಗತಿಯಲ್ಲಿ ಸುಸಜ್ಜಿತ ಸೇತುವೆ ಮುಂದಿನ ಭವಿಷ್ಯಕ್ಕೆ ಪೂರಕವಾಗಿ ನಿರ್ಮಾಣವಾಗಲಿ ಎಂದು ವಿಧಾನ ಸಭಾಧ್ಯಕ್ಷರಾದ ಯು.ಟಿ.ಖಾದರ್ ಹೇಳಿದರು.

ಅವರು ಬೆಳ್ಮಗ್ರಾಮ ಪಮಚಾಯತಿ ವ್ಯಾಪ್ತಿಯ ರಮಜಾಡಿ ಎಂಬಲ್ಲಿ 1ಕೋಟಿ 50ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಸೇತುವೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಯಾವುದೇ ಅಭಿವೃದ್ಧಿ ಕಾಮಗಾರಿಗೆ ಗ್ರಾಮಸ್ಥರ ಸಹಕಾರ ಇದ್ದರೆ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದರು.

ಮಸೀದಿಯ ಖತೀಬರಾದ ತಾಜುದ್ದೀನ್ ರಝಾ ಅಮ್ಜದಿ ಅವರು ದುವಾ ನೆರವೇರಿಸಿದರು.

ಈ ಸಂದರ್ಭದಲ್ಲಿ ಮೂಡಾ ಅಧ್ಯಕ್ಷರಾದ ಸದಾಶಿವ ಉಳ್ಳಾಲ್, ಬೆಳ್ಮ ಗ್ರಾಮ ಪಂ ಉಪಾಧ್ಯಕ್ಷರಾದ ಹೇಮಾವತಿ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಗಟ್ಟಿ, ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಪಕ್ಷದ ರಮೇಶ್ ಶೆಟ್ಟಿ ಬೋಳಿಯಾರ್, ಮಾಜಿ ಅಧ್ಯಕ್ಷ ಯೂಸುಫ್, ಬೆಳ್ಮ ಗ್ರಾ.ಪಂ. ಸದಸ್ಯ ಸತ್ತಾರ್, ಇಬ್ರಾಹೀಂ, ಹನೀಫ್, ರಝಾಕ್, ಇಕ್ಬಾಲ್, ರವಿರಾಜ್, ಫಾರೂಕ್, ಕಬೀರ್,ಕೋರ್ದಬ್ಬು ದೈವಸ್ಥಾನದ ಗುರುಕಾರರು ನಾಗಪ್ಪ, ಗುತ್ತಿಗೆದಾರ ಮಹಮ್ಮದ್ ಸರ್ಫ್ರಾಝ್ ಶಾಲಿಮಾರ್ ಹಾಗು ಮತ್ತಿತರರು ಉಪಸ್ಥಿತರಿದ್ದರು.

## ಪ್ರವೀಣ್ ಎಸ್ ಕುಂಪಲ ಅಧ್ಯಕ್ಷ ಸ್ಥಾನದ ಪತ್ರ ಸ್ವೀಕಾರ




**ಉಳ್ಳಾಲ:** ಕರ್ನಾಟಕ ಜಾನಪದ ಪರಿಷತ್ ಉಳ್ಳಾಲ ತಾಲೂಕು ಘಟಕದ ಅಧ್ಯಕ್ಷ ಸ್ಥಾನದ ಪತ್ರವನ್ನು ಜಾನಪದ ಪರಿಷತ್ ರಾಜ್ಯಾಧ್ಯಕ್ಷರಾದ ಪ್ರೋ.ಬೋರಲಿಂಗಯ್ಯರವರಿಂದ ದ.ಕ ಜಿಲ್ಲಾಘಟಕದ ಅಧ್ಯಕ್ಷರಾದ ಪ್ರವೀಣ್ ಕೊಡಿಯಾಲ್ ಬೈಲ್ ಉಪಸ್ಥಿತಿಯಲ್ಲಿ ಉಳ್ಳಾಲ ತಾಲೂಕು ಘಟಕದ ನೂತನ ಅಧ್ಯಕ್ಷರಾದ ಪ್ರವೀಣ್ ಎಸ್ ಕುಂಪಲ ಸ್ವೀಕರಿಸಿದ್ದಾರೆ. ಉಳ್ಳಾಲ ತಾಲೂಕು ಘಟಕದ ಪ್ರಧಾನ ಸಂಘಟನಾ ಕಾರ್ಯದರ್ಶಿ ಕಿರಣ್ ಕೊಲ್ಯ ಉಪಸ್ಥಿತರಿದ್ದರು.

## ಸೈಂಟ್ ಜೋಯ್ ಲ್ಯಾಂಡ್ ಕೊಲ್ಯ ವಿದ್ಯಾರ್ಥಿನಿ ಶೀತಲ್.ಎಸ್ ರಾಷ್ಟ್ರಮಟ್ಟಕ್ಕೆ ಆಯ್ಕೆ



**ಸೋಮೇಶ್ವರ:** ಶಾಲಾ ಶಿಕ್ಷಣ ಇಲಾಖೆ ,ಜಿಲ್ಲಾ ಉಪ ನಿರ್ದೇಶಕರ ಕಚೇರಿ ಕೊಡಗು ಜಿಲ್ಲೆ ಇದರ ಸಹಯೋಗದಲ್ಲಿ ಅಮ್ಮತ್ತಿಯಲ್ಲಿ ನಡೆದ 17ರ ವಯೋಮಿತಿಯ ಬಾಲಕಿಯರ ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾಟದಲ್ಲಿ ಮೈಸೂರು ವಿಭಾಗವು ವಿಜೇತರಾಗಿದ್ದು,

ಮೈಸೂರು ವಿಭಾಗದ ತಂಡದಲ್ಲಿ ಶೀತಲ್. ಎಸ್ ಇವರು ಉತ್ತಮ ಪ್ರದರ್ಶನ ನೀಡಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಜಾರ್ಖಂಡಿನ ರಾಂ ಯಲ್ಲಿ ನಡೆದ ರಾಷ್ಟ್ರಮಟ್ಟದ ಪಂದ್ಯಾಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿರುತ್ತಾರೆ. ಇವರು ಸಂಧ್ಯಾ ಮತ್ತು ಸಂಜಯ್ ಅವರ ಪುತ್ರಿಯಾಗಿರುತ್ತಾರೆ.ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಸಂದೀಪ್ ರಾಜ್ ಮಾಡೂರು ಇವರಿಂದ ಫುಟ್ಬಾಬಾಲ್ ತರಬೇತಿಯನ್ನು ಪಡೆದಿರುತ್ತಾರೆ.

### ಕುರ್ನಾಡು ಮಂಡಲದ ಮುಡಿಪುವಿನಲ್ಲಿ ನಡೆದ ಹಿಂದೂ ಸಂಗಮದಲ್ಲಿ ಪ್ರಸಾದ್ ಕುಮಾರ್ ರೈ

# ಭಾರತೀಯ ಸಂಸ್ಕೃತಿಯ ನಾಶ ಸಾಧ್ಯವಿಲ್ಲ




**ಕುರ್ನಾಡು:** ನಮ್ಮ ಭಾರತದ ನೆಲಕ್ಕೆ ಅಪಮಾನವಾದಾಗ ನಾವೆಲ್ಲರೂ ಒಗ್ಗಟ್ಟಾಗಿ ಉತ್ತರ ನೀಡೋಣ. ಈ ದೇಶದ ಮೇಲೆ ನಿರಂತರವಾಗಿ ಆಕ್ರಮಣಗಳಾಗಿವೆ. ಇಂತಹ ಆಕ್ರಮಣಗಳಿಂದ ಬೇರೆ ಬೇರೆ ದೇಶಗಳ ಸಂಸ್ಕೃತಿಯು ನಾಶವಾಗಿದೆ. ಆದರೆ ಭಾರತೀಯ ಸಂಸ್ಕೃತಿಯ ನಾಶ ಎಂದಿಗೂ ಸಾಧ್ಯವಿಲ್ಲ ವಕೀಲರಾದ ಪ್ರಸಾದ್ ಕುಮಾರ್ ರೈ ಬಿ.ಸಿ.ರೋಡ್ ಹೇಳಿದರು.

ಹಿಂದೂ ಸಂಗಮ ಆಯೋಜನಾ ಸಮಿತಿ ಉಳ್ಳಾಲ ತಾಲೂಕು ಇದರ ವತಿಯಿಂದ ಕುರ್ನಾಡು, ಪಜೀರು, ಬೋಳಿಯಾರ್, ಚೇಳೂರು, ಸಜಿಪನಡು, ಸಜಿಪಪಡು ಗ್ರಾಮಗಳನ್ನೊಳಗೊಂಡ ಕುರ್ನಾಡು ಮಂಡಲದ ಮುಡಿಪುವಿನಲ್ಲಿ ಭಾನುವಾರ ನಡೆದ ಹಿಂದೂ ಸಂಗಮದಲ್ಲಿ ಬೌದ್ಧಿಕ್ ನೀಡಿದರು.

ಎಲ್ಲರಿಗೂ ಒಳಿತಾಗಲಿ ಎನ್ನುವ ಸಂಸ್ಕೃತಿ ನಮ್ಮದು. ಶತ್ರುಪಾಲಯದ ಮೇಲೆ ನುಗ್ಗಿ ದಾಳಿ ಮಾಡುವುದೂ ನಮಗೆ ತಿಳಿದಿದೆ. ರಾಮಾಯಣ ಕಾಲದಿಂದ ಹಿಡಿದು ಇತ್ತೀಚಿನ ಸಿಂಧೂರ ಆಪರೇಷನ್ ವರಗೂ ಇದು ನಡೆದಿದೆ. ನಮ್ಮ ಶಕ್ತಿಯನ್ನು, ಸಾಮರ್ಥ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ ಅಗತ್ಯವಿದ್ದು, ಈ ಉದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಮ್ಮತನವನ್ನು ಗಟ್ಟಿಗೊಳಿಸುವ ಕಾರ್ಯ ಆಗಬೇಕಿದೆ. ಕುಟುಂಬ ಪದ್ದತಿಯನ್ನು ಸುದೃಢಗೊಳಿಸಬೇಕಿದೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಬೆಳೆಸೋಣ ಎಂದರು.

ಹಿರಿಯರಾದ ಸೇಸಪ್ಪ ಟೈಲರ್ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.ಗಡಿಪ್ರದಾನರಾದ ಗುಣಕರ ಆಳ್ವ ಯಾನೆ ರಾಮ ರೈ, ಕೃಷಿಕರಾದ ಪರಮೇಶ್ವರ ಸಪಲ್ಯ, ಹಿರಿಯರಾದ ಚಿನ್ನಯ್ಯ ಸಾಲಿಯಾನ್,ಸೂರ್ಯನಾರಾಯಣ ಭಟ್ , ವಿಠಲ ಆಚಾರ್ಯ, ದೈವ ನರ್ತಕ ಸುಂದರ ನಲಿಕೆ, ಧರ್ಮಣ್ಣ ಬೆಳ್ಚಾಡ ರಾಮಣ್ಣ ನಾಯಕ್ ಮೊದಲಾದವರು ಉಪಸ್ಥಿತರಿದ್ದರು.

ಮಹಿಳಾ ಸಂಚಾಲಕಿ ತುಳಸಿ ನಿತಿನ್ ಗಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸುರೇಶ್ ಅವರು ಸ್ವಾಗತಿಸಿದರು. ಶ್ರೇಯಸ್ ವಂದಿಸಿದರು.

## ಕೆನರಾ ಬ್ಯಾಂಕ್ ದೇರಳಕಟ್ಟೆ ಶಾಖೆಯ ಶಿವರಾಮ ಕಾಸರಗೋಡು ಅವರಿಗೆ ಬೀಳ್ಕೊಡುಗೆ



**ದೇರಳಕಟ್ಟೆ:** ಧನಾತ್ಮಕ ಚಿಂತನೆಯೊಂದಿಗೆ ಕೆನರಾ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ನನಗೆ ಅಪಾರ ಸಂತೋಷ ಮತ್ತು ಗೌರವದ ವಿಷಯವಾಗಿದೆ. ಈ ಅವಧಿಯಲ್ಲಿ ಸದಾ ಸಹಕಾರ, ಮಾರ್ಗದರ್ಶನ ಹಾಗೂ ಸಹಾನುಭೂತಿಯೊಂದಿಗೆ ಬೆಂಬಲ ನೀಡಿದ ಕೆನರಾ ಬ್ಯಾಂಕ್‌ನ ಎಲ್ಲಾ ಗೌರವಾನ್ವಿತ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ಕೆನರಾ ಬ್ಯಾಂಕ್ ದೇರಳಕಟ್ಟೆ ಶಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶಿವರಾಮ ಕಾಸರಗೋಡು ಹೇಳಿದರು.

ದೇರಳಕಟ್ಟೆ ಕೆನರಾ ಬ್ಯಾಂಕ್ ಶಾಖೆಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನಿಸ್ವಾರ್ಥ ಸೇವಾಭಾವ, ಸಮಯೋಚಿತ ಸ್ಪಂದನೆ ಮತ್ತು ಗ್ರಾಹಕಪರ ದೃಷ್ಟಿಕೋನದಿಂದ ಬ್ಯಾಂಕಿನ ಕಾರ್ಯ ಯಶಸ್ವಿಯಾಗಿ ನೆರವೇರಲು ಸಾಧ್ಯವಾಯಿತು.

ಕೆನರಾ ಬ್ಯಾಂಕ್ ದೇರಳಕಟ್ಟೆ ಶಾಖೆಯ ಹಿರಿಯ ಪ್ರಬಂಧಕ ಸುರೇಶ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕವಿ, ಸಾಹಿತಿರಾಧಕ ಕೃಷ್ಣ ಕೆ. ಉಳಿಯತ್ತಡ್ಕ, ಕೆನರಾಬ್ಯಾಂಕ್ ಎಂಪ್ಲಾಯ್ಮೆಂಟ್ ಅಸೋಸಿಯೇಷನ್ನಿನ ವಿಶ್ರಾಂತ ಹಿರಿಯ ರಾಜ್ಯ ಮುಖಂಡ ಕೆ. ಸತೀಶ್ ಕಿಣಿ, ಕೆ. ಶಶಿಕಾಂತ, ಕೇರಳ ಸರಕಾರದ ಕೋಝಿಕೋಡ್ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಜಿಲ್ಲಾಧಿಕಾರಿ (ವಿಶ್ರಾಂತ) ಕೆ. ಗೀತಾ ಕುಮಾರಿ, ಕೆನರಾ ಬ್ಯಾಂಕ್ ರಾಜ್ಯ ಮುಖಂಡ ಅಖಿಲೇಶ್. ವಿಜಯ್ ಮುಖ್ಯ ಅತಿಥಿಗಳಾಗಿದ್ದರು.

ನೀನಾ ಎಸ್. ರಾಜ್, ನೀತು ಕೆ. ಪಿ., ಸುಪ್ರೀತ್ ಕೆ., ವಿಪಿನ್ ಜೋನ್, ದಯಾನಂದ, ಗೌತಮೇಶ್ವರಿ, ರವೀಂದ್ರ ಶೆಟ್ಟಿ, ನಾಗೇಶ್, ಸುರೇಶ್ ಆಚಾರ್ಯ, ವಿಸ್ಮಿತಾ ಗಂಗಮ್ಮ ಉಪಸ್ಥಿತರಿದ್ದರು.

ದೇರಳಕಟ್ಟೆ ಶಾಖೆಯ ಹಿರಿಯ ಪ್ರಬಂಧಕ ಸುರೇಶ್ ಕುಮಾರ್ ಪ್ರಾಸ್ತಾವನೆಗೈದರು. ಪ್ರಬಂಧಕಿ ಸ್ವಾತಿ.ಜಿ ಸ್ವಾಗತಿಸಿದರು. ಅಖಿಲೇಶ್ ವಿಜಯ್ ನಿರ್ವಹಿಸಿದರು.

## ದೇಹದಾರ್ಢ್ಯ ತರಬೇತುದಾರರು, ಯೋಗ ಶಿಕ್ಷಕರಿಗೆ ಗೌರವಾರ್ಪಣೆ



**ಸೋಮೇಶ್ವರ:** ಲಯನ್ಸ್ ಕ್ಲಬ್ ಆಫ್ ಸೋಮೇಶ್ವರ ಆಯೋಜಿಸಿದ ಝೋನ್ ಸಾಮಾಜಿಕ ಸಭೆಯ ಸಂದರ್ಭದಲ್ಲಿ, ಆರೋಗ್ಯಕರ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ಸ್ವಾರ್ಥರಹಿತವಾಗಿ ಸೇವೆ ಸಲ್ಲಿಸುತ್ತಿರುವ ದೇಹದಾರ್ಢ್ಯ ತರಬೇತುದಾರರು ಹಾಗೂ ಯೋಗ ಶಿಕ್ಷಕರನ್ನು ಗೌರವಿಸಲಾಯಿತು. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸುವಲ್ಲಿ ಅವರ ಪಾತ್ರವನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಪ್ರಶಂಸಿಸಲಾಯಿತು.

ಲಯನ್ ವಿಜಯಕುಮಾರ್, ಲಯನ್ ಶಶಿ ಕುಮಾರ್ ನಾಯರ್, ಲಯನ್ ನಿರ್ಮಿತಾ ಭಂಡಾರಿ ಹಾಗೂ ಲಯನ್ ರಾಜಶ್ರೀ ನಾಯರ್ ಅವರನ್ನು ಸಮಾರಂಭದಲ್ಲಿ ಗೌರವಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಲಯನ್ ವಿಜಯನ್ ಕೆ, ಅಧ್ಯಕ್ಷರು, ಲಯನ್ಸ್ ಕ್ಲಬ್ ಸೋಮೇಶ್ವರ ವಹಿಸಿದ್ದರು. ರಿಜನ್ 5 ರ ರೀಜನಲ್ ಚೇರ್‌ಪರ್ಸನ್ ಲಯನ್ ಮಲ್ಲಿಕಾ ಭಂಡಾರಿ ಮುಖ್ಯ ಅತಿಥಿಯಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಝೋನ್ 1 ರ ಚೇರ್‌ಪರ್ಸನ್ ಲಯನ್ ಜೆಸಿಂತ ಮೆಂಡೋನ್ಸ, ಕ್ಲಬ್ ಎಕ್ಸ್‌ಟೆನ್ಶನ್ ಆಫೀಸರ್ ಲಯನ್ ಭಾರತಿ ವಿನೋದ್ ಶೆಟ್ಟಿ ಹಾಗೂ ಕಾರ್ಯದರ್ಶಿ ಲಯನ್ ರಾಜಶ್ರೀ ನಾಯರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕ್ಲಬ್ ಉಪಾಧ್ಯಕ್ಷ ಲಯನ್ ವಿಜಯ ಕುಮಾರ್ ಕೆ ಸಭಿಕರನ್ನು ಸ್ವಾಗತಿಸಿದರು. ಖಜಾಂಚಿ ಲಯನ್ ನಿತೀಶ್ ಕೃಷ್ಣ ವಂದನಾರ್ಪಣೆ ಸಲ್ಲಿಸಿದರು.

## ತಲಪಾಡಿ ಗ್ರಾ.ಪಂ.ಉಪಾಧ್ಯಕ್ಷರಾಗಿ ಬಿಜೆಪಿ ಅಭ್ಯರ್ಥಿ ಸೀತಾ ಬಾಸ್ಕರ್ ಅವಿರೋಧ ಆಯ್ಕೆ



**ತಲಪಾಡಿ;** ತಲಪಾಡಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಪುಷ್ಪವತಿ ಶೆಟ್ಟಿ ನಿಧನದ ನಂತರ ತೆರವಾದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಸೀತಾ ಭಾಸ್ಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಗೊಂಡ ಸೀತಾ ಭಾಸ್ಕರ್ ಅವರಿಗೆ ಹೂವಿನ ಹಾರ ಹಾಕಿ ಬಿಜೆಪಿ ಮಂಗಳೂರು ಮಂಡಲ ಸಂತಸ ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್, ಬಿಜೆಪಿ ಮಂಗಳೂರು ಮಂಡಲದ ಪ್ರಭಾರಿ ಮತ್ತು ಜಿಲ್ಲಾ ಉಪಾಧ್ಯಕ್ಷರು ಪೂಜಾ ಪೈ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷರು ರವೀಂದ್ರ ಶೆಟ್ಟಿ ಉಳಿದೊಟ್ಟು, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಧನಲಕ್ಷ್ಮೀ ಗಟ್ಟಿ, ಬಿಜೆಪಿ ಮಂಗಳೂರು ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ ಆರ್. ದಯಾನಂದ ತೊಕ್ಕೊಟ್ಟು, ಜಿಲ್ಲಾ ಫಲಾನುಭವಿಗಳ ಸಂಪರ್ಕ ಸಹಸಯೋಜಕ ಜಿತೇಂದ್ರ ಶೆಟ್ಟಿ ತಲಪಾಡಿ, ತಲಪಾಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸುರೇಶ್ ಶೆಟ್ಟಿ ಸಾಂತ್ಯ, ಮಂಡಲ ಉಪಾಧ್ಯಕ್ಷರು ಮತ್ತು ತಲಪಾಡಿ ಗ್ರಾಮ ಸದಸ್ಯರಾದ ಶೈಲೇಶ್ ಶೆಟ್ಟಿ, ಮಂಡಲ ಕಾರ್ಯದರ್ಶಿ ರಮೇಶ್ ಬೆಂದ್ರೋಳಿಕೆ, ಬಿಜೆಪಿ ಜಿಲ್ಲಾ ಕಾರ್ಯಕರಣಿ ಸದಸ್ಯರು ಮೋಹನ್ ದಾಸ್ ಶೆಟ್ಟಿ ಕಿನ್ಯಾ, ಮಂಡಲ ಯುವ ಮೋರ್ಚಾ ಅಧ್ಯಕ್ಷ ಮುರಳಿ ಕೊಣಾಜೆ, ಮಂಜನಾಡಿ ಮಹಾಶಕ್ತಿ ಕೇಂದ್ರ ಅಧ್ಯಕ್ಷರಾದ ನಿತ್ಯಾನಂದ ಭಂಡಾರಿ ಕಿನ್ಯಾ,ತಲಪಾಡಿ ಶಕ್ತಿಕೇಂದ್ರ ಪ್ರಮುಖರು ಸತ್ಯ ರಾಜ್ ಬಿಜೆಪಿ ಪ್ರಮುಖರು ರಾಜೇಶ್ ಗುಡ್ಡೆಮನೆ ಹಾಗೂ ಇತರ ಬಿಜೆಪಿ ಬೆಂಬಲಿತ ತಲಪಾಡಿ ಗ್ರಾಮ ಪಂಚಾಯತ್ ಸದಸ್ಯರು ಉಪಸ್ಥಿತರಿದ್ದರು.

## ಕೊನೆಗೂ ಫಲಿಸಿದ ಅವಿರತ ಶ್ರಮ; ಕನ್ನಡ ಭವನ ನಿರ್ಮಾಣಕ್ಕೆ ಜಾಗ ಮಂಜೂರು




**ಮಂಗಳೂರು;** ದ.ಕ ಜಿಲ್ಲೆ ಮಂಗಳೂರು ತಾಲೂಕಿನ ಕರ್ನಾಟಕ ಕನ್ನಡ ಸಾಹಿತ್ಯ ಪರಿಷತ್ತು ಘಟಕಕ್ಕೆ ಸರಕಾರದ ವತಿಯಿಂದ ಗುರುಪುರದ ವಾಮಂಜೂರಿನ ತಿರುವೆಲ್ ಗ್ರಾಮದಲ್ಲಿ ಅರ್ಧ ಎಕರೆ ಕನ್ನಡ ಭವನ ನಿರ್ಮಾಣಕ್ಕಾಗಿ ಜಾಗ ಮಂಜೂರಾಗಿದ್ದು, ಶೀಘ್ರದಲ್ಲೇ ಶಂಕು ನೆರವೇರಲಿದೆ ಎಂದು ಕಸಪಾ ಮಂಗಳೂರು ತಾಲೂಕು ಘಟಕದ ಅಧ್ಯಕ್ಷರು ಡಾ.ಮಂಜುನಾಥ್ ಎಸ್ ರೇವಣಕರ್ ತಿಳಿಸಿದ್ದಾರೆ.

ಇವರು ಮಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಭವನವು ಮುಂದಿನ ದಿನಗಳಲ್ಲಿ ಕರಾವಳಿ ಭಾಗದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ರಾರಾಜಿಸಲಿದೆ ಎಂದು ಹೇಳಿದ್ದಾರೆ.

ಇನ್ನು ಈ ಸುದ್ದಿಗೋಷ್ಠಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ಇದರ ಅಧ್ಯಕ್ಷರಾದ ಎಂ.ಪಿ ಶ್ರೀನಾಥ್ ಉಜಿರೆ, ಧರ್ಮದರ್ಶಿಯಾದ ಹರಿಕೃಷ್ಣ ಪುನರೂರು, ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ತಾಲೂಕು ಘಟಕದ ಗೌರವ ಕಾರ್ಯದರ್ಶಿಯಾದ ಮುರಳಿ ಮೋಹನ್ ಚೂಂತಾರು, ಗಣೇಶ್ ಪ್ರಸಾದ್ ಜಿ, ಕಾರ್ಯದರ್ಶಿ ಸುಭ್ರಾಯ ಭಟ್, ತಾಲೂಕು ಘಟಕದ ಪದಾಧಿಕಾರಿ ಮೀನಾಕ್ಷಿ ಉಪಸ್ಥಿತರಿದ್ದರು.

**ಡಾ.ಮಂಜುನಾಥ ಎಸ್ ರೇವಣಕರ್ ಅವಿರತ ಶ್ರಮ :** ಅಧ್ಯಕ್ಷರಾದ ಡಾ.ಮಂಜುನಾಥ ಎಸ್ ರೇವಣಕರ್ ಅವರ ಕಳೆದ ನಾಲ್ಕು ವರ್ಷಗಳ ನಿರಂತರ ಪರಿಶ್ರಮ ಮತ್ತು ಮುಂದಾಳತ್ವದಲ್ಲಿ ಈ ಜಾಗ ಮಂಜೂರಾಗಿದೆ. ತಾಲೂಕು ಮಟ್ಟದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗಾಗಿ ಭವನವೊಂದರ ಅಗತ್ಯತೆಯನ್ನು ಮನಗಂಡು ಸರ್ಕಾರದ ಮಟ್ಟದಲ್ಲಿ ಸತತ ಹೋರಾಟವನ್ನು ನಡೆಸಿದ್ದರು. ಅದರ ಫಲವಾಗಿ ಇಂದು ಜಾಗ ಮಂಜೂರಾಗಿದೆ ಎಂದರೆ ತಪ್ಪಾಗಲಾರದು.

## ಉಚ್ಚಿಲ ಮಳೆ ನೀರು ಚರಂಡಿಗೆ ತ್ಯಾಜ್ಯ ಎಸೆತ ಗುಜರಿ ಅಂಗಡಿ ಮಾಲೀಕನಿಗೆ ರೂ.20,000 ದಂಡ

**ಉಳ್ಳಾಲ:** ಸೋಮೇಶ್ವರ ಪುರಸಭೆ ವ್ಯಾಪ್ತಿಯ ಉಚ್ಚಿಲ ಸಮುದ್ರ ತೀರದ ಮಳೆ ನೀರಿನ ಚರಂಡಿಗೆ ತ್ಯಾಜ್ಯ ಎಸೆದ ಗುಜರಿ ಅಂಗಡಿ ಮಾಲೀಕನಿಗೆ ಪುರಸಭೆ ಆಡಳಿತ ರೂ. 20,000 ದಂಡ ವಿಧಿಸಿದೆ. ಬೀರಿ ಎ.ಆರ್ ಟ್ರೇಡರ್ಸ್‌ನ ಗುಜರಿ ಅಂಗಡಿ ಮಾಲೀಕ ಸಯ್ಯದ್ ಸಂಶೀರ್ ಎಂಬವರ ವಿರುದ್ಧ ದಂಡ ಹಾಕಲಾಗಿದೆ. ಸೋಮೇಶ್ವರ ಪುರಸಭಾ ವ್ಯಾಪ್ತಿಯ ಉಚ್ಚಿಲ ಪರಿಸರದಲ್ಲಿ ಮಳೆ ನೀರಿನ ಚರಂಡಿಗೆ ತ್ಯಾಜ್ಯವಸ್ತುಗಳನ್ನು ಎಸೆದು ಪರಿಸರ ಮಾಲಿನ್ಯಗೊಳಿಸಿರುವುದು ಕಂಡು ಬಂದಿತ್ತು. ಅದರಂತೆ ಸೋಮೇಶ್ವರ ಪುರಸಭಾ ವ್ಯಾಪ್ತಿಯ 15 ಕಡೆಗಳಲ್ಲಿ ಈಗಾಗಲೇ ಸಿಸಿ ಕ್ಯಾಮೆರಾ ಗಳನ್ನು ಅಳವಡಿಸಲಾಗಿದೆ.

### ಮಂಗಳೂರು ವಿಶ್ವವಿದ್ಯಾನಿಲಯದ 'ವ್ಯಂಗ್ಯಚಿತ್ರ ರಚನೆ ಮತ್ತು ಆಸ್ವಾದನೆ' ವಿಷಯದಲ್ಲಿ ಉಪನ್ಯಾಸ

# ಎನ್ ಜಿ.ಪಾವಂಜೆ ಪೀಠದಿಂದ ವಿಶೇಷೋಪನ್ಯಾಸ



**ಕೊಣಾಜೆ:** ದೈನಂದಿನ ಬದುಕಿನಲ್ಲಿ ಹಾಸ್ಯದ ಅನೇಕ ಸನ್ನಿವೇಶಗಳು ನಡೆಯುತ್ತಾ ಇರುತ್ತವೆ. ಅದನ್ನು ಕಲೆಯಾಗಿ ಪರಿವರ್ತಿಸುವ ಪ್ರತಿಭೆ ಕಲಾವಿದರಲ್ಲಿರಬೇಕು.

ಸಾಮಾನ್ಯ ರೇಖೆಗಳಲ್ಲಿ ಅರಳುವ ವ್ಯಂಗ್ಯ ಚಿತ್ರಗಳಿಗೆ ಸಮಾಜ ಅಂಕುಡೊಂಕುಗಳನ್ನು ತಿದ್ದುವ ಸಾಮರ್ಥ್ಯವಿದೆ ಎಂದು ವ್ಯಂಗ್ಯಚಿತ್ರ ಕಲಾವಿದ ವೆಂಕಟ್ ಭಟ್ ಎಡನೀರು ಅವರು ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಎನ್. ಜಿ. ಪಾವಂಜೆ ಲಲಿತಾ ಕಲಾ ಪೀಠ ಹಾಗೂ ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್, ಮಂಗಳೂರು ಇದರ ವತಿಯಿಂದ ಸೋಮವಾರ ನಡೆದ "ವ್ಯಂಗ್ಯಚಿತ್ರ ರಚನೆ ಮತ್ತು ಆಸ್ವಾದನೆ" ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು.

ಮಂಗಳೂರು ವಿವಿ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರಾದ ಡಾ. ಸೇಸಪ್ಪ ಅಮೀನ್ ಅವರು ಮಾತನಾಡಿ, ಎನ್ ಎಸ್ ಎಸ್ ನಂತಹ ಶಿಬಿರಗಳು ಶೈಕ್ಷಣಿಕ ವಾತಾವರಣದ ನಡುವೆ ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಇಂತಹ ಶಿಬಿರಗಳು ಪ್ರಯೋಜನಕಾರಿಯಾಗಿದೆ ಎಂದರು.

ಭವಿಷ್ಯದ ಜೀವನಾನುಭವನ್ನು ಒದಗಿಸಿಕೊಡುತ್ತದೆ. ಅಲ್ಲದೆ ನಮ್ಮಲ್ಲಿರುವ ಪ್ರತಿಭೆಯ ಅನಾವರಣಕ್ಕೆ, ವ್ಯಕ್ತಿತ್ವವನ್ನು ರೂಪಿಸಲು ಇಂತಹ ಶಿಬಿರಗಳು ಪ್ರಯೋಜನಕಾರಿಯಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಂಗಳೂರು ವಿವಿ ಎನ್. ಜಿ .ಪಾವಂಜೆ ಲಲಿತಕಲಾ ಪೀಠದ ಸಂಯೋಜಕರಾದ ಡಾ.ಧನಂಜಯ ಕುಂಬ್ಳೆ ಅವರು, ಲಲಿತಕಲೆಗಳು ಒತ್ತಡಗಳಿಂದ ನಮ್ಮ ಬದುಕನ್ನು ಹಗುರುವಾಗಿಸುತ್ತದೆ. ಸಮಾಜದ ಅಂಕುಡೊಂಕುಗಳನ್ನು ಜನರೆದುರಿಗೆ ತೆರದಿಡುವುದರಲ್ಲಿ ವ್ಯಂಗ್ಯ ಚಿತ್ರಗಳು ಪರಿಣಾಮಕಾರಿಯಾಗಿದೆ. ವಿದ್ಯಾರ್ಥಿಗಳು ಇದರ ಮಹತ್ವವನ್ನು ಅರಿತುಕೊಳ್ಳುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್ ನ ಅಧ್ಯಕ್ಷರಾದ ಡಾ.ರಾಘವೇಂದ್ರ ಹೊಳ್ಳ, ಉಪಪ್ರಾಂಶುಪಾಲರಾದ ವಿದ್ಯಾಲಕ್ಷ್ಮೀ ಪಿ.ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ದೀಕ್ಷಿತಾ ಸ್ವಾಗತಿಸಿದರು. ಪ್ರತೀಕ್ಷಾ ವಂದಿಸಿದರು. ಅನ್ವಿತಾ ಕಾರ್ಯಕ್ರಮ ನಿರೂಪಿಸಿದರು.

## ಶಾಂತಿ ಭಾಗ್ ದಾರುಸಲಾಂ ಜುಮಾ ಮಸೀದಿಯ ಅಧ್ಯಕ್ಷರಾಗಿ ಹಾಜಿ ಮಹಮ್ಮದ್ ಪರಪ್ಪು ಆಯ್ಕೆ

**ಉಳ್ಳಾಲ:** ದೇರಳಕಟ್ಟೆಯ ಶಾಂತಿ ಭಾಗ್ ದಾರುಸಲಾಂ ಜುಮಾ ಮಸೀದಿಯ 2026–27ನೇ ಸಾಲಿನ ಅಧ್ಯಕ್ಷರಾಗಿ ಹಾಜಿ ಮಹಮ್ಮದ್



ಪರಪ್ಪು ಸತತ 10ನೇ ಬಾರಿಗೆ ಮರು ಆಯ್ಕೆಯಾಗಿದ್ದಾರೆ.

ಕಾರ್ಯದರ್ಶಿಯಾಗಿ ಮಹಮ್ಮದ್ ಕಮಾಲ್ 14ನೇ ಬಾರಿಗೆ ಮರು ಆಯ್ಕೆಯಾಗಿದ್ದು ಕೋಶಾಧಿಕಾರಿ ಮಹಮ್ಮದ್ ಬೈತಾರ್ ಕಳೆದ 8 ವರ್ಷದಿಂದ ಉಪಾಧಕ್ಷರಾಗಿ ಮಹಮ್ಮದ್ ಶರೀಫ್ 4ನೇ ಬಾರಿಗೆ ಮರು ಆಯ್ಕೆಯಾಗಿರುತ್ತಾರೆ. ಜೊತೆ ಕಾರ್ಯದರ್ಶಿಯಾಗಿ ಅಬ್ದುಲ್ ಅಝೀಝ್, ಸದಸ್ಯರಾಗಿ ಹಾಜಿ ಬಾವುಜಿ, ಹಾಜಿ ಅಬ್ದುಲ್ ಖಾದರ್, ಇಬ್ರಾಹಿಂ, ಸಲೀಮ್ ಸಾಹೇಬ್, ಸಯ್ಯದ್ ಹಮೀದ್, ಹಂಝ ಶಾಂತಿ ಭಾಗ್, ಅಬೂಬಕ್ಕರ್, ಅಬ್ದುಲ್ ಲತೀಫ್, ಮೈದೀನ್ ಶರೀಫ್, ಅಬ್ದುಲ್ ಖಾದರ್ ಆಯ್ಕೆಯಾಗಿದ್ದಾರೆ.

## ಶ್ರೀ ಜೈ ವೀರಾಂಜನೇಯ ವ್ಯಾಯಾಮ ಶಾಲೆಯ ನೂತನ ಅಧ್ಯಕ್ಷ ಸುನಿಲ್ ತೇವುಲ, ಕಾರ್ಯದರ್ಶಿ ಕಿಶನ್ ಕುಲಾಲ್ ಮರು ಆಯ್ಕೆ

**ತೊಕ್ಕೊಟ್ಟು:** ಶ್ರೀ ಜೈ ವೀರಾಂಜನೇಯ ವ್ಯಾಯಾಮ ಶಾಲೆಯ 41ನೇ ವಾರ್ಷಿಕ ಮಹಾಸಭೆ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಜಯರಾಮ್ ಕುತ್ತಾರ್ ಇವರ ಅಧ್ಯಕ್ಷತೆಯಲ್ಲಿ





ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಸಂಸ್ಥೆಯ ವಾರ್ಷಿಕ ಚಟುವಟಿಕೆಗಳ ಬಗ್ಗೆ ವಿಮರ್ಶೆ ನಡೆಸಿ, 2026ರ ವಾರ್ಷಿಕ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಬಳಿಕ 21 ಜನರ ನೂತನ ಸಮಿತಿ ಹಾಗೂ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ಗಣೇಶ್ ಟೈಲರ್ ಹಾಗೂ ಅಧ್ಯಕ್ಷರಾಗಿ ಸುನಿಲ್ ತೇವುಲ ಅವರನ್ನು ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಸ್ವೀಕೃತ್ ಕುತ್ತಾರ್ ಮತ್ತು ಗುರುರಾಜ್ ಹೊಸಮನೆ, ಕಾರ್ಯದರ್ಶಿಯಾಗಿ ಕಿಶನ್ ಕುಲಾಲ್, ಜೊತೆ ಕಾರ್ಯದರ್ಶಿಯಾಗಿ ದಿವ್ಯರಾಜ್ ಕುತ್ತಾರ್, ಕೋಶಾಧಿಕಾರಿಯಾಗಿ ಸೃಜನ್ ದೆಸೋಡಿ ಆಯ್ಕೆಯಾದರು.ಕ್ರೀಡಾ ಕಾರ್ಯದರ್ಶಿಗಳಾಗಿ ಶ್ರಾವಣ್ ತೇವುಲ, ನಿಶಾಂತ್ ಆಯರೆಬೆಟ್ಟು ಮತ್ತು ವರ್ಷಿತ್ ಆಯರೆಬೆಟ್ಟು ಅವರನ್ನು ಆಯ್ಕೆ ಮಾಡಲಾಯಿತು.

ಪೂಜಾ ಸಂಚಾಲಕರಾಗಿ ದಿವ್ಯರಾಜ್ ತೇವುಲ ಹಾಗೂ ಕವನ್ ಆಯರೆಬೆಟ್ಟು ಆಯ್ಕೆಯಾಗಿರುತ್ತಾರೆ.



ವಿಷನ್ ಕುಡ್ಲ ಟ್ರಸ್ಟ್ ಪ್ರಸ್ತುತಪಡಿಸಿದ ದೇರಳಕಟ್ಟೆಯ ಕ್ಷೇಮ ಆಸ್ಪತ್ರೆಯ ಎದುರುಗಡೆ ಹಮ್ಮಿಕೊಂಡ ಟಗ್ ಆಫ್ ವಾರ್‌ನಲ್ಲಿ ಮಹಿಳೆಯರು ಕಣಕ್ಕಿಳಿದು ಸ್ಪರ್ಧೆಗಿಳಿದರು.

## ಪಜೀರು: ಬಾನಬೆಟ್ಟು ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಸೇವಾ ಸಮಿತಿಯ 33ನೇ ವಾರ್ಷಿಕೋತ್ಸವ

**ಪಜೀರು:** ಇಲ್ಲಿನ ಬಾನಬೆಟ್ಟು ವಠಾರದಲ್ಲಿರುವ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಸೇವಾ ಸಮಿತಿಯ 33ನೇ ವರ್ಷದ ವಾರ್ಷಿಕೋತ್ಸವವನ್ನು ಫೆಬ್ರವರಿ 16, 2026ರ ಸೋಮವಾರ ನಡೆಯಲಿದ್ದು, ಸತ್ಯನಾರಾಯಣ ಪೂಜೆ ಹಾಗೂ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಜರಗಲಿದೆ.

ಆ ದಿನ ಮಧ್ಯಾಹ್ನ 12.30 ಗಂಟೆಗೆ ಶ್ರೀ ಸತ್ಯನಾರಾಯಣ ದೇವರ ಮಹಾಪೂಜೆ ನಡೆಯಲಿದ್ದು, ನಂತರ ಅನ್ನಸಂತರ್ಪಣೆ ಆಯೋಜಿಸಲಾಗಿದೆ. ಅದೇ ದಿನ ಸಂಜೆ ಗಂಟೆ 6.00ರಿಂದ ಚೌಕಿಪೂಜೆ ನಡೆಯಲಿದ್ದು, ಶ್ರೀ ದೇವರಿಗೆ ಹಣ್ಣುಕಾಯಿ ಸಮರ್ಪಣೆ ವ್ಯವಸ್ಥೆ ಮಾಡಲಾಗಿದೆ.




ಚೌಕಿಪೂಜೆಯ ನಂತರವೂ ಅನ್ನಸಂತರ್ಪಣೆ ನಡೆಯಲಿದೆ.

ಸಂಜೆ ಗಂಟೆ 7.00ಕ್ಕೆ ಸರಿಯಾಗಿ

**■ 33ನೇ ವರ್ಷದ ವಾರ್ಷಿಕೋತ್ಸವವನ್ನು ಫೆಬ್ರವರಿ 16, 2026ರ ಸೋಮವಾರ ನಡೆಯಲಿದೆ.**

(ಕಾಲಮಿತಿ) ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ, ಸುಂಕದಕಟ್ಟೆ ಬಜಪೆ ಇವರಿಂದ "ಶ್ರೀ ದೇವಿ ಮಹಾತ್ಮೆ" ಎಂಬ ಪುಣ್ಯ ಕಥಾಭಾಗವನ್ನು ಬಯಲಾಟ ಯಕ್ಷಗಾನ ರೂಪದಲ್ಲಿ ಪ್ರದರ್ಶಿಸಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸತ್ಯನಾರಾಯಣ ದೇವರ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಸೇವಾ ಸಮಿತಿಯವರು ವಿನಂತಿಸಿದ್ದಾರೆ.

### ನಮ್ಮೆಲ್ಲರ ನಡಿಗೆ ಶ್ರೀಕ್ಷೇತ್ರ ತಲಪಾಡಿ ದೇವೀಪುರದ ಕಡೆಗೆ' ಹಮ್ಮಿಕೊಳ್ಳಲಾದ ದಿವ್ಯಜ್ಯೋತಿ ಕ್ರಿಕೆಟರ್ಸ್ ಪಾದಯಾತ್ರೆ

# ಮಗನ ಹೆಸರಿನ ಆಂಬ್ಯುಲೆನ್ಸ್ ಲೋಕಾರ್ಪಣೆ

**ಕುತ್ತಾರು:** ಮಾಗಮಾಸದ ಹುಣ್ಣಿಮೆಯ ಶುಭಕಾಲದಲ್ಲಿ ಇಂತಹ ಉತ್ಕೃಷ್ಟ ಸಂದರ್ಭದಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಅತ್ಯಂತ ಮಹತ್ವದ್ದಾಗಿದೆ. ಕ್ರಿಕೆಟರ್ಸ್ ಸಂಘಟನೆಗಳು ಸಮಾಜಮುಖಿ ಚಟುವಟಿಕೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಶ್ಲಾಘನೀಯ. ದಿವ್ಯ ಜ್ಯೋತಿಯನ್ನು ನೋಡುವ ಮೂಲಕ ಮನಸ್ಸು ಶುದ್ಧಗೊಳ್ಳುತ್ತದೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ದಿವ್ಯ ಜ್ಯೋತಿ ಕ್ರಿಕೆಟರ್ಸ್ ಹಾಗೂ ಮಹಿಳಾ ವಿಭಾಗ, ಪಂಡಿತ್‌ಹೌಸ್ ಇವರ ಆಶ್ರಯದಲ್ಲಿ ಲೋಕಕಲ್ಯಾಣಾರ್ಥವಾಗಿ ನಮ್ಮೆಲ್ಲರ ನಡಿಗೆ ಶ್ರೀಕ್ಷೇತ್ರ ತಲಪಾಡಿ ದೇವೀಪುರದ ಕಡೆಗೆ' ಎಂದು ಹಮ್ಮಿಕೊಳ್ಳಲಾದ ಪಾದಯಾತ್ರೆ ಹಾಗೂ ಆಂಬ್ಯುಲೆನ್ಸ್ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದರು.

ವಿಶ್ವಾಸದ ಆಕಾರವಾಗಿ ಓಂಕಾರವು ಸ್ಥಿತವಾಗಿದೆ. ಅದರ ಹಿಂದೆ ವಿಶಾಲವಾದ ಚಿಂತನೆಗಳು ಅಡಗಿವೆ. ಧರ್ಮಜಾಗೃತಿಗಾಗಿ ಗಟ್ಟಿಯಾದ ಹೆಜ್ಜೆಯನ್ನು ಇಲ್ಲಿ ಇಡಲಾಗಿದೆ. ನುಡಿ ಮತ್ತು ನಡೆ ಒಂದಾದಾಗ ಧರ್ಮ ನಿರ್ಮಾಣವಾಗುತ್ತದೆ. ಆರೋಗ್ಯದ




ದೃಷ್ಟಿಯಿಂದಲೂ ಹಾಗೂ ಅಂತರ್ಮುಖಿ ಚಿಂತನೆಗಳಿಗೆ ಪಾದಯಾತ್ರೆ ಅತ್ಯುತ್ತಮ ಕಾರ್ಯಕ್ರಮವಾಗಿದೆ ಎಂದರು.

ಕೊಲ್ಯ ಶ್ರೀ ಮೂಕಾಂಬಿಕಾ ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್‌ಹೌಸ್ ಮಾತನಾಡಿ, ದಿವ್ಯ ಜ್ಯೋತಿ ಕ್ರಿಕೆಟರ್ಸ್ ಸಂಘಟನೆ ಕ್ರಿಕೆಟ್‌ಗಷ್ಟೇ ಸೀಮಿತವಾಗದೆ, ಶಿಕ್ಷಣ, ಅನ್ನ ಮತ್ತು ಸೇವೆ ಎಂಬ ತ್ರಿವೇಣಿ ಸಂಗಮದಂತೆ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ. ಸಮಾಜಕ್ಕೆ ನಿಜವಾದ ಶಕ್ತಿ ಬರಬೇಕಾದರೆ ಕೇವಲ ಮಾತಲ್ಲ, ಸತತ ಸೇವಾ ಕಾರ್ಯಗಳು ಅಗತ್ಯ. ಆ ದಿಕ್ಕಿನಲ್ಲಿ ಈ ಸಂಘಟನೆ ಮುನ್ನಡೆಯುತ್ತಿದೆ. ಲೋಕಕಲ್ಯಾಣಾರ್ಥ ನಡೆಯುತ್ತಿರುವ ಈ ಪಾದಯಾತ್ರೆ, ಧರ್ಮಜಾಗೃತಿ ಮತ್ತು ಮಾನವೀಯತೆಯ ಪ್ರತೀಕವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ತಲಪಾಡಿ ದುರ್ಗಾಪರಮೇಶ್ವರಿ ಕ್ಷೇತ್ರದ ಪ್ರಧಾನ ಅರ್ಚಕರಾದ ಗಣೇಶ್ ಭಟ್ ಪಂಜಾಳ ಮಾತನಾಡಿ, ಕ್ಯಾನ್ಸರ್‌ನಂತಹ ಭಯಾನಕ ರೋಗ ಬಂದಾಗ ಶ್ರೀಮಂತನನ್ನೂ ಬಡವನನ್ನಾಗಿ ಮಾಡುತ್ತದೆ. ಇಂತಹ ಸಂದರ್ಭಗಳಲ್ಲಿ ಆಂಬುಲೆನ್ಸ್ ಅಗತ್ಯತೆ ಎಲ್ಲರಿಗೂ ಅನಿವಾರ್ಯವಾಗಿದೆ. ಸಜ್ಜನ ಬಂಧುಗಳು ದೇವರಿಗಾಗಿ ನಡೆಸಿದ ಈ ಕಾರ್ಯ ಅತ್ಯುತ್ತಮ ಸಂಸ್ಕಾರವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ರತ್ನ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ರವೀಂದ್ರ ಶೆಟ್ಟಿ ಉಳಿದೊಟ್ಟು, ಮೆಸ್ಕಾಂ ಕಿರಿಯ ಅಭಿಯಂತರ ನಿತೇಶ್ ಹೊಸಗದ್ದೆ ಮೂಡಬಿದ್ರೆಯ ಕಂದಾವರ ಗುತ್ತು ನಿತ್ಯಾನಂದ ಶೆಟ್ಟಿ, ಉದ್ಯಮಿ ಪ್ರಕಾಶ್, ಕುತ್ತಾರು ರಾಜರಾಜೇಶ್ವರಿ ದೇವಸ್ಥಾನದ ನಿಕಟಪೂರ್ವ ಅಧ್ಯಕ್ಷ ವಿವೇಕಾನಂದ ಸನಿಲ್, ವಿಹಿಂಪ ಮುಖಂಡ ಪ್ರವೀಣ್ ಕುತಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಧನಲಕ್ಷ್ಮೀ ಗಟ್ಟಿ, ಅಶೋಕ್ ಅಮೀನ್, ಲೋಲಾಕ್ಷ ಪಂಡಿತ್‌ಹೌಸ್, ಕುತ್ತಾರು ದೆಕ್ಕಾಡು ಕೊರಗಜ್ಜ ಕ್ಷೇತ್ರದ ದೇವಿಪ್ರಸಾದ್ ಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದಿವ್ಯಜ್ಯೋತಿ ಕ್ರಿಕೆಟರ್ಸ್‌ನ ಅಧ್ಯಕ್ಷ ಯತೀಶ್ ಶೆಟ್ಟಿ ಸ್ವಾಗತಿಸಿದರು. ಪ್ರವೀಣ್ ಎಸ್. ಕುಂಪಲ ಕಾರ್ಯಕ್ರಮ ನಿರೂಪಿಸಿದರು. ಸಮಿತಾ ಸುನಿಲ್ ಪ್ರಾಸ್ತಾವಿಕ ಮಾತುಗಳನ್ನು ನುಡಿದರು. ಅನುಷಾ ಪೂಜಾರಿ ವಂದಿಸಿದರು.

ಈ ಸಂದರ್ಭದಲ್ಲಿ ದಿವ್ಯಜ್ಯೋತಿ ಕ್ರಿಕೆಟರ್ಸ್‌ನ ಅಧ್ಯಕ್ಷ ಯತೀಶ್ ಶೆಟ್ಟಿ ಹಾಗೂ ಉಪಾಧ್ಯಕ್ಷರಾದ ಸತೀಶ್ ಪೂಜಾರಿಯವರನ್ನು ಸನ್ಮಾನಿಸಲಾಯಿತು.

**ಮಗನ ಹೆಸರಿನಲ್ಲಿ ಆಂಬುಲೆನ್ಸ್ ಕೊಡುಗೆ**

**ಅಯಾನ್ಶ್ ಅನ್ನುವ ಬಾಲಕ ಕ್ಯಾನ್ಸರ್ ನಿಂದ ಬಳಲುತ್ತಿದ್ದಾಗ ಚಿಕಿತ್ಸೆಗಾಗಿ ದಾನಿಗಳ ಸಹಕಾರವನ್ನು ಮನೆಮಂದಿ ಕೋರಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬಾಲಕ ಮೃತಪಟ್ಟಿದ್ದರು. ಅದಕ್ಕಾಗಿ ಜನರಿಂದ ಪಡೆದ ಹಣದಲ್ಲಿ ಬಾಲಕ ಅಯಾನ್ಶ್ ಹೆಸರಿನಲ್ಲಿ ಆಂಬ್ಯುಲೆನ್ಸ್ ವಾಹನವನ್ನು ಸಮಾಜಕ್ಕೆ ನೀಡುವ ಚಿಂತನೆಯನ್ನು ಹೆತ್ತವರನ್ನು ಮಾಡಿದ್ದು, ಅದರಂತೆ ಇಂದು ಒಡಿಯೂರು ಶ್ರೀಗಳು ಆಂಬ್ಯುಲೆನ್ಸ್ ಪುಷ್ಪಾರ್ಚನೆಗೈದು, ತಂದೆ ನಿತ್ಯಾನಂದ ಶೆಟ್ಟಿ ಇವರು ವಾಹನಕ್ಕೆ ಚಾಲನೆ ನೀಡಿದರು. ಈ ಸಂದರ್ಭ ಬಾಲಕನ ತಾಯಿ, ಅಜ್ಜ, ಅಜ್ಜಿ ಸೇರಿದಂತೆ ಕುಟುಂಬಿಕರು ಉಪಸ್ಥಿತರಿದ್ದರು.**

## ಕ್ರೀಡಾ ಭಾರತಿ ಉಳ್ಳಾಲ ತಾಲೂಕು ಘಟಕದ ಅಧ್ಯಕ್ಷ ನವೀನ್ ಆಳ್ವ ಆಯ್ಕೆ

**ಉಳ್ಳಾಲ:** ಕ್ರೀಡಾ ಭಾರತಿ ಮಂಗಳೂರು ಇದರ ಉಳ್ಳಾಲ ತಾಲೂಕು ಘಟಕ ಜ.23 ರಂದು ರಚನೆಗೊಂಡಿದೆ.ರಾಷ್ಟ್ರೀಯ ಪ್ರ. ಕಾರ್ಯದರ್ಶಿ ರಾಜ್ ಚೌಧರಿಯವರು ನೂತನ



ಪದಾಧಿಕಾರಿಗಳನ್ನು ಸಂಘನಿಕೇತನದಲ್ಲಿ ನಡೆದ ಮಂಗಳೂರು ವಿಭಾಗ ಬೈಠಕ್‌ನಲ್ಲಿ ಘೋಷಿಸಿದರು.

ರಾಷ್ಟ್ರ ಮಟ್ಟದಲ್ಲಿ ಕ್ರೀಡಾಭಾರತಿಯ ಸಂಘಟನೆಯು 1992ರಲ್ಲಿ ಆರಂಭವಾಗಿದ್ದು, ಜಿಲ್ಲೆಯಲ್ಲಿ 2014 ರಂದು ಪ್ರಾರಂಭಿಸಲಾಗಿತ್ತು. ಆ ನಂತರ ಜಿಲ್ಲೆಯ 6 ತಾಲೂಕುಗಳಲ್ಲಿ ಈಗಾಗಲೇ ಕ್ರೀಡಾಭಾರತಿ ಘಟಕಗಳನ್ನು ಆರಂಭಿಸಲಾಗಿದೆ. ಇದೀಗ ಉಳ್ಳಾಲದಲ್ಲಿ ಕ್ರೀಡಾ ಭಾರತಿ ಉಳ್ಳಾಲ ತಾಲೂಕು ಘಟಕ ರಚನೆಯಾಗಿದೆ.

ಅಧ್ಯಕ್ಷರಾಗಿ ನವೀನ್ ಆಳ್ವ ದೇವಿನಗರ, ಉಪಾಧ್ಯಕ್ಷರಾಗಿ ದಿನಕರ್ ಬಗಂಬಿಲ, ಮಾಧವ ಕಟ್ಟಜೆ ಹಾಗೂ ಸೂರಜ್ ದೇವಿನಗರ, ಕಾರ್ಯದರ್ಶಿಯಾಗಿ ನಿತಿನ್ ಉಳ್ಳಾಲ್,ಸಹ ಕಾರ್ಯದರ್ಶಿಯಾಗಿ ಪ್ರೀತಮ್ ಬಗಂಬಿಲ ಹಾಗೂ ಅಶ್ವಿತ್ ಪಕಳ, ಖಜಾಂಚಿಯಾಗಿ ರಾಜೇಶ್ ಕುಲಾಲ್, ಮಹಿಳಾ ಪ್ರಮುಖ್ ಡಾ.ಶಿಲ್ಪಾಶ್ರೀ, ಕ್ರೀಡಾ ಕೇಂದ್ರ ಪ್ರಮುಖ್ ಅವಿನಾಶ್ ಆಳ್ವ ಕೊಲ್ಯ ಇವರುಗಳನ್ನು ಘೋಷಿಸಲಾಯಿತು.

## ಬಲ್ಯ ಮಾಡೂರು: ಶ್ರೀ ಬ್ರಹ್ಮಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ವರ್ಷಾವಧಿ ನೇಮೋತ್ಸವ


**ಬಲ್ಯ:** ಇಲ್ಲಿನ ಮಾಡೂರು ಬಲ್ಯ ಶ್ರೀ ಬ್ರಹ್ಮಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ವರ್ಷಾವಧಿ ನೇಮೋತ್ಸವವು ಫೆಬ್ರವರಿ 7ರಿಂದ 9, 2026ರವರೆಗೆ ಭಕ್ತಿಭಾವದಿಂದ ನಡೆಯಲಿದೆ. ಬಲ್ಯ, ಕೋಟೆಕಾರುವಿನಲ್ಲಿರುವ ಶ್ರೀ ಬ್ರಹ್ಮಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೇಮೋತ್ಸವ ಆಯೋಜಿಸಲಾಗಿದೆ.

**ಕಾರ್ಯಕ್ರಮಗಳ ವಿವರ:**

ಫೆ. 07–02–2026 (ಶನಿವಾರ) ಬೆಳಗ್ಗೆ 8.00ಕ್ಕೆ ವೇದಮೂರ್ತಿ ಶ್ರೀ ಸುಬ್ರಹ್ಮಣ್ಯ ಬಾಶ್ರಿತ್ತಾಯರ ನೇತೃತ್ವದಲ್ಲಿ ದೈವಸ್ಥಾನದಲ್ಲಿ ಕೊಡಿಮುಹೂರ್ತ, ಗಣಯಾಗ, ದೈವಗಳಿಗೆ ಕಲಶಾಭಿಷೇಕ, ಮಹಾಪೂಜೆ ಹಾಗೂ ಪ್ರಸಾದ ವಿತರಣೆ ನಡೆಯಲಿದೆ.

ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 3.30ಕ್ಕೆ ಭಂಡಾರ ಬರುವುದು, ರಾತ್ರಿ 8.00ಕ್ಕೆ ಶ್ರೀ ಉಳ್ಳಾಯ ದೈವದ ನೇಮ, ರಾತ್ರಿ 11.00ಕ್ಕೆ ಶ್ರೀ ಮಹಾಕಾಳಿ ದೈವದ ನೇಮೋತ್ಸವ ನಡೆಯಲಿದೆ.

ದಿನಾಂಕ: 08–02–2026 (ಭಾನುವಾರ) ರಾತ್ರಿ 8.30ಕ್ಕೆ ಶ್ರೀ ಗುಳಿಗ ದೈವದ ನೇಮೋತ್ಸವ, ತನ್ನಿಮಾನಿಗ ದೈವದ ನೇಮ



ರಾತ್ರಿ 11.30ಕ್ಕೆ ಶ್ರೀ ಮುಗೇರ ದೈವಗಳ ನೇಮೋತ್ಸವ ನಡೆಯಲಿದೆ. ದಿನಾಂಕ: 09–02–2026 (ಸೋಮವಾರ) ಭಂಡಾರ ಇಳಿಯುವುದು. ವಿಶೇಷ ಸೂಚನೆಯಾಗಿ ಫೆ.22 ರಂದು ಭಾನುವಾರ ಸಂಜೆ ಕೊರಗಜ್ಜ ದೈವಕ್ಕೆ ಅಗೆಲು ಸೇವೆ ಜರಗಲಿದೆ.

ಭಕ್ತಾಭಿಮಾನಿಗಳೆಲ್ಲರನ್ನು ಅಧ್ಯಕ್ಷರಾದ ಏಕನಾಥ ಕೊಂಡಾಣ, ಕಾರ್ಯದರ್ಶಿ ಶಂಕರ್ ಎಚ್.ಎಸ್ ಬಲ್ಯ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು, ಉಮೇಶ್ ಗಾಂಭೀರ್ ಬಲ್ಯ ಬಾಳಿಕೆ ಮತ್ತು ರಾಮ ಪೂಜಾರಿ ಇವರು ದೈವದ ಕೃಪೆಗೆ ಪಾತ್ರರಾಗಬೇಕಾಗಿ ದೈವಸ್ಥಾನದ ಆಡಳಿತ ಮಂಡಳಿ ವಿನಂತಿಸಿದೆ.

## ಕಾಪಿಕಾಡ್ ಉಮಾಮಹೇಶ್ವರಿ ಬ್ರಹ್ಮಕಲಶೋತ್ಸವ ಶರವು ಕ್ಷೇತ್ರದಲ್ಲಿ ಹೊರೆಕಾಣಿಕೆ ಕೇಂದ್ರ ಉದ್ಘಾಟನೆ

**ಶರವು:** ಉಳ್ಳಾಲ ಕಾಪಿಕಾಡ್ ಉಮಾಪುರಿ ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲ ಶೋತ್ಸವ ಮತ್ತು ವಾರ್ಷಿಕ ಜಾತ್ರೆ ಹಿನ್ನೆಲೆಯಲ್ಲಿ ಭಕ್ತರಿಗೆ ಹೊರೆಕಾಣಿಕೆ ಸಮರ್ಪಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೊರೆಕಾಣಿಕೆ ಕೇಂದ್ರವನ್ನು ಶರವು ಮಹಾಗಣಪತಿ ಕ್ಷೇತ್ರದ ಆವರಣದಲ್ಲಿ ಶುಕ್ರವಾರ ಉದ್ಘಾಟಿಸಲಾಯಿತು.

ಶರವು ಕ್ಷೇತ್ರದ ಶಿಲೆಶಿಲೆ ಮೊತ್ತೇಸರ ಶರವು ರಾಘವೇಂದ್ರ ಶಾಸ್ತ್ರಿ ಅವರು ಹೊರೆ ಕಾಣಿಕೆ ಕೇಂದ್ರವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿ, ಬ್ರಹ್ಮಕಲಶೋತ್ಸವಗಳಿಗೆ ತಾವೂ ಸಹಕಾರ ನೀಡಬೇಕು ಎನ್ನುವ ಭಾವನೆ ಸಾಕಷ್ಟು ಮಂದಿ ಭಕ್ತರಲ್ಲಿ ಇರುತ್ತದೆ. ಆದರೆ ಹೊರೆಕಾಣಿಯನ್ನು ಎಲ್ಲಿಗೆ ಹೇಗೆ ಸಮರ್ಪಿಸಬೇಕು ಎನ್ನುವ ಮಾಹಿತಿ ಇರುವುದಿಲ್ಲ. ಹಾಗಾಗಿ ಸಂಗ್ರಹ

ಕೇಂದ್ರದಿಂದ ಭಕ್ತರಿಗೆ ನೆರವಾಗಿದೆ. ನಗರ ಪ್ರದೇಶದ ಜನರು ಇಲ್ಲಿಗೆ ತಾವು ನೀಡುವಂತಹ ತರಕಾರಿ, ದಿನಸಿ, ಪಾತ್ರೆ ಇತ್ಯಾದಿ ವಸ್ತುಗಳನ್ನು ನೀಡುವುದರಿಂದ ಅದು ಉಮಾಮಹೇಶ್ವರಿ ದೇವಸ್ಥಾನಕ್ಕೆ ಸಂದಾಯವಾಗುತ್ತದೆ ಎಂದರು.




ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ಉಮಾಮಹೇಶ್ವರ ಕ್ಷೇತ್ರದಲ್ಲಿ ಫೆ. 1ರಿಂದ 8ರ ವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ, ವಾರ್ಷಿಕ ಜಾತ್ರೆ ನಡೆಯಲಿದೆ. ಎಲ್ಲರೂ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಬೇಕು ಎಂದರು.

ಹೊರೆ ಕಾಣಿಕೆ ಕೇಂದ್ರದ ಉಸ್ತುವಾರಿ ಮೋನಪ್ಪ ಭಂಡಾರಿ, ದೇವಸ್ಥಾನ ಆಡಳಿತ ಮೊಕ್ತಸರ ಎ.ಜೆ. ಶೇಖರ್, ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಅತ್ತಾವರ, ಸೇವಾ ಸಮಿತಿ ಅಧ್ಯಕ್ಷ ದಿನೇಶ್ ರೈ ಕಳ್ಳಿಗೆ, ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡ್, ಮಾಜಿ ಮೇಯರ್‌ಗಳಾದ ಸುಧೀರ್‌ಶೆಟ್ಟಿ ಕಣ್ಣೂರು, ಪ್ರೇಮಾನಂದ ಶೆಟ್ಟಿ ದಿವಾಕರ್ ಪಾಂಡೇಶ್ವರ, ಪ್ರಮುಖರಾದ ರವಿಶಂಕರ್ ಮಿಜಾರು, ರವೀಂದ್ರ ಶೆಟ್ಟಿ ಉಳಿದೊಟ್ಟು ರಮೇಶ್ ಕಂಡೆಟ್ಟು ನಂದನ್ ಮಲ್ಯ, ಮಹಾನಗರ ಪಾಲಿಕೆಯ ಮಾಜಿ ಸದಸ್ಯರು ಮೊದಲಾದವರು ಉಪಸ್ಥಿತರಿದ್ದರು.

### ಡಾ. ಅಬ್ದುಲ್ ಶಕೀಲ್ ಚಾರಿಟೇಬಲ್ ಟ್ರಸ್ಟ್‌ನ ದಶಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮ

# ದಕ್ಷಿಣ ಭಾರತದ ಮೊದಲ ಮುಕ್ತ ರಾಷ್ಟ್ರಮಟ್ಟದ ಕುರಾನ್ ಕಿರಾಅತ್ ಸ್ಪರ್ಧೆ ಯಶಸ್ವಿ

**ಮಂಗಳೂರು:** ಯುವ ಪೀಳಿಗೆಗೆ ಪವಿತ್ರ ಕುರಾನ್ ಪಠಣದ ಮಹತ್ವವನ್ನು ತಲುಪಿಸುವ ಹಾಗೂ ಆಧ್ಯಾತ್ಮಿಕತೆಯತ್ತ ಸೆಳೆಯುವ ಉದ್ದೇಶದಿಂದ ನಗರದಲ್ಲಿ ಆಯೋಜಿಸಲಾಗಿದ್ದ ದಕ್ಷಿಣ ಭಾರತದ ಮೊದಲ ಮುಕ್ತ ರಾಷ್ಟ್ರಮಟ್ಟದ ಕುರಾನ್ ಕಿರಾಅತ್ ಸ್ಪರ್ಧೆಯು ಅತ್ಯಂತ ಯಶಸ್ವಿಯಾಗಿ ಜರುಗಿತು.

ಡಾ. ಅಬ್ದುಲ್ ಶಕೀಲ್ ಚಾರಿಟೇಬಲ್ ಟ್ರಸ್ಟ್‌ನ ದಶಮಾನೋತ್ಸವದ ಅಂಗವಾಗಿ ನಗರದ ಇಂಡಿಯನ್ ಕನ್ವೆನ್ಷನ್ ಹಾಲ್‌ನಲ್ಲಿ ಈ ಐತಿಹಾಸಿಕ ಸ್ಪರ್ಧೆ ಆಯೋಜಿತವಾಗಿತ್ತು.

ಈ ರಾಷ್ಟ್ರಮಟ್ಟದ ಮಹತ್ವದ ಸ್ಪರ್ಧೆಗೆ ದೇಶಾದ್ಯಂತ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಒಟ್ಟು 2,252 ಮಂದಿ ಆನ್‌ಲೈನ್ ಮೂಲಕ ತಮ್ಮ ಕಿರಾಅತ್ ವೀಡಿಯೊಗಳನ್ನು ಕಳುಹಿಸಿದ್ದರು. ಖ್ಯಾತ ವಿದ್ವಾಂಸರಿಂದ ನಡೆದ ತಾಂತ್ರಿಕ ಪರಿಶೀಲನೆಯ ನಂತರ 50 ಸ್ಪರ್ಧಿಗಳನ್ನು ಅಂತಿಮ ಹಂತಕ್ಕೆ ಆಯ್ಕೆ ಮಾಡಲಾಗಿತ್ತು. ಕರ್ನಾಟಕ, ಕೇರಳ, ಗೋವಾ, ತೆಲಂಗಾಣ ಹಾಗೂ ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಸ್ಪರ್ಧಿಗಳು ಅಂತಿಮ ಹಂತದಲ್ಲಿ ಪೈಪೋಟಿ ನಡೆಸಿದರು.

ಉತ್ತರ ಪ್ರದೇಶದ ಶೈಖ್ ಸರ್ಫರಾಝ್ ಅಝ್‌ಹರಿ ಮತ್ತು ಹೈದರಾಬಾದ್‌ನ ಖಾರಿ ಅಹ್ಮದ್ ಮುನೀರ್ ಅವರು ತೀರ್ಪುಗಾರರಾಗಿ ಭಾಗವಹಿಸಿ ಪಾರದರ್ಶಕವಾಗಿ ಮೌಲ್ಯಮಾಪನ ಮಾಡಿದರು.

ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಖಾಝಿ ತ್ವಾಕಾ ಅಹ್ಮದ್ ಮುಸ್ಲಿಯಾರ್ ಶುಭಾಶೀರ್ವಚನ ನೀಡಿದರು. ಹಝ್ರತ್ ಮುಹಮ್ಮದ್ ಫಾಝಿಲ್ ರಝ್ವಿ ಕಾವಳ ಕಟ್ಟೆ, ಯು.ಟಿ. ಇಫ್ತಿಕಾರ್, ಮಾಜಿ ಸಚಿವ ರಮಾನಾಥ ರೈ, ಕಾಂಗ್ರೆಸ್ ಮುಖಂಡ



ಪದ್ಮರಾಜ್, ಶಾಹುಲ್ ಹಮೀದ್, ಎಸ್. ಎಂ. ರಶೀದ್ ಹಾಜಿ, ನಾಸಿರ್ ಲಕ್ಕಿಸ್ಟಾರ್, ಎಸ್‌ಡಿಪಿಐಯ ರಿಯಾಝ್ ಫರಂಗಿಪೇಟೆ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಡಾ. ಅಬ್ದುಲ್ ಶಕೀಲ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸಲಾಹ್ ಕುತ್ತಾರ್, ಸಮ್‌ರಾನ್ ಮತ್ತು ಶೈಬಾನ್ ಮಾಡನ್ನೂರು ಕಾರ್ಯಕ್ರಮ ನಿರ್ವಹಿಸಿದರು.

ಟ್ರಸ್ಟ್ ಸ್ಥಾಪಕಾಧ್ಯಕ್ಷ ಡಾ. ಅಬ್ದುಲ್ ಶಕೀಲ್ ಮಾತನಾಡಿ ಯುವಜನತೆಯನ್ನು ಮಾದಕ ವ್ಯಸನ ಹಾಗೂ ಅಪರಾಧ ಚಟುವಟಿಕೆಗಳಿಂದ ದೂರವಿಟ್ಟು, ಆಧ್ಯಾತ್ಮಿಕ ಶಿಕ್ಷಣದತ್ತ ಕೊಂಡೊಯ್ಯುವುದು ನಮ್ಮ ಮುಖ್ಯ ಉದ್ದೇಶ. ದಕ್ಷಿಣ ಭಾರತದಲ್ಲಿ ನಡೆದ ಮೊದಲ ದೊಡ್ಡ ಮುಕ್ತ ರಾಷ್ಟ್ರಮಟ್ಟದ ಕಿರಾತ್ ಸ್ಪರ್ಧೆ ಇದಾಗಿದ್ದು, ಇಂತಹ ಇನ್ನಷ್ಟು ಕಾರ್ಯಕ್ರಮಗಳು ನಡೆಯಬೇಕು ಎಂಬುದು ನನ್ನ ಆಶಯ ಎಂದು ಹೇಳಿದರು.

### ವಿಜೇತರ ವಿವರ

**ಪ್ರಥಮ ಸ್ಥಾನ:** ಉಮರ್ ಮುಕ್ತಾರ್ ಬಿ.ಎಂ. (ಕಾಸರಗೋಡು, ಕೇರಳ)

**ದ್ವಿತೀಯ ಸ್ಥಾನ:** ಮುಹಮ್ಮದ್ ರಶಾದ್ (ಪಾಲಕ್ಕಾಡ್, ಕೇರಳ)

**ತೃತೀಯ ಸ್ಥಾನ:** ಮುಹಮ್ಮದ್ ಸಾದ್ (ಮೈಸೂರು, ಕರ್ನಾಟಕ)

ಪ್ರಥಮ ಸ್ಥಾನ ವಿಜೇತರಿಗೆ 1,11,111ರೂ., ದ್ವಿತೀಯ ಸ್ಥಾನ ವಿಜೇತರಿಗೆ 55,555 ರೂ. ತೃತೀಯ ಸ್ಥಾನ ವಿಜೇತರಿಗೆ 33,333 ರೂ. ಚೆಕ್ ನೀಡಲಾಯಿತು.

ಡಾ. ಅಬ್ದುಲ್ ಶಕೀಲ್ ಚಾರಿಟೇಬಲ್ ಟ್ರಸ್ಟ್ ಕಳೆದ ಹತ್ತು ವರ್ಷಗಳಿಂದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಹಾಗೂ ಅನಾಥ ಮಕ್ಕಳ ನೆರವಿನಂತಹ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿದೆ. ಈ ಹಿಂದೆ ಮೂರು ಬಾರಿ ವಿದೇಶಗಳಲ್ಲಿ ಕಿರಾಅತ್ ಸ್ಪರ್ಧೆ ಆಯೋಜಿಸಿದ್ದ ಟ್ರಸ್ಟ್, ತನ್ನ 10ನೇ ವಾರ್ಷಿಕೋತ್ಸವದ ಪ್ರಯುಕ್ತ ಮೊದಲ ಬಾರಿಗೆ ಸಂಸ್ಥಾಪಕ ಡಾ. ಅಬ್ದುಲ್ ಶಕೀಲ್ ಅವರ ಹುಟ್ಟೂರಾದ ಮಂಗಳೂರಿನಲ್ಲಿ ಈ ಬೃಹತ್ ಸ್ಪರ್ಧೆಯನ್ನು ಆಯೋಜಿಸಿದೆ.

## ಕುತ್ತಾರು: ಸನಾತನ ಹಿಂದೂ ಸೇವಾ ಪ್ರತಿಷ್ಠಾನ ಉದ್ಘಾಟನಾ ಸಮಾರಂಭ

**ಕುತ್ತಾರು:** ಕುತ್ತಾರಿನ ಶ್ರೀಕ್ಷೇತ್ರದಲ್ಲಿರುವ ಶ್ರೀ ರಾಜರಾಜೇಶ್ವರಿ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭವು ಫೆಬ್ರವರಿ 15, 2026ರ ಆದಿತ್ಯವಾರ ವಿಜೃಂಭಣೆಯಿಂದ ನಡೆಯಲಿದೆ.

ಮಧ್ಯಾಹ್ನ 2.00 ಗಂಟೆಗೆ ಮಂಡಲ ಜ್ಯೋತಿ ಪ್ರಜ್ವಲನದ ಮೂಲಕ ಸಮಾರಂಭಕ್ಕೆ ಶುಭಾರಂಭವಾಗಲಿದೆ. ಬಳಿಕ 2.15ಕ್ಕೆ ದೇವಸ್ಥಾನದ ಮಕ್ಕಳ ತಂಡದಿಂದ ಕುಣಿತ ಭಜನೆ ನಡೆಯಲಿದೆ. ಮಧ್ಯಾಹ್ನ 3.00 ಗಂಟೆಗೆ ನೃತ್ಯ ವೈವಿಧ್ಯ ಕಾರ್ಯಕ್ರಮ ನಡೆಯಲಿದ್ದು, ಸಂಜೆ 4.00 ಗಂಟೆಗೆ ಮಂಗಳೂರಿನ ಸ್ಟಾರ್ ಮೆಲೋಡಿಸ್ ತಂಡದಿಂದ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಜೆ 5.00 ಗಂಟೆಗೆ ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ಮಹಿಳಾ ಸದಸ್ಯರಿಂದ ತುಳು ಕಿರು ನಾಟಕ 'ವೀರ ರಾಣಿ ಅಬ್ಬಕ್ಕ'ಪ್ರದರ್ಶನಗೊಳ್ಳಲಿದೆ. ಸಂಜೆ 6.00 ಗಂಟೆಗೆ ಮಾಜಿ ಶಾಸಕರಾದ ಶ್ರೀ ಕೆ. ಜಯರಾಮ ಶೆಟ್ಟಿ ಅವರಿಗೆ ಅವರ 80ನೇ ವರ್ಷದ ಜನ್ಮದಿನಾಚರಣೆಯ ಅಂಗವಾಗಿ ಜಯರಾಮಾಭಿನಂದನೆ ಕಾರ್ಯಕ್ರಮ ನಡೆಯಲಿದ್ದು, ಈ ಸಂದರ್ಭದಲ್ಲಿ ಹಿರಿಯ ಧರ್ಮ ಸೇವಾಳುಗಳಿಗೆ ಗೌರವಾರ್ಪಣೆ ನಡೆಯಲಿದೆ. ರಾತ್ರಿ 7.30 ಗಂಟೆಯಿಂದ ಸಾರ್ವಜನಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ನಂತರ ರಾತ್ರಿ 8.00 ಗಂಟೆಗೆ, ವಿಜಯ್ ಕುಮಾರ್ ಕೊಡಿಯಾಲ್ ಬೈಲ್ ನಿರ್ದೇಶನದ ಕಲಾಸಂಗಮದ 'ಶಿವದೂತೆ ಗುಳಿಗೆ' ನಾಟಕ ತಂಡದಿಂದ 'ಛತ್ರಪತಿ ಶಿವಾಜಿ' ನಾಟಕ ಪ್ರದರ್ಶನಗೊಳ್ಳಲಿದೆ. ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

## ಪಜೀರು: ಫೆ.14ರಂದು ಮಹ್ಫರತುಲ್ ಬದ್ರಿಯಾ ವಾರ್ಷಿಕ ಕಾರ್ಯಕ್ರಮ

**ಪಜೀರು :** ಇಲ್ಲಿನ ಕೆಎಂಜೆ, ಎಸ್ ವೈಎಸ್, ಎಸ್ಎಸ್ಎಫ್ ಯುನಿಟ್‌ನ ಜಲ್ಸತುಲ್ ಮಹಬ್ಬ: ಗ್ರ್ಯಾಂಡ್ ಬುರ್ದಾ ಮಜ್ಲಿಸ್ ವಾರ್ಷಿಕ ಮಹ್ಫರತುಲ್ ಬದ್ರಿಯಾ ಪಜೀರು ನಡುಹಿತ್ಲು ಮಸ್ಜಿದುಲ್ ಮದೀನ ವಠಾರದಲ್ಲಿ ಫೆ.14 ಶನಿವಾರ ಮಗ್ರಿಬ್ ನಮಾಝಿನ ಬಳಿಕ ನಡೆಯಲಿದೆ. ಧಾರ್ಮಿಕ ಹಾಗೂ ಆತ್ಮಿಕ ಸಂದೇಶಗಳನ್ನು ಒಳಗೊಂಡ ಈ



ಕಾರ್ಯಕ್ರಮದಲ್ಲಿ ಖ್ಯಾತ ಅತಿಥಿಗಳು ಭಾಗವಹಿಸಲಿದ್ದು, ಅಸ್ಸೆಯ್ಯದ್ ಸುಹೈಲ್ ಅಸ್ಸಖಾಫ್ ತಂಙಳ್ ಮಡಕ್ಕರ, ಕಣ್ಣೂರ್, ಶುಕೂರ್ ಇರ್ಫಾನಿ ಚೆಂಬರಿಕ, ಅಝ್ಹರುದ್ದೀನ್ ರಬ್ಬಾನಿ ಕಲ್ಲೂರ್, ನಾಸಿಫ್ ಕ್ಯಾಲಿಕೆಟ್, ಸಫಾನ್ ಕೋಟ್ಟಕ್ಕಲ್, ಫಾರೂಖ್ ಮಣ್ಣಾರ್ಕಾಡ್ ಅವರು ಮುಖ್ಯ ಭಾಷಣ ಮತ್ತು ಉಪನ್ಯಾಸಗಳನ್ನು ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಬುರ್ದಾ ಪಠಣ, ಧಾರ್ಮಿಕ ಉಪನ್ಯಾಸಗಳು ಹಾಗೂ ವಿಶೇಷ ಪ್ರಾರ್ಥನೆಗಳು ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

## ಫೆ.19ರಂದು ಬಟ್ರೆಬೈಲು ಕಲ್ಲುರ್ಟಿ ಕಲ್ಕುಡ ದೈವಸ್ಥಾನದಲ್ಲಿ ವರ್ಷಾವಧಿ ಕೋಲ

**ಮುಡಿಪು :** ಇಲ್ಲಿನ ತಾಲೂಕು ಪಜೀರು ಸಮೀಪದ ಬಟ್ರೆಬೈಲು ಶ್ರೀ ಕಲ್ಲುರ್ಟಿ ಕಲ್ಕುಡ ದೈವಸ್ಥಾನದಲ್ಲಿ ಶ್ರೀ ಕಲ್ಲುರ್ಟಿ ಕಲ್ಕುಡ ದೈವಗಳ ವರ್ಷಾವಧಿ ಕೋಲೋತ್ಸವವು ಫೆಬ್ರವರಿ 19, 2026ರ ಗುರುವಾರ ಭಕ್ತಿಭಾವದಿಂದ ಜರುಗಲಿದೆ.

ರಾತ್ರಿ 8.30 ಗಂಟೆಗೆ ಮಂಜೇಶ್ವರದ ಶಾರದಾ ಆರ್ಟ್ಸ್ ತಂಡದ ಐಸಿರಿ ಕಲಾವಿದರಿಂದ ವಿಶೇಷ ಕಾರ್ಯಕ್ರಮ ನಡೆಯಲಿದೆ. ನಂತರ ಶ್ರೀ ಕಲ್ಲುರ್ಟಿ ಕಲ್ಕುಡ ದೈವಗಳ ಬಾವ ಬಂದರು ಖ್ಯಾತಿಯ ಪುಷ್ಪರಾಜ್ ಬೊಳ್ಳಾರ್, ತುಳುನಾಡ ರಂಗಭೂಮಿಯ ಖ್ಯಾತ ಕಲಾವಿದರಾದ ರವಿರಾಮಕುಂಜ, ಅಭಿನಯರತ್ನ ಅನಿಲ್ ರಾಜ್ ಉಪ್ಪಳ, ರಂಗಚತುರ ಅಶೋಕ್ ಬೇಕೂರು ಸೇರಿದಂತೆ ಪ್ರಬುದ್ಧ ಕಲಾವಿದರ ಅಭಿನಯದಲ್ಲಿ ಜೈ ಭಜರಂಗ ಬಲಿ ಎಂಬ ತುಳು ಸಾಮಾಜಿಕ ನೀತಿಭೋಧಕ ನಾಟಕ ಪ್ರದರ್ಶನಗೊಳ್ಳಲಿದೆ.

ರಾತ್ರಿ 11.00 ಗಂಟೆಯಿಂದ ಸ್ಥಳೀಯ ಪ್ರತಿಭೆಗಳ ಸಹಭಾಗಿತ್ವದಲ್ಲಿ ನೃತ್ಯ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೈವದ ಕೃಪೆಗೆ ಪಾತ್ರರಾಗುವಂತೆ ದೈವಸ್ಥಾನದ ಆಡಳಿತ ವರ್ಗ ವಿನಂತಿಸಿದೆ.

## ದೇರಳಕಟ್ಟೆ ಫಾದರ್ ಮುಲ್ಲರ್ಸ್ ಎದುರು ಹೆಚ್ ಎಮ್ ಬುಕ್ ಹೈವ್ ಹೊಸ ಮಳಿಗೆ ಉದ್ಘಾಟನೆ

**ದೇರಳಕಟ್ಟೆ:** ಗ್ರಾಹಕರ ದಿನನಿತ್ಯದ ಅಗತ್ಯಗಳನ್ನು ಒಂದೇ ಕಡೆ ಪೂರೈಸುವ ಉದ್ದೇಶದಿಂದ ಸ್ಟೇಷನರಿ, ಕ್ರಾಫ್ಟ್ ಹಾಗೂ ಡೆಕೋ ಐಟಂಗಳು, ಹ್ಯಾಂಪರ್‌ಗಳು, ಬ್ಯಾಗ್‌ಗಳು, ಆಟಿಕೆಗಳು, ಕ್ರೀಡಾ ಸಾಮಗ್ರಿಗಳು, ಜೊತೆಗೆ ಜೆರಾಕ್ಸ್ ಹಾಗೂ ಪ್ರಿಂಟಿಂಗ್ ಸೇವೆಗಳು ಲಭ್ಯವಿರುವ ಚ್ ಎಮ್ ಬುಕ್ ಹೈವ್ ಹೊಸ ಮಳಿಗೆ ಯ ಉದ್ಘಾಟನೆ ಫೆ.8 ರಂದು ಫಾದರ್ ಮುಲ್ಲರ್ ಆಸ್ಪತ್ರೆ ಎದುರಿನ ಹಜ್ಜಾಜ್ ಕಾಂಪ್ಲೆಕ್ಸ್‌ನಲ್ಲಿ ಮಧ್ಯಾಹ್ನ 12.00ಕ್ಕೆ ಜರಗಲಿದೆ.




ಹೊಸ ಮಳಿಗೆಯಿಂದ ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಕುಟುಂಬಗಳಿಗೆ ಅನುಕೂಲವಾಗಲಿದೆ. ಇದೇ ವೇಳೆ, ದೇರಳಕಟ್ಟೆಯ ಮೊದಲ ಆರೋಗ್ಯ ಕೇಂದ್ರೀಕೃತ ಕೆಫೆ ಮತ್ತು ಸಪ್ಲಿಮೆಂಟ್ಸ್ ಸ್ಟೋರ್ 'ಡೈಟ್ ಹೈವ್' ಕೂಡ ಆರಂಭಗೊಳ್ಳಲಿದೆ. ಆಜಣ & ಆಜಟುರ್ಝಣ ಅಚಿಜ್ವೆ ಪರಿಕಲ್ಪನೆಯಡಿ ಪೋಷಕಾಂಶಯುಕ್ತ ಆಹಾರ, ಫಿಟ್ನೆಸ್ ಅಗತ್ಯಗಳಿಗೆ ತಕ್ಕ ಸಪ್ಲಿಮೆಂಟ್ಸ್, ಕಸ್ಟಮೈಸ್‌ಡ್ ಮೀಲ್ ಹಾಗೂ ಮಾಸಿಕ ಸಬ್ಸ್ಕ್ರಿಪ್ಷನ್ ಯೋಜನೆಗಳು ಗ್ರಾಹಕರಿಗೆ ಲಭ್ಯವಾಗಲಿವೆ.

ಸಂಸ್ಥೆಯ ಇತರ ಶಾಖೆಗಳು ಉಪ್ಪಳ ಮತ್ತು ಬಂದ್ಯೋಡಿನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಹೊಸ ಔಟ್‌ಲೆಟ್ ಮೂಲಕ ದೇರಳಕಟ್ಟೆ ಮತ್ತು ಸುತ್ತಮುತ್ತಲ ಪ್ರದೇಶದ ಜನರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸುವ ಗುರಿಯನ್ನು ಸಂಸ್ಥೆ ಹೊಂದಿದೆ. ಹೆಚ್ಚಿನ ಮಾಹಿತಿಗಾಗಿ ಸಾಮಾಜಿಕ ಜಾಲತಾಣಗಳಲ್ಲಿ h.m_crafts, hm_book_hive ಅನ್ನು ಅನುಸರಿಸಬಹುದು

## ಫೆ.12ರಂದು ಕುರ್ನಾಡು: ಶ್ರೀ ಕಿರಾತೇಶ್ವರ ಸ್ವಾಮಿ ಮುಡಿಪಿನ್ನಾರ್ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರೋತ್ಸವ

**ಮುಡಿಪು:** ಇಲ್ಲಿನ ಕುರ್ನಾಡು ಗ್ರಾಮದಲ್ಲಿರುವ ಶ್ರೀ ಕಿರಾತೇಶ್ವರ ಸ್ವಾಮಿ ಮುಡಿಪಿನ್ನಾರ್ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ಭಕ್ತಿಭಾವದಿಂದ ನಡೆಯಲಿದೆ.

ದೈವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವವು ಫೆಬ್ರವರಿ 12 ರಿಂದ 16, 2026ರವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಯೋಜಿಸಲಾಗಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಫೆಬ್ರವರಿ 13ರಂದು ವಿಶೇಷ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ ಸಂಗೀತ ಕಾರ್ಯಕ್ರಮ,




ಸಂಗೀತ ರಸಮಂಜರಿ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಈ ಸಂದರ್ಭದಲ್ಲಿ ಗೃಹದೈವಾದಿಗಳ ನೇಮ, ಗುಳಿಗ ಕೋಲ, ಕೋಟೆ ಉತ್ಸವ ಸೇರಿದಂತೆ ಸಾಂಪ್ರದಾಯಿಕ ಆಚರಣೆಗಳು ಭಕ್ತಿಭಾವದಿಂದ ನೆರವೇರಲಿವೆ. ಜೊತೆಗೆ ವಲಸರಿ ಉತ್ಸವ ಹಾಗೂ ವಿವಿಧ ಸೇವಾ ಕಾರ್ಯಕ್ರಮಗಳು ನಡೆಯಲಿವೆ.

ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಮುಡಿಪಿನ್ನಾರ್ ಸೇವಾ ಸಮಿತಿ ಹಾಗೂ ಸ್ಥಳೀಯ ಭಕ್ತರ ಸಹಕಾರದೊಂದಿಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ದೈವಸ್ಥಾನದ ಆಡಳಿತ ಮಂಡಳಿ ಹಾಗೂ ಸೇವಾ ಸಮಿತಿ ವಿನಂತಿಸಿದೆ.

# ಉಳ್ಳಾಲದ ಮಂದಿ ಸ್ವಾಭಿಮಾನದಿಂದ ಬಾಳಲು ವೀರರಾಣಿ ಅಬ್ಬಕ್ಕಳೇ ಕಾರಣ: ಮಂಜಪ್ಪ ಕಾರ್ನವರ್

**ಅಬ್ಬಕ್ಕ ಉತ್ಸವದ ಕರಪತ್ರ ಬಿಡುಗಡೆಗೊಳಿಸಿದ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕರು**




**ಉಳ್ಳಾಲ:** ಉಳ್ಳಾಲದ ಮಣ್ಣಿನಲ್ಲಿ ನಾವು ಖುಷಿಯಿಂದ, ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗಿರುವುದು ವೀರರಾಣಿ ಅಬ್ಬಕ್ಕ ಕಾರಣ. ತಾಯಿ ಭಗವತಿ ಅವರ ಪೂರ್ಣ ಅನುಗ್ರಹ ಎಲ್ಲರ ಮೇಲೂ ಇರಲಿ. ಈ ಬಾರಿ ತೊಕ್ಕೊಟ್ಟು ಅಂಬೇಡ್ಕರ್ ಮೈದಾನದಲ್ಲಿ ಅಬ್ಬಕ್ಕ ಉತ್ಸವ ವಿಜೃಂಭಣೆಯಿಂದ ನಡೆಯುತ್ತಿರುವುದು ವಿಶೇಷ. ಉತ್ಸವದ ಕಾರ್ಯನಿರ್ವಹಣೆಯಲ್ಲಿ ತೊಡಗಿರುವ ಎಲ್ಲರಿಗೂ ಸುಖ, ಶಾಂತಿ ಹಾಗೂ ಯಶಸ್ಸು ದೊರಕಲಿ ಎಂದು ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕರಾದ ಮಂಜಪ್ಪ ಕಾರ್ನವರ್ ಆಶೀರ್ವದಿಸಿದರು.

ತೊಕ್ಕೊಟ್ಟಿನ ಅಂಬೇಡ್ಕರ್ ಭವನದಲ್ಲಿ ಫೆ.14 ರಂದು ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ವತಿಯಿಂದ ನಡೆಯಲಿರುವ ವೀರರಾಣಿ ಅಬ್ಬಕ್ಕ ಉತ್ಸವ 2025–26ರ ಕುತ್ತಾರು ಖಾಸಗಿ ಹೋಟೇಲಿನಲ್ಲಿ ಜರಗಿದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರು ಹಾಗೂ ಸ್ವಾಗತಾದ–ಕ್ಷ ಕೆ.ಜಯರಾಮ ಶೆಟ್ಟಿ ಮಾತನಾಡಿ, "1920ರಲ್ಲಿ ನಡೆದ ಗಾಂಧೀಜಿ ಹೋರಾಟಕ್ಕೂ ಮುನ್ನವೇ ವೀರರಾಣಿ ಅಬ್ಬಕ್ಕಳು ಪೋರ್ಚುಗೀಸರ ವಿರುದ್ಧ ಹೋರಾಟ ನಡೆಸಿದ್ದರು. ಅಬ್ಬಕ್ಕಳ ಕಾಲದಲ್ಲಿ ಹಿಂದೂ, ಮುಸಲ್ಮಾನ, ಕ್ರೈಸ್ತರು ಎಲ್ಲರೂ ಸಮಾನವಾಗಿ ಒಗ್ಗಟ್ಟಿನಿಂದ ಬದುಕಿದ್ದರು. ಅದು ಉಳ್ಳಾಲದ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕ. ಉತ್ಸವಕ್ಕೆ ಸಂಬಂಧಿಸಿದಂತೆ ರೂ.25 ಲಕ್ಷ ಅನುದಾನ ಮಂಜೂರು ಮಾಡುವ ಪ್ರಸ್ತಾವನೆ ಇದ್ದರೂ, ಜಿಲ್ಲಾಧಿಕಾರಿಗಳ ಬಳಿ 15 ದಿನಗಳ ಹಿಂದೆ ಭೇಟಿ ಮಾಡಿದಾಗಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರಲ್ಲಿ ಕೇಳುವಂತೆ ಸೂಚಿಸಿದ್ದಾರೆ. ಆದರೆ ಹಲವು ವರ್ಷಗಳಿಂದ ಇದೇ ಅನುದಾನಕ್ಕೆ ತಡೆ ಮುಂದುವರಿಯುತ್ತಿದೆ. ಇತ್ತೀಚೆಗೆ ನಿಧನರಾದ ವಿನಯ್ ಹೆಗ್ಡೆ ಅವರೂ ಅಬ್ಬಕ್ಕ ಉತ್ಸವಕ್ಕೆ ಸಹಕಾರವನ್ನು ನೀಡುತ್ತಾ ಬಂದಿದ್ದು, ಅಂತಹ ಉತ್ತಮ ಮನಸ್ಸಿನ ಔದಾರ್ಯದಿಂದ ಉತ್ಸವ ನಡೆಸುವಂತಾಗಿದೆ ಎಂದರು.

ಈ ಸಂದರ್ಭ ಸಮಿತಿ ಉಪಾಧ್ಯಕ್ಷರುಗಳಾದ ದೇವಕಿ ಆರ್ ಉಳ್ಳಾಲ್, ಆಲಿಯಬ್ಬ, ಖಜಾಂಚಿ ಆನಂದ್ ಕೆ.ಅಸೈಗೋಳಿ ಉಪಸ್ಥಿತರಿದ್ದರು.

ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿಯ ಅಧ್ಯಕ್ಷರಾದ ದಿನಕರ್ ಉಳ್ಳಾಲ್ ಸ್ವಾಗತಿಸಿದರು. ಧನಲಕ್ಷ್ಮೀ ಗಟ್ಟಿ ನಿರೂಪಿಸಿ ವಂದಿಸಿದರು.

### ಫೆ.14 ತೊಕ್ಕೊಟ್ಟಿನಲ್ಲಿ ಉತ್ಸವ

ಫೆ.14ರಂದು ತೊಕ್ಕೊಟ್ಟು ಅಂಬೇಡ್ಕರ್ ಮೈದಾನದಲ್ಲಿ ನಡೆಯಲಿರುವ ವೀರರಾಣಿ ಅಬ್ಬಕ್ಕ ಉತ್ಸವ 2025-26ರ ಅಧ್ಯಕ್ಷತೆಯನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ವಹಿಸಲಿದ್ದು, ಪ್ರಶಸ್ತಿ ಪ್ರಧಾನವನ್ನು ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ.ಎಮ್. ಎನ್ ರಾಜೇಂದ್ರ ಕುಮಾರ್ ನೆರವೇರಿಸಲಿದ್ದಾರೆ. ಪ್ರಧಾನ ಅಭ್ಯಾಗತರಾಗಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಚಿನ್ನವತ್ತಳೆ ಪ್ರಧಾನವನ್ನು ಸಂಸದ ಕ್ಯಾ. ಬ್ರಿಜೇಶ್ ಚೌಟ ನೆರವೇರಿಸಲಿದ್ದಾರೆ. ಅಲ್ಲದೆ ಸಮಿತಿಯ ಸ್ವಾಗತಾಧ್ಯಕ್ಷ , ಮಾಜಿ ಶಾಸಕ ಕೆ. ಜಯರಾಮ ಶೆಟ್ಟಿ ಇವರ 80 ನೇ ಹುಟ್ಟುಹಬ್ಬದ ವರ್ಷಾಚರಣೆಯ ಪ್ರಯುಕ್ತ ಗೌರವ ಸನ್ಮಾನವೂ ನಡೆಯಲಿದೆ.


■ **ದಿನಕರ್ ಉಳ್ಳಾಲ್,**
ಅಧ್ಯಕ್ಷರು, ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ

# ಪರೀಕ್ಷೆ ತಯಾರಿ ಜೀವನದಲ್ಲಿ ಯಶಸ್ಸು ಸಾಧಿಸುವವರಾಗಿರಿ

**ಪ್ರವೀಣ್ ಶೆಟ್ಟಿ ಮೇಗಿನಮನೆ ಲೈಫ್ ಟಿಪ್ಸ್**

ಪರೀಕ್ಷೆ ಎನ್ನುವುದು ಕೇವಲ ಅಂಕಗಳ ಲೆಕ್ಕವಲ್ಲ. ಅದು ನಮ್ಮ ಜೀವನದ ಶಿಸ್ತಿನ, ಸಹನಶೀಲತೆಯ ಮತ್ತು ಆತ್ಮವಿಶ್ವಾಸದ ಪರೀಕ್ಷೆಯೂ ಹೌದು. ಇಂದು ವಿದ್ಯಾರ್ಥಿಗಳು ಎದುರಿಸುವ ಸ್ಪರ್ಧೆ ಬಹಳ ಕಠಿಣವಾಗಿದೆ. ಆದರೆ ಈ ಸ್ಪರ್ಧೆಯ ನಡುವೆ ಗೆಲ್ಲುವವರು ಯಾರು ಎಂದರೆ, ಸರಿಯಾದ ತಯಾರಿಯೊಂದಿಗೆ, ಸ್ಪಷ್ಟ ಗುರಿಯನ್ನು ಹೊಂದಿಕೊಂಡವರು.

ಪರೀಕ್ಷೆ ತಯಾರಿ ಎಂದರೆ ರಾತ್ರಿ ಪೂರ್ತಿ ಓದುತ್ತಾ ಕುಳಿತುಕೊಳ್ಳುವುದು ಅಲ್ಲ. ಅದು ಒಂದು ನಿರಂತರ ಪ್ರಕ್ರಿಯೆ. ಪ್ರತಿದಿನದ ಓದಿನ ವೇಳಾಪಟ್ಟಿ, ವಿಷಯದ ಅರಿವು, ಮರುಪಠಣ ಮತ್ತು ಆತ್ಮಪರಿಶೀಲನೆ. ಈ ನಾಲ್ಕು ಅಂಶಗಳು ಪರೀಕ್ಷಾ ತಯಾರಿಯ ಹೃದಯವಾಗಿವೆ. "ನಾಳೆ ಓದುತ್ತೇನೆ" ಎಂಬ ಮನೋಭಾವವೇ ಬಹುಮಾನವಾಗಿ ವಿಫಲತೆಗೆ ಕಾರಣವಾಗುತ್ತದೆ. ಇಂದು ಮಾಡಿದ ಸಣ್ಣ ಪ್ರಯತ್ನವೇ ನಾಳೆ ದೊಡ್ಡ ಯಶಸ್ಸಿನ ಬಾಗಿಲು ತೆರೆದಿಡುತ್ತದೆ.




ಬಹುಮಾನ ವಿದ್ಯಾರ್ಥಿಗಳು "ನಾನು ಪಾಸ್ ಆಗುತ್ತೇನಾ?" ಎಂಬ ಭಯದಲ್ಲಿ ಬದುಕುತ್ತಾರೆ. ಆದರೆ ಪ್ರಶ್ನೆ ಅದು ಅಲ್ಲ. "ನಾನು ನನ್ನ ಶಕ್ತಿಯಷ್ಟು ಪ್ರಯತ್ನಿಸಿದ್ದೇನಾ?" ಎಂಬುದೇ ಮುಖ್ಯ ಪ್ರಶ್ನೆ. ಪ್ರಯತ್ನದಲ್ಲಿ ಸತ್ಯಸಂಧತೆ ಇದ್ದರೆ ಫಲಿತಾಂಶವೂ ಧನಾತ್ಮಕವಾಗುತ್ತದೆ. ಪರೀಕ್ಷೆ ನಿಮ್ಮ ಜ್ಞಾನವನ್ನು ಮಾತ್ರ ಪರೀಕ್ಷಿಸುವುದಿಲ್ಲ. ನಿಮ್ಮ ಆತ್ಮವಿಶ್ವಾಸ, ಸಮಯ ನಿರ್ವಹಣೆ ಮತ್ತು ಒತ್ತಡವನ್ನು ಎದುರಿಸುವ ಸಾಮರ್ಥ್ಯವನ್ನೂ ಪರೀಕ್ಷಿಸುತ್ತದೆ.

ಇಂದಿನ ತಲೆಮಾರಿನ ದೊಡ್ಡ ಸಮಸ್ಯೆ ಎಂದರೆ ಗಮನಚಲನೆ. ಮೊಬೈಲ್, ಸಾಮಾಜಿಕ ಜಾಲತಾಣ, ಅನಾವಶ್ಯಕ ಚರ್ಚೆಗಳು . ಇವೆಲ್ಲವೂ ವಿದ್ಯಾರ್ಥಿಯ ಶತ್ರುಗಳು. ಯಶಸ್ಸನ್ನು ಬಯಸುವವನು ಮೊದಲು ತನ್ನ ಸಮಯವನ್ನು ಗೌರವಿಸಬೇಕು. ದಿನಕ್ಕೆ ಕನಿಷ್ಠ ಎರಡು–ಮೂರು ಗಂಟೆಗಳ ಗಂಭೀರ ಅಧ್ಯಯನ ಮಾಡಿದರೆ, ಅಸಾಧ್ಯವೆನಿಸುವ ವಿಷಯಗಳೂ ಸುಲಭವಾಗುತ್ತವೆ. ಪರೀಕ್ಷೆಯಲ್ಲಿ ಅಂಕಗಳು ಮುಖ್ಯ, ಆದರೆ ಅದಕ್ಕಿಂತ ಮುಖ್ಯವಾದುದು ಪರೀಕ್ಷೆಯಿಂದ ನಾವು ಕಲಿಯುವ ಪಾಠ. ಸೋಲು ಬಂದರೆ ಅದು ಅಂತ್ಯವಲ್ಲ; ಅದು ಮುಂದಿನ ಗೆಲುವಿಗೆ ತಯಾರಿ ಮಾಡುವ ಅವಕಾಶ. ಜೀವನದಲ್ಲಿಯೂ ಪರೀಕ್ಷೆಗಳು ಬರುತ್ತವೆ. ಉದ್ಯೋಗ, ಸಂಬಂಧ, ಹೊಣೆಗಾರಿಕೆಗಳು. ಶಾಲೆಯಲ್ಲಿಯೇ ಶಿಸ್ತು, ಶ್ರಮ ಮತ್ತು ಧೈರ್ಯವನ್ನು ಕಲಿತವನು ಜೀವನದ ಯಾವ ಪರೀಕ್ಷೆಯಲ್ಲೂ ಸೋಲನುಭವಿಸುವುದಿಲ್ಲ. ತಾಯ್ತಂದೆಗಳ ನಿರೀಕ್ಷೆ, ಸಮಾಜದ ಒತ್ತಡ. ಇವೆಲ್ಲದರ ನಡುವೆ ವಿದ್ಯಾರ್ಥಿಗಳು ಕುಗ್ಗಬಾರದು. ಪ್ರತಿಯೊಬ್ಬರಲ್ಲೂ ವಿಭಿನ್ನ ಸಾಮರ್ಥ್ಯವಿದೆ. ಹೋಲಿಕೆ ವಿಷದಂತೆ; ಆತ್ಮವಿಶ್ವಾಸ ಅಮೃತದಂತೆ. ನಿಮ್ಮ ಮೇಲೆ ನಂಬಿಕೆ ಇಡಿ. ಗುರಿ ಸ್ಪಷ್ಟವಾಗಿರಲಿ, ಪ್ರಯತ್ನ ನಿರಂತರವಾಗಿರಲಿ.

ಪರೀಕ್ಷೆಗೆ ತಯಾರಾಗುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ಸಂದೇಶ . ನೀವು ಕೇವಲ ಪರೀಕ್ಷೆಗೆ ಅಲ್ಲ, ಜೀವನಕ್ಕೆ ತಯಾರಾಗುತ್ತಿದ್ದೀರಿ. ಇಂದು ಪುಸ್ತಕದ ಮುಂದೆ ಕುಳಿತಿರುವ ನೀವು, ನಾಳೆ ಸಮಾಜದ ಮುಂದೆ ನಿಂತು ಸಾಧನೆ ಮಾಡುವವರು. ಶ್ರಮವೇ ನಿಮ್ಮ ಶಕ್ತಿ, ಶಿಸ್ತು ನಿಮ್ಮ ಆಯುಧ. ಯಶಸ್ಸು ನಿಮ್ಮ ಹಾದಿಯಲ್ಲಿ ಖಂಡಿತ ನಿಮ್ಮನ್ನು ಎದುರುಗೊಳ್ಳುತ್ತದೆ.

## ಕಣಂತೂರು: ಧರ್ಮಅರಸು ಶ್ರೀ ತೋಡಕುಕ್ಕಿನಾರ್ ದೈವಸ್ಥಾನ ಜೀರ್ಣೋದ್ಧಾರ ಪ್ರಯುಕ್ತ ವಿಜ್ಞಾಪನಾ ಪತ್ರ ಬಿಡುಗಡೆ, ನಿಧಿ ಸಂಚಯನ

**ಮುಡಿಪು:** ಕಣಂತೂರು ಬಾಳೆಪುಣಿ ಗ್ರಾಮದ ಧರ್ಮಅರಸು ಶ್ರೀ ತೋಡಕುಕ್ಕಿನಾರ್ ದೈವಸ್ಥಾನದ ಜೀರ್ಣೋದ್ಧಾರ ಕಾರ್ಯದ ಅಂಗವಾಗಿ ಸರ್ವದೋಷ ಪರಿಹಾರಾರ್ಥವಾಗಿ ಮುಷ್ಠಿ ಕಾಣಿಕೆ ಸಮರ್ಪಣೆ ಹಾಗೂ ಜೀರ್ಣೋದ್ಧಾರದ ಪ್ರಯುಕ್ತ ವಿಜ್ಞಾಪನಾ ಪತ್ರ ಬಿಡುಗಡೆ ಮತ್ತು ನಿಧಿ ಸಂಚಯನ ಕಾರ್ಯಕ್ರಮವನ್ನು ಫೆಬ್ರವರಿ 8, 2026ನೇ ಆದಿತ್ಯವಾರ ಪೂರ್ವಾಹ್ನ 10.00 ಗಂಟೆಗೆ ದೈವಸ್ಥಾನ ಆವರಣದಲ್ಲಿ ಆಯೋಜಿಸಲಾಗಿದೆ.

ದೈವಸ್ಥಾನದ ಜೀರ್ಣೋದ್ಧಾರವು ಕೇವಲ ಭೌತಿಕ ಪುನರ್ ನಿರ್ಮಾಣವಲ್ಲ; ಇದು ಪರಂಪರೆ, ಸಂಸ್ಕೃತಿ ಹಾಗೂ ನಂಬಿಕೆಯನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸುವ ಮಹತ್ವದ ಕಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಸರ್ವಸಾಮಾನ್ಯ ಭಕ್ತರ ಸಹಭಾಗಿತ್ವದೊಂದಿಗೆ ಮುಷ್ಠಿ ಕಾಣಿಕೆ ಸಂಗ್ರಹಣೆಗೆ ಮುಂದಾಗಿದೆ. ಭಕ್ತರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನೀಡುವ ಕಾಣಿಕೆ ದೈವದ ಕೃಪೆಯಿಂದ ಸರ್ವದೋಷ ಪರಿಹಾರಕ್ಕೆ ಕಾರಣವಾಗುತ್ತದೆ ಎಂಬ ನಂಬಿಕೆ ಇದೆ.

ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು, ಗ್ರಾಮಸ್ಥರು, ದೈವದ ಭಕ್ತರು ಹಾಗೂ ಗಣ್ಯರು ಉಪಸ್ಥಿತರಿದ್ದು, ಜೀರ್ಣೋದ್ಧಾರದ ಉದ್ದೇಶ, ಕಾರ್ಯಯೋಜನೆ ಮತ್ತು ನಿಧಿ ಬಳಕೆಯ ಕುರಿತು ವಿವರಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಜೀರ್ಣೋದ್ಧಾರದ ಪ್ರಯುಕ್ತ ಸಿದ್ಧಪಡಿಸಿದ ವಿಜ್ಞಾಪನಾ ಪತ್ರವನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗುತ್ತದೆ.

ಧರ್ಮಅರಸು ಶ್ರೀ ತೋಡಕುಕ್ಕಿನಾರ್ ದೈವದ ಅನುಗ್ರಹದಿಂದ ಈ ಪುಣ್ಯಕಾರ್ಯ ಯಶಸ್ವಿಯಾಗಲು ಎಲ್ಲ ಭಕ್ತರು, ಗ್ರಾಮಸ್ಥರು ಹಾಗೂ ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಹಕಾರ ನೀಡಬೇಕೆಂದು ಜೀರ್ಣೋದ್ಧಾರ ಸಮಿತಿ ಮನವಿ ಮಾಡಿದೆ.



■ ನಿಧಿ ಸಂಚಯನ ಕಾರ್ಯಕ್ರಮವನ್ನು ಫೆಬ್ರವರಿ 8, 2026ನೇ ಆದಿತ್ಯವಾರ ಪೂರ್ವಾಹ್ನ 10 ಗಂಟೆಗೆ ದೈವಸ್ಥಾನ ಆವರಣದಲ್ಲಿ ಆಯೋಜಿಸಲಾಗಿದೆ.

# ಬಹುನಿರೀಕ್ಷಿತ 'ನಾನ್‌ವೆಜ್' ತುಳು ಸಿನಿಮಾ ಮಲ್ಟಿಪ್ಲೆಕ್ಸ್‌ನಲ್ಲಿ ಕೇವಲ 99 ರೂಪಾಯಿ ಟಿಕೇಟು!

**ಮಂಗಳೂರು:** "ಜಯಕಿರಣ ಫಿಲಂಸ್ ಲಾಂಛನದಲ್ಲಿ, ಪ್ರಕಾಶ್ ಪಾಂಡೇಶ್ವರ್ ನಿರ್ಮಾಣದಲ್ಲಿ ಹಾಗೂ ಕೆ. ಸೂರಜ್ ಶೆಟ್ಟಿ ನಿರ್ದೇಶನದಲ್ಲಿ ಅದ್ಭುತವಾಗಿ ಸಿದ್ಧಗೊಂಡಿರುವ ನಾನ್ ವೆಜ್ ತುಳು ಸಿನಿಮಾ ಫೆಬ್ರವರಿ 6 ರಂದು ಕರಾವಳಿ ಜಿಲ್ಲೆಯಾದ್ಯಂತ ತೆರೆಕಾಣಲಿದೆ, ಈ ಸಿನಿಮಾವನ್ನು ಎಲ್ಲ ಮಲ್ಟಿಪ್ಲೆಕ್ಸ್‌ನಲ್ಲೂ ಕೇವಲ 99 ರೂ.ಗೆ ನೋಡಬಹುದಾಗಿದೆ. ದುಬಾರಿ ಟಿಕೆಟ್ ಕೊಟ್ಟು ಸಿನಿಮಾ ನೋಡಲು ಸಾಧ್ಯವಾಗದವರು ಇಂಥದ್ದೊಂದು ಸುಂದರ ಹಾಗೂ ಅತ್ಯುತ್ತಮ ಸಿನಿಮಾವನ್ನು ನೋಡದೆ ಇರಬಾರದು ಎಂಬ ಉದ್ದೇಶದಿಂದ ಕೇವಲ 99 ರೂ. ಟಿಕೆಟ್ ನಿಗದಿಪಡಿಸಿದ್ದು, ಇದು ತುಳುಚಿತ್ರರಂಗದಲ್ಲಿ ಒಂದು ಹೊಸ ಸಂಚಲನ ಉಂಟು ಮಾಡಿದೆ. ಸಿಂಗಲ್ ಥಿಯೇಟರ್‌ಗಿಂತಲೂ ಕಡಿಮೆ ದರದಲ್ಲಿ ಈ ಸಿನಿಮಾವನ್ನು ತುಳು ಪ್ರೇಮಿಗಳು ಮಲ್ಟಿಪ್ಲೆಕ್ಸ್ ಗಳಲ್ಲಿ ನೋಡುವಂತಹ ಅವಕಾಶ ಇದಾಗಿದೆ" ಎಂದು ಚಿತ್ರದ ನಿರ್ಮಾಪಕ ಪ್ರಕಾಶ್ ಪಾಂಡೇಶ್ವರ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. "ಕರಾವಳಿಯ ಪ್ರತಿಭೆಗಳಿಂದಲೇ ಸಿದ್ಧವಾಗಿರುವ ನಾನ್‌ವೆಜ್ ಒಂದು ಅತ್ಯುತ್ತಮ ಹಾಗೂ ಭಿನ್ನ ಕಥಾವಸ್ತುವನ್ನು ಹೊಂದಿದೆ. ಸು ಫ್ರಂ ಸೋ ಸಿನಿಮಾದ ಹೆಚ್ಚಿನ ಕಲಾವಿದರು ನಾನ್‌ವೆಜ್ ಸಿನಿಮಾದಲ್ಲೂ ಇದ್ದಾರೆ. ಚಿತ್ರದ ಪ್ರಮುಖ ಪಾತ್ರದಲ್ಲಿ ಪ್ರಕಾಶ್ ತೂಮಿನಾಡು, ಬಾವ ಬಂದರು ಖ್ಯಾತಿಯ ಪುಷ್ಪರಾಜ್ ಬೊಳ್ಳೂರು, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ವಿಸ್ಮಯ ವಿನಾಯಕ್, ರೂಪಾ ವರ್ಕಾಡಿ ನಟಿಸಿದ್ದಾರೆ. ನಾಯಕಿಯಾಗಿ ಪುಟ್ಟಕ್ಕನ ಮಕ್ಕಳು ಧಾರಾವಾಹಿ ಖ್ಯಾತಿಯ ಸಂಜನಾ ಬುರ್ಲಿ ತಮ್ಮ ಅದ್ಭುತ ನಟನಾ ಕೌಶಲವನ್ನು ಪ್ರದರ್ಶಿಸಿ ದ್ದಾರೆ. ಜತೆಗೆ ಕುಸೇಲ್ದರಸೆ ನವೀನ್ ಡಿ. ಪಡೀಲ್ ಪ್ರಮುಖ ಪಾತ್ರದಲ್ಲಿದ್ದಾರೆ. ಈಗಾಗಲೇ ಕೆಲವು ತುಳು, ಕನ್ನಡ ಸಿನಿಮಾಗಳಲ್ಲಿ ನಟಿಸಿ ಭರವಸೆಯ ನಾಯಕ ನಟ ಎಂದೇ ಗುರುತಿಸಿಕೊಂಡಿರುವ ಅಥರ್ವ ಪ್ರಕಾಶ್ ಪ್ರಮುಖ ಪಾತ್ರದಲ್ಲಿದ್ದಾರೆ" ಎಂದವರು ಹೇಳಿದರು. ಚಿತ್ರದ ನಿರ್ದೇಶಕ ಸೂರಜ್ ಶೆಟ್ಟಿ ಮಾತನಾಡಿ "ಚಿತ್ರದಲ್ಲಿ ಹಾಸ್ಯಕ್ಕೆ ಯಾವುದೇ ಕೊರತೆಯಿಲ್ಲ, ಮನೋರಂಜನೆಯೂ ಕಡಿಮೆ ಇಲ್ಲ, ಸಂದೇಶ – ಕಥೆಯೂ ಅದ್ಭುತವಾಗಿದೆ. ನಾನ್‌ವೆಜ್ ವಿಷಯವೇ ಎಲ್ಲರಿಗೂ ಖುಷಿ ಕೊಡಲಿದೆ. ಪ್ರೀತಿಯ ಹಿಂದೆ ಹೋಗುತ್ತಿರುವ ಮುಗ್ಧ ಯುವಕನೊಬ್ಬನ ಸುತ್ತ ಹೆಣೆದಿರುವ ಕಥೆಯನ್ನು ಈ ಸಿನಿಮಾ ಹೊಂದಿದೆ. ಆದ ಕಾರಣ ಇದು ಯುವ ಸಮುದಾಯವನ್ನು ಸೆಳೆಯುವ ಸಾಧ್ಯತೆ ನಿಚ್ಚಳವಾಗಿದೆ. ಮಕ್ಕಳೊಂದಿಗೆ ಹೆತ್ತವರು ಜತೆಯಾಗಿ ಕುಳಿತು ನೋಡಬೇಕಾದ ಸಿನಿಮಾವಾಗಿದೆ.






ಸಿನಿಮಾದ ಕುರಿತು: ನಾನ್ ವೆಜ್ ಅದ್ಭುತ ಕಥಾವಸ್ತು ಹೊಂದಿರುವ ಅತ್ಯದ್ಭುತ ಸಿನಿಮಾ ಆಗಿದೆ. ನಾನು ಕೂಡ ಒಂದು ಗೌರವ ಪಾತ್ರದಲ್ಲಿ ಕಾಣಸಿಕೊಂಡಿದ್ದೇನೆ ಎಂದು ಹಿರಿಯ ನಟ ನವೀನ್ ಡಿ.ಪಡೀಲ್ ಅವರು ಟೀಸರ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ನಾನ್‌ವೆಜ್" ಶಬ್ದದಲ್ಲೇ ಗೂಢಾರ್ಥವಿದೆ. ನಾನು ವೆಜ್, ನಾನ್‌ವೆಜ್ – ಹೀಗೆ ಬೇರೆ ಬೇರೆ ಅರ್ಥ ಕೊಡುವ ಈ ಶಬ್ದದ ಹೆಸರನ್ನು ಇಟ್ಟುಕೊಂಡಿರುವ ಸಿನಿಮಾದ ಕಥೆ ಕೂಡ ಕುತೂಹಲಕಾರಿಯಾಗಿಯೇ ಸಾಗುತ್ತಿದೆ. ಕೇವಲ 99 ರೂಪಾಯಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಈ ಸಿನಿಮಾ ನೋಡಲು ಚಿತ್ರತಂಡ ಅವಕಾಶ ಮಾಡಿಕೊಟ್ಟಿದೆ.

ಅದರಲ್ಲಿ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಂಥ ಅತ್ಯುತ್ತಮ ವಿಷಯಗಳು ಇದ್ದೇ ಇರುತ್ತವೆ. ಸಾಲದ್ದಕ್ಕೆ ಈ ಸಿನಿಮಾಕ್ಕೆ ಯಶಸ್ವಿ ನಿರ್ದೇಶಕ ಕೆ.ಸೂರಜ್ ಶೆಟ್ಟಿ ಅವರ ನಿರ್ದೇಶನವೂ ಇರುವುದು ಮತ್ತೊಂದು ಪ್ಲಸ್ ಪಾಯಿಂಟ್. ಸೂರಜ್ ಶೆಟ್ಟಿ ಈ ಹಿಂದೆ ಸಾಕಷ್ಟು ಯಶಸ್ವಿ ಸಿನಿಮಾಗಳನ್ನು ನೀಡಿದವರು. ಆದ್ದರಿಂದ ಪ್ರಕಾಶ್ ಪಾಂಡೇಶ್ವರ ಮತ್ತು ಸೂರಜ್ ಶೆಟ್ಟಿ ಜೋಡಿ ಕೆಲಸ ಮಾಡಿರುವ "ನಾನ್‌ವೆಜ್" ಸಿನಿಮಾದ ಬಗ್ಗೆ ಎಲ್ಲರಲ್ಲೂ ನಿರೀಕ್ಷೆ ಅಪಾರವಿದೆ. ಆ ನಿರೀಕ್ಷೆಯನ್ನು ಮೀರಿಸುವಂಥ ಸಿನಿಮಾವಾಗಿ ಇದು ಹೊರಹೊಮ್ಮುವುದು ಖಚಿತ. ಈ ಸಿನಿಮಾದಲ್ಲಿ ಬಾಲ್ಯದಲ್ಲಿ ಎಲ್ಲರೂ ಅನುಭವಿಸಿದ ಸನ್ನಿವೇಶಗಳ ಗುಚ್ಛಗಳಿವೆ. ಆದ್ದರಿಂದ ಇದೊಂದು ಎಲ್ಲರ ಜೀವನದ ನಿಜಕಥೆ ಎಂದೇ ಹೇಳಬಹುದು. ಮಂಗಳೂರಿನ ಪ್ರತಿಭೆ ಅಥರ್ವ ಪ್ರಕಾಶ್ ಅವರ ಮನಸ್ಪರ್ಶಿ ಅಭಿನಯ, ನಾಯಕಿ ಸಂಜನಾ ಬುರ್ಲಿ ಅವರ ಆಕರ್ಷಕತೆ, ಹಾಸ್ಯದಲ್ಲಿ ಕಚಗುಳಿ ಇಡುವ ದೀಪಕ್ ರೈ ಪಾಣಾಜೆ, ಪ್ರಕಾಶ್ ತೂಮಿನಾಡ್, ಪುಷ್ಪರಾಜ್ ಬೊಳ್ಳಾರ್, ವಿಸ್ಮಯ ವಿನಾಯಕ್ ಹಾಸ್ಯ, ನವೀನ್ ಡಿ ಪಡೀಲ್, ರೂಪಾ ವರ್ಕಾಡಿ ಇವರೆಲ್ಲರೂ ಈ ಸಿನಿಮಾದಲ್ಲಿರುವುದು ನಿರೀಕ್ಷೆ ದುಪ್ಪಟ್ಟಾಗಲು ಮತ್ತೊಂದು ಪ್ರಮುಖ ಕಾರಣ. ಅಂದ ಹಾಗೆ ಫೆ. 6ರಂದು ಬಿಡುಗಡೆಯಾಗಲಿರುವ ಈ ಸಿನಿಮಾವನ್ನು ಮಲ್ಟಿಪ್ಲೆಕ್ಸ್‌ನಲ್ಲೂ ಕೇವಲ 99 ರೂಪಾಯಿಗೆ ನೋಡಬಹುದು. ಇದು ಸಿನಿಮಾ ಪ್ರಿಯರಿಗೆ ಚಿತ್ರತಂಡದ ಉಡುಗೊರೆ. ಆದ್ದರಿಂದ ಇಂಥದ್ದೊಂದು ಸದವಕಾಶವನ್ನು ಯಾರೂ ಮಿಸ್ ಮಾಡಿಕೊಳ್ಳದೆ ಮಲ್ಟಿಪ್ಲೆಕ್ಸ್‌ನಲ್ಲಿ ಚಿತ್ರನೋಡಿ ನಕ್ಕು ಹಗುರಾಗಿ.

# ಧರ್ಮ, ಸಂಸ್ಕೃತಿಯ ಸಂರಕ್ಷಣೆಯು ಹಿಂದೂ ಸಮಾಜದ ಜವಾಬ್ದಾರಿ; ಸ್ವಾಮಿ ಪ್ರಸಾದ್ ಮಂಗಳೂರು

## ಕುತ್ತಾರು ರಾಜರಾಜೇಶ್ವರಿ ಕ್ಷೇತ್ರದಲ್ಲಿ ಪೆರ್ಮನ್ನೂರು ಮಂಡಲ 'ಹಿಂದೂ ಸಂಗಮ'

**ಕುತ್ತಾರು:** ಧರ್ಮ, ಸಂಸ್ಕೃತಿಯ ರಕ್ಷಣೆ ಕಾರ್ಯಗಳು ಹಿಂದೂ ಸಂಘಟನೆಗಳು, ಕಾನೂನು, ಪೊಲೀಸ್ ಇಲಾಖೆಗಳದ್ದೆಂದು ಗ್ರಹಿಸದೆ,ಇಡೀ ಹಿಂದೂ ಸಮಾಜವು ಈ ವಿಚಾರದ ಬಗ್ಗೆ ಜವಬ್ದಾರಿ ವಹಿಸಬೇಕಿದೆ. ಭಾರತದ ಒಳಗಡೆ ನಡೆಯುತ್ತಿರುವ ವೈಚಾರಿಕ ದಾಳಿಯನ್ನ ದಿಟ್ಟವಾಗಿ ಎದುರಿಸಲು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಹಿಂದೂ ಸಂಗಮದಂತಹ ಕಾರ್ಯಕ್ರಮಗಳನ್ನ ದೇಶಾದಾದ್ಯಂತ ಆಯೋಜಿಸುತ್ತಿದೆಯೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘ,ಮಂಗಳೂರು ವಿಭಾಗ ಸಹ–ವ್ಯವಸ್ಥಾ ಪ್ರಮುಖ್ ಸ್ವಾಮಿ ಪ್ರಸಾದ್ ಮಂಗಳೂರು ಹೇಳಿದರು.

ಉಳ್ಳಾಲ ತಾಲೂಕು ಹಿಂದೂ ಸಂಗಮ ಆಯೋಜನಾ ಸಮಿತಿ ವತಿಯಿಂದ ಕುತ್ತಾರು ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಭಾನುವಾರದಂದು ನಡೆದ ಪೆರ್ಮನ್ನೂರು ಮಂಡಲ ಹಿಂದೂ ಸಂಗಮವನ್ನುದ್ದೇಶಿಸಿ ಅವರು ದಿಕ್ಸೂಚಿ ಭಾಷಣ ನೆರವೇರಿಸಿ ಮಾತನಾಡಿದರು.

ಇಡೀ ದೇಶದಾದ್ಯಂತ ಎಂಭತ್ತು ಸಾವಿರ ಸ್ಥಳಗಳಲ್ಲಿ ಇದೇ ರೀತಿ ಹಿಂದೂಗಳು ರಾಷ್ಟ್ರ,ಧರ್ಮ,ಸಂಸ್ಕೃತಿ,ಸಮಾಜದಲ್ಲಿ ನಮ್ಮ ಕರ್ತವ್ಯ ಏನೆಂದು ಚಿಂತನೆ ನಡೆಸಲು ಒಟ್ಟು ಸೇರುತ್ತಿದ್ದಾರೆ.ಇದು ಸಂಘವನ್ನ ವಿಜೃಂಭಿಸಿ ಮಾತನಾಡುವ ಭಾಷಣದ ಕಾರ್ಯಕ್ರಮವಲ್ಲ.ಹಿಂದೂವಾಗಿ ಧರ್ಮದ ಉಳಿವಿಗೆ ನಾವೇನು ಮಾಡಬೇಕೆಂಬುದರ ಬಗ್ಗೆ ತಿಳಿಯುವ ಕಾರ್ಯಕ್ರಮವಾಗಿದೆ. ಯಾರನ್ನೂ ಕೂಡ ಇಲ್ಲಿಂದ ಓಡಿಸಿ ಹಿಂದೂ ರಾಷ್ಟ್ರವನ್ನು ಕಟ್ಟುವುದು ನಮ್ಮ ಸಂಸ್ಕೃತಿಯಲ್ಲ.



ಎಲ್ಲರನ್ನ ಒಟ್ಟು ಸೇರಿಸಿ ದೇಶವನ್ನ ಪರಮ ವೈಭವದತ್ತ ಕೊಂಡೊಯ್ಯುವುದೇ ನಮ್ಮ ಹಿಂದೂ ಸಂಸ್ಕೃತಿಯಾಗಿದೆಯೆಂದರು.

ಮಾಡೂರು ಮರಿಯಾಣಪಾಲು ಶಿವಗಿರಿ ಶ್ರೀ ಶಿವ ದುರ್ಗಾಂಭ ಮಠದ ಶ್ರೀ ದುರ್ಗಾನಂದ ಸ್ವಾಮೀಜಿಯವರು ಮಾತನಾಡಿ ಸಂಘದಲ್ಲಿದ್ದರೆ ಸಂಸ್ಕಾರ ಉಳಿಯಲು ಸಾಧ್ಯ. ಸಂಘದಲ್ಲಿರುವ ಅನೇಕ ಸ್ವಯಂ ಸೇವಕರಿಗೆ ಇಂದು ಸಮಾಜದ ಸಹಕಾರ ಸಿಗುತ್ತಿಲ್ಲ. ಯಾವುದೇ ಆಶೆ,ಆಕಾಂಕ್ಷೆಗಳಿಲ್ಲದೆ ಹಿಂದೂಗಳೆಲ್ಲರೂ ಒಟ್ಟಾಗಿ ನಮ್ಮ ಧರ್ಮ ರಕ್ಷಣೆಗೆ ಮುಂದಾಗಬೇಕಿದೆ. ಇಲ್ಲವಾದರೆ ನೆರೆ ರಾಷ್ಟ್ರದ ಹಿಂದೂಗಳಿಗಾದ ಪರಿಸ್ಥಿತಿಯೇ ಇಲ್ಲಿನ ಹಿಂದೂಗಳಿಗೂ ಎದುರಾಗಬಹುದು.ಹಿಂದೂ ಧರ್ಮದ ಪ್ರತೀಕವಾದ ಕೇಸರಿ ಧ್ವಜವನ್ನೇ ಹಿಡಿಯಬಾರದೆಂದು ಧರ್ಮದೊಳಗೆ ರಾಜಕೀಯ ತರಲಾಗುತ್ತಿದೆ. ಧರ್ಮದ ಒಳಗೆ ರಾಜಕೀಯ ಬಂದರೆ ಧರ್ಮ ಉಳಿಯಲು ಸಾಧ್ಯವಿಲ್ಲವೆಂದರು.

> ಧರ್ಮ,ಸಂಸ್ಕೃತಿಯ ರಕ್ಷಣೆಯ ನಿಟ್ಟಿನಲ್ಲಿ ನಮ್ಮ ಮನೆಯ ಹೆಣ್ಮಕ್ಕಳು ದಾರಿ ತಪ್ಪದಂತೆ ಪೋಷಕರು ಜಾಗರೂಕತೆ ವಹಿಸಬೇಕಿದೆ. ಹೆತ್ತವರಿಗೆ ಹೆಗ್ಗಣ ಮುದ್ದೆಂಬ ಮಾತಿನಂತೆ ನಮಗೆ ನಮ್ಮ ಮಕ್ಕಳ ಮೇಲೆ ತೊಂಭತ್ತು ಶೇಕಡದಷ್ಟು ಪ್ರೀತಿ ಇದ್ದರೂ ಸಹ ಅವರ ಮೇಲೆ ಒಂದು ಶೇಖಡದಷ್ಟಾದರೂ ಸಂದೇಹವನ್ನೂ ಇಡಬೇಕಿದೆ.ಯಾಕೆಂದರೆ ಮಕ್ಕಳ ಕೈಯಲ್ಲಿರುವ ಮೊಬೈಲ್ ಫೋನ್‌ಗಳೇ ಪೋಷಕರಿಗೆ ತಿಳಿಯದಂತೆ ಅನಾಹುತಗಳನ್ನ ಸೃಷ್ಟಿಸುತ್ತಿವೆ.
>
> ■ **ಗಾಯತ್ರಿ ಕಿಶೋರ್,** ಮಹಿಳಾ ಪ್ರಮುಖ್ ಹಿಂದೂ ಸಂಗಮ ಆಯೋಜನಾ ಸಮಿತಿ

ಕಾರ್ಯಕ್ರಮದಲ್ಲಿ ಹಿರಿಯ ದೈವ ನರ್ತಕರಾದ ಮಾಯಿಲ ಕುತ್ತಾರು ಅವರನ್ನ ಸನ್ಮಾನಿಸಲಾಯಿತು.

ಕಾಪಿಕಾಡು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ ಅಧ್ಯಕ್ಷತೆ ವಹಿಸಿದ್ದರು. ಕುತ್ತಾರು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಉಪಾಧ್ಯಕ್ಷರಾದ ಜಗದೀಶ ಸಾಲಿಯಾನ್ ,ಉಳ್ಳಾಲ ತಾಲೂಕು ಹಿಂದೂ ಸಂಗಮ ಆಯೋಜನ ಸಮಿತಿಯ ಮಹಿಳಾ ಪ್ರಮುಖ್ ಗಾಯತ್ರಿ ಕಿಶೋರ್ ಉಪಸ್ಥಿತರಿದ್ದರು.

ಸುರೇಶ್ ಆಚಾರ್ಯ ದೇರಳಕಟ್ಟೆ ಸ್ವಾಗತಿಸಿದರು.ಜೀವನ್ ಕುಮಾರ್ ತೊಕ್ಕೊಟ್ಟು ನಿರೂಪಿಸಿದರು.ಪ್ರದೀಪ್ ಕೆರೆಬೈಲ್ ವಂದಿಸಿದರು.

## 19 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಉಳ್ಳಾಲ: 19 ವರ್ಷಗಳಿಂದ ತಲೆಮರೆಸಿಕೊಂಡಿದ್ದ ವಾರಂಟ್ ಹೊಂದಿದ್ದ ಆರೋಪಿಯನ್ನು ಉಳ್ಳಾಲ ಪೊಲೀಸರು ಬಂಧಿಸಿದ್ದಾರೆ. ಕೈಕೋ ರೋಡ್ ಸುಭಾಷನಗರ ನಿವಾಸಿ ಅನ್ವರ್ ಯಾನೆ ಅನ್ವರ್ ಹುಸೈನ್ (42) ಬಂಧಿತ. ತಡೆದು ಹಣದ ಬೆದರಿಕೆ, ಅವಮಾನಿಸಿದ ಹಿನ್ನೆಲೆಯಲ್ಲಿ 2007 ರಲ್ಲಿ ಐಪಿಸಿ 341, 384, 504, 506 ರ ಅಡಿ ಪ್ರಕರಣ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿ ಜೆಎಂಎಫ್ ಸಿ ಮೂರನೇ ನ್ಯಾಯಾಲಯಕ್ಕೆ ಹಾಜರಾಗದೇ 19 ವರ್ಷಗಳಿಂದ ತಲೆಮರೆಸಿಕೊಂಡಿದ್ದವನನ್ನು ಉಳ್ಳಾಲ ಪೊಲೀಸರು ಬಂಧಿಸದ್ದಾರೆ.

## ಮಂಜನಾಡಿ ಪೊಟ್ಟಳಿಕೆ ರಿಕ್ಷಾ ಚಾಲಕ ನಾಪತ್ತೆ

**ಕೊಣಾಜೆ :** ಮಂಜನಾಡಿ ಗ್ರಾಮದ ಪೊಟ್ಟಳಿಕೆ ಸಾರ್ತಬೈಲ್ ಕೋಡಿ ನಿವಾಸಿ, ರಿಕ್ಷಾ ಚಾಲಕ ಅಬ್ದುಲ್ ಸಮದ್ (52) ಫೆ.4ರಿಂದ ಕಾಣೆಯಾಗಿರುವ ಬಗ್ಗೆ ಅವರ ಪತ್ನಿ ಆಯಿಶಾ ಕೊಣಾಜೆ ಠಾಣೆಗೆ ದೂರು ನೀಡಿದ್ದಾರೆ.ಮಧ್ಯಾಹ್ನ ಬಾಡಿಗೆಗೆ ಹೋದವರು ಮರಳಿ ಬಂದಿಲ್ಲ. ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದೆ. ಅಬ್ದುಲ್ ಸಮದ್ 5 ವರ್ಷದ ಹಿಂದೆ ಮನೆ ಬಿಟ್ಟು ಹೋದವರು 5 ದಿನಗಳು ಕಳೆದು ಮನೆಗೆ ಬಂದಿದ್ದರು. ಅಬ್ದುಲ್ ಸಮದ್‌ರ ಬಗ್ಗೆ ಇತರ ರಿಕ್ಷಾ ಚಾಲಕರಲ್ಲಿ, ಸಂಬಂಧಿಕರಲ್ಲಿ ವಿಚಾರಿಸಿ, ಎಲ್ಲಾ ಕಡೆಗಳಲ್ಲಿ ಹುಡುಕಾಡಿದರೂ ಸಿಕ್ಕಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.



↗1ನೇ ಪುಟದಿಂದ

## ನಾಯಿಯಿಂದಲೇ ಹತ್ಯೆ ವರದಿ ಸಾಬೀತು

ಫಾರೆನ್ಸಿಕ್ ತಂಡ ಪ್ರಾಣಿ ದಾಳಿಯಿಂದ ಸಾವನ್ನಪ್ಪಿರುವುದನ್ನು ಪ್ರಾಥಮಿಕ ಹಂತದಲ್ಲಿ ಸ್ಪಷ್ಟಪಡಿಸಿತ್ತು. ಮತ್ತೆ ಮೃತರ ಸಂಬಂಧಿಕರು ಸಂಶಯ ವ್ಯಕ್ತಪಡಿಸಿ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆದರೆ ಅಂದು ಘಟನೆ ನಡೆದ ಮೂರು ದಿನಗಳಲ್ಲಿ ಸಿಕ್ಕಂತಹ ಆರಂಭದ ಎಫ್ ಎಸ್ ಎಲ್ ವರದಿಯಲ್ಲಿ ನಾಯಿ ಹಾಗೂ ಮೃತರ ದೇಹದ ಮೇಲಿನ ವರದಿಗಳನ್ನು ಸಂಗ್ರಹಿಸಿದ ಆಧಾರದ ಮೇರೆಗೆ ನಾಯಿ ದಾಳಿಯ ವರದಿಯನ್ನು ನೀಡಿದ್ದರು. ಆದರೆ ಕಾನೂನು ರೀತ್ಯ ಸ್ಪಷ್ಟಪಡಿಸುವ ಸಲುವಾಗಿ ವರದಿಯನ್ನು ಮತ್ತೆ ಹೈದರಾಬಾದ್ ಎಫ್ ಎಸ್ ಎಲ್ ಮುಖ್ಯ ಸಂಸ್ಥೆಗೆ ಕಳುಹಿಸಲಾಗಿತ್ತು. ಆದರೆ ಹಲವು ದಿನ ಕಳದರೂ ವರದಿ ಬಾರದ ಹಿನ್ನೆಲೆಯಲ್ಲಿ ಉಳ್ಳಾಲವಾಣಿ ತಂಡ ಪೊಲೀಸ್ ಇಲಾಖೆ, ಸೋಮೇಶ್ವರ ಮುಖ್ಯಾಧಿಕಾರಿ ಅವರನ್ನು ನಿರಂತರ ಸಂಪರ್ಕಿಸುತ್ತಲೇ ಬಂದಿತ್ತು. ತಡವಾಗಿರುವ ಕುರಿತು ಪ್ರಶ್ನೆಯನ್ನು ಹಾಕುತ್ತಲೇ ಇತ್ತು. ಇದೀಗ ಘಟನೆ ನಡೆದು ಮೂರು ತಿಂಗಳುಗಳ ನಂತರ ಅಂತಿಮ ವರದಿ ಬಂದಿದ್ದು, ಅದನ್ನು ಜಿಲ್ಲೆಯ ಫಾರೆನ್ಸಿಕ್ ತಂಡ ಪರಿಶೀಲಿಸಿದ್ದು, ಮದ್ಯ ಸೇವನೆ ನಡೆಸಿರುವುದು ಕಂಡುಬಂದಿದೆ. ಆದರೆ ಅದರಿಂದ ಸಾವನ್ನಪ್ಪಲು ಅಸಾಧ್ಯ. ನಾಯಿ ದಾಳಿ ಉಲ್ಲೇಖವನ್ನು ಖಚಿತಪಡಿಸಿ ಅಂತಿಮ ವರದಿಯನ್ನು ನೀಡಿದೆ. ಘಟನೆಗೆ ಕಾರಣವಾದ ಸ್ಥಳೀಯಾಡಳಿತ ವರದಿ ಪ್ರಕಟವಾದ ತಕ್ಷಣವೇ ರೂ. 5 ಲಕ್ಷ ಜೀವ ನಷ್ಟ ಪರಿಹಾರ ನೀಡಬೇಕು ಅನ್ನುವ ಸುಪ್ರೀಂ ಕೋರ್ಟಿನ ಆದೇಶವಿದ್ದು, ಅದರಂತೆ ನಷ್ಟ ಪರಿಹಾರ ವನ್ನು ದಯಾನಂದ ಗಟ್ಟಿ ಕುಟುಂಬಕ್ಕೆ ನೀಡಲು ಸೋಮೇಶ್ವರ ಪುರಸಭೆ ಸಿದ್ಧತೆ ನಡೆಸಿದೆ.

# ಶಿಕ್ಷಕ, ಸಿಬ್ಬಂದಿ ಪ್ರಾಮಾಣಿಕತೆಯ ಪ್ರಯತ್ನದಿಂದ ಅಂಬ್ಲಮೊಗರು ಶಾಲೆ ಉತ್ತಮ ಸ್ಥಾನಕ್ಕೆ ಏರುವುದು ನಿಶ್ಚಿತ: ಕ್ಷೇತ್ರ ಶಿಕ್ಷಣಾಧಿಕಾರಿ ಈಶ್ವರ್

**ಉಳ್ಳಾಲ:** ಶಿಕ್ಷಕರು ಮಕ್ಕಳಿಗೆ ಕೇವಲ ಪಾಠವನ್ನಷ್ಟೇ ಅಲ್ಲದೆ, ಉತ್ತಮ ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ಬೆಳೆಸುವ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿದ್ದಾರೆ. ಅಂಬ್ಲಮೊಗರು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಮಸ್ತ ಸಿಬ್ಬಂದಿ ಪ್ರಾಮಾಣಿಕತೆ, ನಿಷ್ಠೆ ಮತ್ತು ಸೇವಾಭಾವದಿಂದ ನಿರ್ವಹಿಸುತ್ತಿರುವ ಕಾರ್ಯದಿಂದಾಗಿ, ಈ ಶಾಲೆ ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಸ್ಥಾನಕ್ಕೆ ಏರುವುದು ನಿಶ್ಚಿತ ಎಂದು ಮಂಗಳೂರು ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್ . ಆರ್ ಈಶ್ವರ್ ಅಭಿಪ್ರಾಯಪಟ್ಟರು.

ಅವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅಂಬ್ಲಮೊಗರು ಇಲ್ಲಿ ಜರಗಿದ ಶಾಲಾ ಮಕ್ಕಳ ಪ್ರತಿಭಾ ಸಿಂಚನ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು. ಶಾಲೆಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಕ್ರಿಯಾಶೀಲರಾಗಿ, ಸಂಸ್ಥೆಯ ಪ್ರಗತಿಗಾಗಿ ಏಕಮನಸ್ಸಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸಣ್ಣ ಶಿಕ್ಷಕನಿಗೆ ಆಗುವ ತೊಂದರೆಯನ್ನೂ ಸಹ ನ್ಯಾಯಯುತವಾಗಿ, ಸಮಯಕ್ಕೆ ಸರಿಯಾಗಿ ಪರಿಹರಿಸುವಂತಹ ಮಾನವೀಯ ವ್ಯಕ್ತಿತ್ವದ ಮುಖ್ಯೋಪಾಧ್ಯಾಯರು ಶಾಲೆಗೆ ದಿಕ್ಕು ತೋರಿಸುತ್ತಿದ್ದಾರೆ. ಸ್ಪೀಕರ್ ಯು.ಟಿ.ಖಾದರ್ ಅವರ ಪ್ರೇರಣಾದಾಯಕ ಮಾತುಗಳನ್ನು ಪ್ರೇರಣೆಯಾಗಿಸಿದ ಅಂಬ್ಲಮೊಗರು ಶಾಲೆಯ ವಿದ್ಯಾರ್ಥಿನಿ ಹನ್ನತ್ ಮತ್ತು ಕೊಣಾಜೆ ಶಾಲೆಯ ನಿಶಾ ಅವರನ್ನು ತಾಲೂಕು ಮಟ್ಟದಲ್ಲಿ ಹೆಚ್ಚು ಅಂಕ ಗಳಿಸಿದ ಹಿನ್ನೆಲೆಯಲ್ಲಿ ರೂ.50,000 ನೀಡಿ ಗೌರವಿಸಿರುವುದು ಶ್ಲಾಘನೀಯ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂಬ್ಲಮೊಗರು ಗ್ರಾಮ ಪಂಚಾಯತ್ ಅಧ್ಯಕ್ಷ ಮೊಹಮ್ಮದ್ ಇಕ್ಬಾಲ್ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪಂಚಭಾಗ್ಯ ಯೋಜನೆ ಅನುಷ್ಠಾನ ಸಮಿತಿ ಉಳ್ಳಾಲ ತಾಲ್ಲೂಕು ಅಧ್ಯಕ್ಷ ಮೊಹಮ್ಮದ್ ರಫೀಕ್ ಮಾತನಾಡಿ, ಮನುಷ್ಯನು ನಿಜವಾದ ಮನುಷ್ಯನಾಗಲು, ವೇದಿಕೆಯಲ್ಲಿ ನಿಂತು ಆತ್ಮವಿಶ್ವಾಸದಿಂದ ಮಾತನಾಡಲು ಶಿಕ್ಷಕರೇ ಪ್ರಮುಖ ಕಾರಣರಾಗಿರುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಧೈರ್ಯವನ್ನು ಮಕ್ಕಳಿಗೆ ನೀಡುವುದು ಶಾಲೆಯ ಸಕಾರಾತ್ಮಕ ವಾತಾವರಣವೇ. ಇಂದಿಗೂ ಕೆಲವರ ಮನಸ್ಸಿನಲ್ಲಿ ಸರ್ಕಾರಿ ಶಾಲೆ ಅಂದರೆ ಶಾಲೆಯೇ ಅಲ್ಲ ಎಂಬ ತಪ್ಪು ಕಲ್ಪನೆ ಇದೆ. ಆದರೆ ಅಂಬ್ಲಮೊಗರುವಿನ ಸರ್ಕಾರಿ ಶಾಲೆ ಈ ಭ್ರಮೆಯನ್ನು ಮುರಿದಿದೆ. ರಾಜ್ಯ ಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯರಾದ ಜಗದೀಶ್ ಶೆಟ್ಟಿ ಅವರಂತಹ ಸಮರ್ಪಿತ ಶಿಕ್ಷಕರ ನೇತೃತ್ವ ಈ ಶಾಲೆಗೆ ಹೆಮ್ಮೆಯಾಗಿದೆ.

> **'ಮುಂದಿನ ವರ್ಷ ಎಲ್ ಕೆಜಿ ಆರಂಭ 30 ಮಂದಿ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ'**
>
> 11 ಮಂದಿ ಶಿಕ್ಷಕರ ಅಕ್ಷಯ ಶ್ರಮ ಹಾಗೂ ಸಮರ್ಪಿತ ಸೇವೆಯಿಂದ ಶಾಲೆಯ ಸಮಗ್ರ ಅಭಿವೃದ್ಧಿ ಸಾಧ್ಯವಾಗಿದೆ. ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಉದ್ದೇಶದಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಎಲ್‌ಕೆಜಿ ತರಗತಿಯನ್ನು ಆರಂಭಿಸಲಾಗುತ್ತಿದೆ. ಈ ತರಗತಿಗೆ ಕೇವಲ 30 ಮಂದಿ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತ ಪೋಷಕರು ಸಾಧ್ಯವಾದಷ್ಟು ಬೇಗ ತಮ್ಮ ಮಕ್ಕಳ ನೋಂದಾವಣೆಯನ್ನು ಪೂರ್ಣಗೊಳಿಸುವಂತೆ ವಿನಂತಿ. ಶಾಲೆಯಲ್ಲಿ 1ರಿಂದ 10ನೇ ತರಗತಿಯವರೆಗೆ ಎಲ್ಲಾ ತರಗತಿಗಳಿಗೂ ಸುಸಜ್ಜಿತ ಮೂಲಸೌಕರ್ಯ, ಶಿಸ್ತಿನ ಕಲಿಕಾ ವಾತಾವರಣ ಹಾಗೂ ಅನುಭವಸಂಪನ್ನ ಶಿಕ್ಷಕರ ಮಾರ್ಗದರ್ಶನ ಲಭ್ಯವಿದೆ. ಗೌರವಾನ್ವಿತ ಇತಿಹಾಸವನ್ನು ಹೊಂದಿರುವ ಈ ಶಾಲೆ, 101 ವರ್ಷಗಳ ಕಾಲ ನಿರಂತರವಾಗಿ ಶಾಲಾ ವಾರ್ಷಿಕೋತ್ಸವವನ್ನು ಯಶಸ್ವಿಯಾಗಿ ಆಚರಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಮುಂದಿನ ದಿನಗಳಲ್ಲಿಯೂ ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡಿ, ಮಾದರಿ ಶಿಕ್ಷಣ ಸಂಸ್ಥೆಯಾಗಿ ಬೆಳೆಯಲಿ ಎಂಬುದು ಎಲ್ಲರ ಆಶಯ.
>
> ■ **ಜಗದೀಶ್ ಶೆಟ್ಟಿ ಎ** ಶಾಲಾ ಮುಖ್ಯೋಪಾಧ್ಯಾಯರು

ಶತಮಾನೋತ್ಸವದ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ನೀಡಿದ ದೇಣಿಗೆಯ ಫಲವಾಗಿ ಇಲ್ಲಿನ ವಿದ್ಯಾರ್ಥಿಗಳು ಶೈಕ್ಷಣಿಕವಾಗಿಯೂ, ಸೌಲಭ್ಯಗಳ ದೃಷ್ಟಿಯಿಂದಲೂ ಎಷ್ಟೊಂದು ಪ್ರಗತಿ ಸಾಧಿಸಿದ್ದಾರೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.ಇದು ಸರ್ಕಾರಿ ಶಾಲೆಗಳ ಶಕ್ತಿಯನ್ನೂ, ಶಿಕ್ಷಕರ ಬದ್ಧತೆಯನ್ನೂ ಪ್ರತಿಬಿಂಬಿಸುವ ಜೀವಂತ ಉದಾಹರಣೆ ಎಂದರು.

ಅಂಬ್ಲಮೊಗರು ಗ್ರಾಮ ಪಂಚಾಯತ್ ಸದಸ್ಯರಾದ ಸುಭೋಧ್ ಶೆಟ್ಟಿ,ಅಂಬ್ಲಮೊಗರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ವಿಠಲ ಶೆಟ್ಟಿ , ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮಂಗಳೂರು ದಕ್ಷಿಣ ವಲಯ ಸಮಿತಿ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣರಾವ್ ಟಿ ಡಿ, , ಎಸ್ ಡಿ ಎಂ ಸಿ ಅಧ್ಯಕ್ಷರಾದ ಅಬುಸಾಲಿ, ಮುನ್ನೂರು ಸಿ ಆರ್ ಪಿ ರೆಹನಾ, ಪದವಿಪೂರ್ವ ಹೆಣ್ಣು ಮಕ್ಕಳ ಕಾಲೇಜು ದೇರಳಕಟ್ಟೆ ಇಲ್ಲಿನ ಉಪನ್ಯಾಸಕ ಮಂಜುನಾಥ್, ಸರಕಾರಿ ಪ್ರೌಢಶಾಲೆ ಅಂಬ್ಲಮೊಗರು ಮುಖ್ಯ ಶಿಕ್ಷಕ ನಾಗರಾಜ್, ಮುನ್ನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಪ್ರಮೀಳಾ ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕ, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಜಗದೀಶ ಶೆಟ್ಟಿ ಎ ಸ್ವಾಗತಿಸಿದರು , ನಳಿನಾಕ್ಷಿ ನಿರೂಪಿಸಿದರು. ಗೀತಾ ಕೆ ಮತ್ತು ವಿದ್ಯಾ ವಂದಿಸಿದರು. ಶ್ವೇತಾ ಎಂ ಪೈ ಪ್ರಶಸ್ತಿ ಪುರಸ್ಕೃತರ ವಿವರ ನೀಡಿದರು.

# ಅನಾರೋಗ್ಯಕರ ಪೈಪೋಟಿ: ಖಾಸಗಿ ಬಸ್‌ಗಳಿಗೆ ಸಂಕಷ್ಟ

**ಉಳ್ಳಾಲ;** ದ.ಕ ಜಿಲ್ಲಾ ಖಾಸಗಿ ಬಸ್ಸಿಗೆ ಸುಮಾರು ವರ್ಷಗಳ ಇತಿಹಾಸವಿದೆ. ಸಾರ್ವಜನಿಕರು 1950 ರಿಂದ 1970ರ ದಶಕದವರೆಗೂ ಬಸಿಗಾಗಿ ಪರದಾಡುತ್ತಿದ್ದರು. ಆದರೆ ಇಂದು ನಿಮಿಷಕ್ಕೊಂದರಂತೆ ನಮ್ಮ ಜಿಲ್ಲೆಯ ಮೂಲೆ ಮೂಲೆಗೆ, ಹಳ್ಳಿ ಹಳ್ಳಿಗೆ ಬಸ್ ಸಂಚಾರವನ್ನು ಒದಗಿಸಿ ಜಿಲ್ಲೆಯ ಜನರಿಗೆ ಬಸ್ಸು ಸಂಚಾರದ ಚುರುಕನ್ನು ಮುಟ್ಟಿಸಿದ ಸಂಪೂರ್ಣ ಖ್ಯಾತಿ ಜಿಲ್ಲೆಯ ಖಾಸಗಿ ಬಸ್ ಮಾಲಕರಿಗೆ ಸಲ್ಲತ್ತೆ. ಆದರೆ ಇತ್ತೀಚೇಗೆ ಶಕ್ತಿ ಯೋಜನೆ ಮೂಲಕ ಪ್ರೈವೇಟ್ ಬಸ್ ಮಾಲೀಕರಿಗೆ ಹೊಡೆತ ಬಿದ್ದಿದ್ದು, ಅಲ್ಪಸ್ವಲ್ಪ ಆದಾಯಗಳನ್ನು ಗಳಿಸುತ್ತಿದ್ದಾರೆ. ಇದರ ಮಧ್ಯೆ ಬಸ್ ಸೇವೆ ಚೆನ್ನಾಗಿ ಇರುವ ಕಡೆಗಳಲ್ಲಿ ನಿಮಿಷಕ್ಕೊಂದು ಬಸ್ ಓಡಿಸುವ ಮೂಲಕ ಕೆಎಸ್‌ಆರ್‌ಟಿಸಿ ಖಾಸಗಿ ಬಸ್ ಮಾಲೀಕರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಈ ಬಗ್ಗೆ ದಕ್ಷಿಣ ಕನ್ನಡ ಬಸ್ ಮಾಲೀಕರ ಸಂಘದ ಅಧ್ಯಕ್ಷರಾ ಅಝೀಝ್ ಪರ್ತಿಪ್ಪಾಡಿ ಮಾತನಾಡಿ, ಕಳವಳ ವ್ಯಕ್ತಪಡಿಸಿದ್ದಾರೆ.

ಅನಾರೋಗ್ಯಕರ ಪೈಪೋಟಿಯಿಂದಾಗಿ ಖಾಸಗಿ ಬಸ್ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಯ ಹಲವು ಭಾಗಗಳಲ್ಲಿ ಬಸ್ ಸೇವೆಗಳು ಸರಿಯಾದ ಸಮಯಕ್ಕಿಲ್ಲ. ಅಂತಹ ಕಡೆಗಳಲ್ಲಿ ಬಸ್ಸ ಸೇವೆಗಳನ್ನು ಆರಂಭಿಸಲಿ. ಅದರ ಬದಲು ತೊಕ್ಕೊಟ್ಟು, ತಲಪಾಡಿ, ಭಾಗಗಳಿಗೆ ಅನಗತ್ಯವಾಗಿ ಬಸ್‌ಗಳನ್ನು ಓಡಿಸಲಾಗುತ್ತಿದೆ. ಇದು ಹೀಗೇಯೇ ಮುಂದುವರೆದ ಪಕ್ಷದಲ್ಲಿ ಖಾಸಗಿ ಬಸ್ ಉದ್ಯಮವೇ ನಿಂತು ಹೋಗಲಿದೆ. ಕೆಎಸ್‌ಆರ್‌ಟಿಸಿ ಏಕಸ್ವಾಮ್ಯ ಸಾಧಿಸಿದರೆ ಮತ್ತೆ ಜನರಿಗೆ ಸಮಸ್ಯೆ ಆಗಲಿದೆ.



ಇನ್ನು ಮಂಗಳೂರಿಗೆ ಇ ಬಸ್‌ಗಳನ್ನು ಕೊಡುವುದಾಗಿ ಸರಕಾರ ಹೇಳಿರುವುದು ತಿಳಿದುಬಂದಿದೆ. ಈ ಬಸ್‌ಗಳನ್ನು ದೂರದ ಊರುಗಳಲ್ಲಿ ಬಸ್ ಸೇವೆ ಇಲ್ಲದ ಸ್ಥಳಗಳಲ್ಲಿ ಓಡಿಸಿದರೆ ಒಳಿತು. ಇಲ್ಲವಾದರೆ ಮತ್ತಷ್ಟು ಸಂಕಷ್ಟಕ್ಕೆ ಮಾಲೀಕರು ಗುರಿಯಾಗುತ್ತಾರೆ. ಈಗಾಗಲೇ ಶಕ್ತಿ ಯೋಜನೆಯಿಂದಾಗಿ ಮಹಿಳೆಯರೆಲ್ಲರೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಪ್ರಯಾಣಿಸುತ್ತಾರೆ. ಅವರ ಜೊತೆ ಪುರುಷರು ಇದ್ದರೆ ಅವರೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಹೋಗುತ್ತಾರೆ. ಆದರೆ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾಗುತ್ತಿದೆ ಆ ಬಗ್ಗೆ ನಮಗೆ ಯಾವುದೇ ಆಕ್ಷೇಪವಿಲ್ಲ.

ಸುದ್ದಿಗೋಷ್ಠಿಯಲ್ಲಿ ದ.ಕ.ಬಸ್ ಮಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಪಿಲಾರ್, ಉಪಾಧ್ಯಕ್ಷರಾದ ರಾಮಚಂದ್ರ ನಾಯ್ಕ್, ಜೊತೆ ಕಾರ್ಯದರ್ಶಿ ರಾಜೇಶ್ ಟಿ ಉಪಸ್ಥಿತರಿದ್ದರು.

# ನೂತನ ನಗರ ಗ್ರಾಮಾಂತರ ಯೋಜನಾ ಆಯುಕ್ತ ಶಿವಾನಂದ ಕಪಾಶಿಯನ್ನು ಭೇಟಿಯಾದ ಸದಾಶಿವ ಉಳ್ಳಾಲ್



ಬೆಂಗಳೂರು: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನೂತನ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿರುವ ಹಿರಿಯ ಐಎಎಸ್ ಅಧಿಕಾರಿ ಶಿವಾನಂದ ಕಪಾಶಿ ಅವರನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ನಗರ ಯೋಜನಾ ಪ್ರಾಧಿಕಾರಗಳ ಒಕ್ಕೂಟದ ಅಧ್ಯಕ್ಷ ಹಾಗೂ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಮತ್ತು ಸುಳ್ಯ ನಗರ ಯೋಜನಾ ಪ್ರಾಧಿಕಾರ (ಸೂಡ) ಅಧ್ಯಕ್ಷ ಕೆ.ಎಂ. ಮುಸ್ತಫ ಅವರು ಭೇಟಿ ಮಾಡಿದರು.ಭೇಟಿಯ ಸಂದರ್ಭದಲ್ಲಿ ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಕುರಿತು ಚರ್ಚೆ ನಡೆಯಿತು.

# ಸೌಹಾರ್ದಕ್ಕೆ ಸಾಕ್ಷಿಯಾದ ಪಿಲಾರು ನಾಗಬ್ರಹ್ಮ ಕ್ಷೇತ್ರ ವಾರ್ಷಿಕೋತ್ಸವ

**ಪಿಲಾರು:** ಭಾರತೀಯ ಪರಂಪರೆಯ ಉಸಿರು ಭಕ್ತಿ. ಸರ್ವಧರ್ಮದವರು ಅವರವರ ಭಕ್ತಿಯನ್ನು ಆಚರಣೆ ಮಾಡುತ್ತಾರೆ. ದೇಶವೇ ಭಕ್ತಿ ಮೇಲೆ ನಿಂತಿದೆ. ಭಗವಂತನ ಇಚ್ಛೆ ಇಲ್ಲದಿದ್ದರೆ ಹುಲ್ಲು ಕಡ್ಡಿಯೂ ಅಲುಗಾಡದು ಎಂದು ಕಟೀಲು ದುರ್ಗಾಪರಮೇಶ್ವರೀ ದೇವಸ್ಥಾನದ ಅರ್ಚಕರಾದ ಗೋಪಾಲಕೃಷ್ಣ ಅಸ್ರಣ್ಣರು ಹೇಳಿದರು. ಇವರು ಶ್ರೀ ನಾಗಬ್ರಹ್ಮ ಕ್ಷೇತ್ರ ಪಿಲಾರು ಲಕ್ಷ್ಮೀಗುಡ್ಡೆಯಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪ್ರಧಾನ ಅರ್ಚಕರಾಗಿದ್ದ ಕೀರ್ತಿಶೇಷ ಬ್ರಹ್ಮಶ್ರೀ ವೇದಮೂರ್ತಿ ಬಿ.ಕೇಶವ ಜೋಗಿತ್ತಾಯ ಬಂಗಳಾಯಿ ಆಶೀರ್ವಾದಗಳೊಂದಿಗೆ ನಡೆದ 17ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವದ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದರು. ಈ ಮಣ್ಣಿನಲ್ಲಿ ಸರ್ವಧರ್ಮದ ಐಕ್ಯಮತಿಯನ್ನು ದೇವರಿಗೆ ಕಾಣುವ ಇಚ್ಛೆಯಿಂದ ಈ ಜಾಗ ಅಬ್ದುಲ್ ಕುಂಞ್ ಅವರ ಕೈ ಸೇರಿದೆ. ಆ ಮೂಲಕ ನಾವೆಲ್ಲರೂ ಒಂದಾಗಿ ಪುಣ್ಯಕಾಯಕದಲ್ಲಿ ತೊಡಗಿಸಿಕೊಳ್ಳುವಂತೆ ಆಯಿತು. ಮುಂದೆ ನಡೆಯುವ ಪ್ರತೀ ವರ್ಧಂತ್ಯೋತ್ಸವದಲ್ಲಿ ಒಂದು ಗಿಡವನ್ನು ನೆಡುವಂತಹ ಕಾರ್ಯಕ್ರಮ ನಡೆಯಲಿ ಎಂದು ನುಡಿದರು. ದೇರಳಕಟ್ಟೆ ಫಾದರ್ ಮುಲ್ಲರ್ ಹೋಮಿಯೋಪಥಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆಡಳಿತಾಧಿಕಾರಿ ವಂ। ಫಾ.ಡೋನಾಲ್ಡ್ ನಿಲೇಶ್ ಕ್ರಾಸ್ತಾ ಮಾತನಾಡಿ, ಇದೊಂದು ಸೌಹಾರ್ದಮಯ ಕಾರ್ಯಕ್ರಮವಾಗಿದೆ. ಧರ್ಮಗಳು ಮಾನವೀಯತೆ ಬೆಳೆಸಲು ಬಂದಿದೆಯೇ ಹೊರತೂ ವಿಭಜಿಸಲು ಅಲ್ಲ. ಸರ್ವಧರ್ಮವೂ ಪ್ರೀತಿಸು, ದ್ವೇಷ ಬಿಡು ಎಂಬುವುದನ್ನು ಹೇಳುತ್ತದೆ. ಬಿದ್ದವರನ್ನು ಮೇಲಕ್ಕೆತ್ತುವುದು ನಿಜವಾದ ಧರ್ಮ. ಮಕ್ಕಳಿಗೆ ಭಯದ ಸಮಾಜವಲ್ಲ ಭರವಸೆಯ ಸಮಾಜವನ್ನು ಸೃಷ್ಟಿಸಬೇಕು. ಧರ್ಮ ಯಾವತ್ತೂ ಸಾಯಲು ಹೇಳುವುದಿಲ್ಲ. ಒಗ್ಗಟ್ಟಿನಿಂದ ಬದುಕಿ ಎಂದು ಹೇಳುತ್ತದೆ. ಮನುಷ್ಯತ್ವ ನಿಜವಾದ ಧರ್ಮ. ಹಿಂದೂ, ಇಸ್ಲಾಂ, ಕ್ರಿಶ್ಚಿಯನ್ ಮೂರು ಧರ್ಮಗಳು ಸಾರುವುದು ಒಂದೇ ಅದು ಬೆಳಕು. ಅಂತಹ ಬೆಳಕನ್ನು ನಾವೆಲ್ಲರೂ ಪ್ರಪಂಚಕ್ಕೆ ನೀಡೋಣ ಆ ಮೂಲಕ ಸಾಮರಸ್ಯದ ಬದುಕನ್ನು ಕಟ್ಟೋಣ ಎಂದು ಹೇಳಿದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ತಾರಾನಾಥ ಗಟ್ಟಿ ಕಾಪಿಕಾಡ್ ಮಾತನಾಡಿ, ಬುದ್ದಿವಂತರ ಜಿಲ್ಲೆ ಅನ್ನುವ ಹಣೆಪಟ್ಟಿಯನ್ನು ಕಟ್ಟಿಕೊಂಡಿರುವ ನಾವುಗಳು ಶಾಂತಿಯಿಂದ ಇರಲು ಇಬ್ಬರು ಪೊಲೀಸ್ ಅಧಿಕಾರಿಗಳು ಕಾರಣಕರ್ತರು. ತುಳುನಾಡಿನ ದೈವವು ಸೌಹಾರ್ದಮಯ ಜೀವನ ನಡೆಸಿ ಎಂಬುವುದನ್ನು ಸಾರುತ್ತದೆ. ಕೇವಲ ವೇದಿಕೆಯಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದ ಇದ್ದರೆ ಸಾಲದು. ಅದನ್ನು ಪೋಷಕರು ಅಳವಡಿಸಿಕೊಳ್ಳುವ ಜೊತೆಗೆ ಮಕ್ಕಳಿಗೂ ಕಲಿಸಿಕೊಡುವಂತಾಗಬೇಕು. ತುಳುನಾಡಿನ ಪಾರಂಪರಿಕತೆಯನ್ನು ಉಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಬದುಕಿ ಬಾಳಬೇಕು ಎಂಬ ಸಂದೇಶವನ್ನು ಸಾರಿದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಯೇನಪೋಯ ಆಸ್ಪತ್ರೆಯ ಡಾ.ಪುನೀತ್ ಅವರು, ಮಂಗಳೂರಿಗೆ ಬಂದು 3ವರ್ಷ ಕಳೆದಿದೆ. ಇಲ್ಲಿನ ವಾತಾವರಣದಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿದೆ. ಆದ ಕಾರಣ ಗಿಡವನ್ನು ನೆಟ್ಟು ಆರೋಗ್ಯವನ್ನು ಕಾಪಾಡಿಕೊಳ್ಳುವುದು ಉತ್ತಮ. ವಾತವಾರಣವನ್ನು ಸರಿಪಡಿಸಿಕೊಳ್ಳುವುದರ ಜೊತೆಗೆ ಮಾನವೀಯತೆಯನ್ನು ಬೆಳೆಸಿಕೊಳ್ಳುವುದು ಮುಖ್ಯ. ಭಗವಂತ ಪ್ರತೀ ಅಣುಅಣುವಿನಲ್ಲೂ ನೆಲೆಸಿರುತ್ತಾನೆ. ಆಗಿರುವಾಗ ಸರ್ವಧರ್ಮದವರಲ್ಲೂ ಆರೋಗ್ಯಯುತ ಸ್ನೇಹ ಬೆಳೆಸುವ ಮೂಲಕ ಸೌಹಾರ್ದತೆಯನ್ನು ಬೆಳೆಸಿಕೊಳ್ಳಬೇಕು. ದ್ವೇಷವನ್ನು ಬಿಟ್ಟರೆ ಆರೋಗ್ಯ ಉತ್ತಮವಾಗಿರುತ್ತದೆ ಎಂದು ತಿಳಿಸಿದರು. ಸೇವಾ ಸಮಿತಿಯ ಕಾರ್ಯಾಧ್ಯಕ್ಷರಾದ ಸಂಜೀವ ಪಿಲಾರ್ ಪ್ರಾಸ್ತಾವಿಕವಾಗಿ ಮಾತನಾಡಿ, 17ವರ್ಷದ ಹಿಂದೆ ಈ ಜಾಗವನ್ನು ಹಾಜಿ ಯೆನೆಪೋಯ ಅಬ್ದುಲ್ ಕುಂಞ ಅವರು ಖರೀದಿಸಿ, ಜೆಸಿಬಿ ಮೂಲಕ ಗುಡ್ಡ ಪ್ರದೇಶವನ್ನು ಸಮತಟ್ಟುಗೊಳಿಸಲಾಗಿತ್ತು. ಆ ಕಾಲದಲ್ಲಿ ನಾಗರಹಾವುಗಳು ಜೆಸಿಬಿಯಲ್ಲಿ ಕಂಡು ಬಂದ ಹಿನ್ನಲೆ ಇಲ್ಲಿ ನಾಗಬ್ರಹ್ಮನ ಕ್ಷೇತ್ರದ ವಿಚಾರ ಬಯಲಿಗೆ ಬಂತು. ನಾಗನ ಆರಾಧನೆಗಾಗಿ ದೊಡ್ಡ ಮಟ್ಟದ ಮೊತ್ತದಲ್ಲಿ ಖರೀದಿಸಿದ ಜಾಗವನ್ನು ಕುಂಞ್ ಅವರು ಬಿಟ್ಟುಕೊಟ್ಟಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಸೇವಾ ಸಮಿತಿಯ ಅಧ್ಯಕ್ಷರಾದ ಸವಿತಾ ವೇಣುಗೋಪಾಲ್, ಕಾರ್ಯದರ್ಶಿ ಅರುಣ ದೇವರಾಜ್, ಕೋಶಾಧಿಕಾರಿ ಮಮತಾ ಉಪೇಂದ್ರ ದಾಸ್, ಸೇವಾ ಸಮಿತಿಯ ಅಧ್ಯಕ್ಷರಾದ ಈಶ್ವರ್ ಶೆಟ್ಟಿ, ಕಾರ್ಯದರ್ಶಿಯಾದ ಚಂದ್ರಹಾಸ್, ಕೋಶಾಧಿಕಾರಿಯಾದ ಲೋಕೇಶ್ ಶೆಟ್ಟಿ ಪಿಲಾರ್, ಸಮಿತಿ ಸರ್ವಸದಸ್ಯರು ಹಾಗು ಊರಿನವರು ಉಪಸ್ಥಿತರಿದ್ದರು. ರೋಹಿತ್ ಉಳ್ಳಾಲ್ ಕಾರ್ಯಕ್ರಮ ನಿರೂಪಿಸಿದರು. ಇಬ್ಬರು ಸಾಧಕರಿಗೆ ಸನ್ಮಾನ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರವೀಣ್ ಶೆಟ್ಟಿ ಮೇಗಿನ ಮನೆ ಹಾಗೂ ಕ್ರೀಡಾ ಪ್ರತಿಭೆ ವಾಲಿಬಾಲ್ ಪಂದ್ಯಾಟದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ನಿಶಾಂತ್ ಪಿಲಾರ್ ಲಕ್ಷ್ಮೀಗುಡ್ಡೆ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು





# ಶ್ರೀ ಉಮಾಮಹೇಶ್ವರಿ ದೇವಸ್ಥಾನ

ಉಮಾಪುರಿ, ಕಾಪಿಕಾಡ್, ಉಳ್ಳಾಲ – 575020, ಮೊಬೈಲ್: 7204336331

# ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂಪನ್ನ

ಹಾಗೂ

2026ನೇ ಫೆಬ್ರವರಿ 7 ರಿಂದ ಫೆಬ್ರವರಿ 8ವರೆಗೆ **ವಾರ್ಷಿಕ ಜಾತ್ರಾ ಮಹೋತ್ಸವ**



## ಕಾಪಿಕಾಡು ಉಮಾಪುರಿ ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶ, ಶ್ರೀ ಭದ್ರಕಾಳಿ ಪ್ರತಿಷ್ಠೆ ಭವ್ಯವಾಗಿ ಸಂಪನ್ನ

ಉಳ್ಳಾಲ ತಾಲೂಕಿನ ತೊಕ್ಕೊಟ್ಟು ಕಾಪಿಕಾಡು ಉಮಾಪುರಿಯ ಶ್ರೀ ಉಮಾಮಹೇಶ್ವರಿ ದೇವಸ್ಥಾನದಲ್ಲಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿಯವರ ನೇತೃತ್ವದಲ್ಲಿ ನಡೆದ ಅಷ್ಟಬಂಧ ಬ್ರಹ್ಮಕಲಶ, ಶ್ರೀ ಭದ್ರಕಾಳಿ ಪ್ರತಿಷ್ಠೆ ಹಾಗೂ ವರ್ಷಾವಧಿ ಜಾತ್ರಾ ಮಹೋತ್ಸವವು ಭಕ್ತಿಭಾವ, ಶಿಸ್ತು ಮತ್ತು ವಿಜೃಂಭಣೆಯೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಫೆಬ್ರವರಿ 6 ಮತ್ತು 7ರಂದು ನಡೆದ ಈ ಮಹೋತ್ಸವದಲ್ಲಿ ವಿವಿಧ ತಾಂತ್ರಿಕ, ವೈದಿಕ ಹಾಗೂ ಧಾರ್ಮಿಕ ವಿಧಿವಿಧಾನಗಳು ಶ್ರದ್ಧಾಭಕ್ತಿಯಿಂದ ನೆರವೇರಿದ್ದು, ಸಹಸ್ರಾರು ಭಕ್ತಾಧಿಗಳು ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾದರು. ದೈವ ಸಂಕಲ್ಪದಂತೆ ನಡೆದ ಭದ್ರಕಾಳಿ ಪ್ರತಿಷ್ಠೆಯು ಕ್ಷೇತ್ರದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದ್ದು, ಭಕ್ತರಲ್ಲಿ ಆಧ್ಯಾತ್ಮಿಕ ಉತ್ಸಾಹ ಮೂಡಿಸಿತು.

ಮಹೋತ್ಸವದ ಅಂಗವಾಗಿ ವೈದಿಕ ಹೋಮ–ಹವನಗಳು, ಪೂಜಾ ಕೈಂಕರ್ಯಗಳು, ಮಹಾಮಂಗಳಾರತಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಬ್ರಹ್ಮಕಲಶೋತ್ಸವದ ವೇಳೆ ದೇವಸ್ಥಾನ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವನ್ನು ಕೇಸರಿ ಬಟ್ಟೆ, ವಿದ್ಯುತ್ ದೀಪಾಲಂಕಾರ ಮತ್ತು ವಿವಿಧ ವಿನ್ಯಾಸಗಳಿಂದ ಸಿಂಗಾರಿಸಲಾಗಿದ್ದು, ಭಕ್ತರಲ್ಲಿ ವಿಶೇಷ ಆಕರ್ಷಣೆಗೆ ಕಾರಣವಾಯಿತು.

ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಡಾ. ಕನ್ಯಾನ ಸದಾಶಿವ ನೆಟ್ಟ (ಚೇರ್ಮನ್, ಹೇರಂಬಾ ಇಂಡಸ್ಟ್ರೀಸ್, ಮುಂಬಯಿ) ದೀಪ ಪ್ರಜ್ವಲನೆ ನೆರವೇರಿಸಿದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಗಣ್ಯಾತಿಗಣ್ಯರು ಹಾಗೂ ಧಾರ್ಮಿಕ ಮುಖಂಡರು ಉಪಸ್ಥಿತರಿದ್ದು ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಶುಭಾಶಯ ಕೋರಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ "ಭಕ್ತಿ ಗಾನ ವೈಭವ", ಸ್ಥಳೀಯ ಪ್ರತಿಭೆಗಳ ಸಂಗೀತ–ನೃತ್ಯ ಪ್ರದರ್ಶನಗಳು ಹಾಗೂ ಅದ್ದೂರಿ ತುಳು ನಾಟ್ಯ ಭರತಿನ ಕಾರ್ಯಕ್ರಮಗಳು ನಡೆದಿದ್ದು, ಭಕ್ತರು ಮತ್ತು ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಆಡಳಿತ ಮೊಕ್ತಸರರಾದ ಸಂತೋಷ್ ಕಾವಿಕಾಡು ಅವರ ನೇತೃತ್ವದಲ್ಲಿ ಉಮಾ ಮಹೇಶ್ವರಿ ದೇವಸ್ಥಾನ ಸೇವಾ ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಸತೀಶ್ ಕುಮಾರ್ ಪುಂಡಿ–ಕ್ಕಾ, ಗಣೇಶ್ ಕಾವಿಕಾಡು ಸೇರಿದಂತೆ ಅನೇಕ ಸೇವಾಭಿಮಾನಿಗಳು ಸಹಕಾರ ನೀಡಿದರು.

ಅಷ್ಟಬಂಧ ಬ್ರಹ್ಮಕಲಶ, ಶ್ರೀ ಭದ್ರಕಾಳಿ ಪ್ರತಿಷ್ಠೆ ಹಾಗೂ ಜಾತ್ರಾ ಮಹೋತ್ಸವವು ಯಾವುದೇ ಅಡಚಣೆ ಇಲ್ಲದೆ ಭಕ್ತಿಭಾವಪೂರ್ಣ ವಾತಾವರಣದಲ್ಲಿ ಸಂಪನ್ನಗೊಂಡಿದ್ದು, ಶ್ರೀ ಕ್ಷೇತ್ರದ ಆಧ್ಯಾತ್ಮಿಕ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ದೇವಸ್ಥಾನ ಸೇವಾ ಸಮಿತಿ ತಿಳಿಸಿದೆ.









ವಿಜ್ಞಾಪನೆ

ಸಹೃದಯ ಭಕ್ತಾಭಿಮಾನಿ ಬಂಧುಗಳೇ,

ತುಳುನಾಡಿನ ದಕ್ಷಿಣ ಕರಾವಳಿಯ ಐತಿಹಾಸಿಕ ಸ್ಥಳವಾಗಿರುವ ಉಳ್ಳಾಲ ತಾಲೂಕಿನ ಕಾಪಿಕಾಡ್‌ನ ಪರಿಸರದಲ್ಲಿ ದೈವ ಸಂಕಲ್ಪದಂತೆ ನವನಿರ್ಮಾಣಗೊಂಡು,2011ನೇ ಇಸವಿಯಲ್ಲಿ ಪ್ರತಿಷ್ಠೆಯಾಗಿ ವಿಜೃಂಭಣೆಯಿಂದ ಬ್ರಹ್ಮಕಲಶಗೊಂಡು ಶ್ರದ್ಧಾ ಭಕ್ತಿಯ ಸಾನಿಧ್ಯವಾಗಿ ಉಮಾಪುರಿ ಉಮಾಮಹೇಶ್ವರಿ ದೇವಸ್ಥಾನವು ಬೆಳಗುತ್ತಿದೆ.ಊರ ಹಾಗೂ ಪರವೂರಿನ ಭಕ್ತರೆಲ್ಲರ ಕಾರಣಿಕದ ಕ್ಷೇತ್ರವಾಗಿ ಜನಜನಿತವಾಗಿದೆ.

ಕಳೆದ 14 ವರ್ಷಗಳಲ್ಲಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಸಾಧ್ಯವಾದಷ್ಟು ಮೂಲಭೂತ ಸೌಕರ್ಯಗಳನ್ನು ಕ್ಷೇತ್ರದ ಆಡಳಿತವು ಒದಗಿಸಲು ಪ್ರಯತ್ನಿಸಿರುತ್ತದೆ.ಪ್ರಸ್ತುತ ಕ್ಷೇತ್ರದ ಭಕ್ತರಿಗೆ ಹಾಗೂ ಸಾರ್ವಜನಿಕರಿಗೆ ಇನ್ನಷ್ಟು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಉದ್ದೇಶದೊಂದಿಗೆ ಕ್ಷೇತ್ರಕ್ಕೆ ತಾಗಿಕೊಂಡಿರುವ ಸುಮಾರು 40 ಸೆಂಟ್ಸ್ ಸ್ಥಳವನ್ನು ಭಕ್ತರೆಲ್ಲರ ಸಹಕಾರದೊಂದಿಗೆ ಖರೀದಿಸಿದ್ದು, ಅದರಲ್ಲಿ ಕೆಳ ಅಂತಸ್ತಿನಲ್ಲಿ ಪಾರ್ಕಿಂಗ್ ಸೌಲಭ್ಯ ಹಾಗೂ ಒಂದನೇ



ಅಂತಸ್ತಿನಲ್ಲಿ ಅಗತ್ಯದ ವ್ಯವಸ್ಥೆಯೊಂದಿಗೆ 'ಸಭಾಭವನ' ವೊಂದನ್ನು ನಿರ್ಮಿಸಲು ಕಾರ್ಯ ಯೋಜನೆಯನ್ನು ಹಾಕಿ ಕೊಂಡಿರುತ್ತೇವೆ. ಎರಡು ಅಂತಸ್ತು ಸೇರಿ ಸುಮಾರು 20 ಸಾವಿರ ಚದರ ಅಡಿ ವಿಸ್ತೀರ್ಣವಾಗಬಹುದಾಗಿದೆ.ಅದರೊಂದಿಗೆ ಕ್ಷೇತ್ರದಲ್ಲಿ ಭಕ್ತರಿಗೆ ಅನ್ನ ಪ್ರಸಾದದ ವ್ಯವಸ್ಥೆಗಾಗಿ,ಕ್ಷೇತ್ರದ ಬಳಿಯ ಇನ್ನೊಂದು ನಿವೇಶನವನ್ನು ಖರೀದಿಸಿ ವ್ಯವಸ್ಥಿತ ಪಾಕಶಾಲೆ ಇತ್ಯಾದಿಗಳನ್ನು ಕೂಡಾ ನಿರ್ಮಾಣ ಮಾಡುವ ಸಂಕಲ್ಪ ಮಾಡಿರುತ್ತೇವೆ.ಈ ಎಲ್ಲಾ ಕಾಮಗಾರಿಗಳ ಬಗ್ಗೆ ಅಂದಾಜು ವೆಚ್ಚ ಸುಮಾರು ರೂ.3.50 ಕೋಟಿ (ರೂಪಾಯಿ ಮೂರು ಕೋಟಿ ಐವತ್ತು ಲಕ್ಷ) ಗಳಷ್ಟು ತಗಲಬಹುದೆಂದು ಯೋಜಿಸಲಾಗಿದೆ. ಹಾಗೂ ಇದರ ನೀಲಿ ನಕಾಶೆಯೊಂದನ್ನು ಸಿದ್ಧಪಡಿಸಲಾಗಿದೆ.

ನಮ್ಮ ಕ್ಷೇತ್ರದ ಸದರಿ ಪುಣ್ಯ ಕಾರ್ಯ ಯೋಜನೆಗೆ ಊರ ಹಾಗೂ ಪರವೂರಿನ ಭಕ್ತಾಭಿಮಾನಿಗಳು ತನು–ಮನ–ಧನದ ಸಹಕಾರವನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

**ಎ.ಜೆ. ಶೇಖರ್**
ಆಡಳಿತ ಮೊಕ್ತೇಸರರು

**ದಿನೇಶ್ ಕೆ. ಅತ್ತಾವರ**
ಪ್ರಧಾನ ಕಾರ್ಯದರ್ಶಿ, ಆಡಳಿತ ಮಂಡಳಿ

**ಟಿ. ರಘುರಾಮ್ ಶೆಟ್ಟಿ**
ಕೋಶಾಧಿಕಾರಿ,ಆಡಳಿತ ಮಂಡಳಿ

**ದಿನೇಶ್ ರೈ ಕಳ್ಳಿಗೆ**
ಅಧ್ಯಕ್ಷರು, ಸೇವಾ ಸಮಿತಿ

**ಗಣೇಶ್ ಕಾಪಿಕಾಡ್**
ಪ್ರಧಾನ ಕಾರ್ಯದರ್ಶಿ, ಸೇವಾ ಸಮಿತಿ

**ಪರಮೇಶ್ವರ ಜೋಷಿ**
ಪ್ರಧಾನ ಅರ್ಚಕರು

**ಅಧ್ಯಕ್ಷರು ಮತ್ತು ಸರ್ವಸದಸ್ಯರು**
ಬ್ರಹ್ಮಕಲಶೋತ್ಸವ ಸಮಿತಿ

**ಸರ್ವಸದಸ್ಯರು**
ಸೇವಾ ಸಮಿತಿ

**ಮೊಕ್ತೇಸರರು :**
ಈಶ್ವರ್ ಉಳ್ಳಾಲ್, ಡಾ.ಆರ್.ಕೆ. ಶೆಟ್ಟಿ, ಮಹಾಲಿಂಗ, ಕೂಸಪ್ಪ ಗಟ್ಟಿ, ನಿರ್ಮಲಾ ಕುಂಞಂಬು, ಶರತ್ ಕುಮಾರ್

Account Name:
SHRI UMAMAHESHWARI DEVAST-
HANA ADALITHA TRUSTBank: UNION
BANK BRANCH: THOKKOTTU AC.No:
520101028942449 IFSC Code: UBIN0911496

## ಉಮಾಪುರಿ ಶ್ರೀ ಉಮಾಮಹೇಶ್ವರಿ ದೇವರ ಬ್ರಹ್ಮಕಲಶೋತ್ಸವ ಹಾಗೂ ವರ್ಷಾವಧಿ ಜಾತ್ರಾ ಮಹೋತ್ಸವಕ್ಕೆ ಶುಭಕೋರುವ



**ಶ್ರೀ ಎ.ಜೆ. ಶೇಖರ್**
ಆಡಳಿತ ಮೊಕ್ತೇಸರರು
ಶ್ರೀ ಉಮಾಮಹೇಶ್ವರಿ ದೇವಸ್ಥಾನ ಕಾಪಿಕಾಡು



**ಶ್ರೀ ದಿನೇಶ್ ಕೆ. ಅತ್ತಾವರ**
ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮಂಡಳಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ ಕಾಪಿಕಾಡು



**ಶ್ರೀ ಸತೀಶ್ ಕುಂಪಲ**
ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ ಕಾಪಿಕಾಡು



**ಶ್ರೀ ಸುರೇಶ್ ಭಟ್ನಗರ**
ಕಾರ್ಯಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ ಕಾಪಿಕಾಡು



**ಶ್ರೀ ಡಾ|| ಆರ್.ಕೆ.ಶೆಟ್ಟಿ**
ಮೊಕ್ತೇಸರರು
ಶ್ರೀ ಉಮಾಮಹೇಶ್ವರಿ ದೇವಸ್ಥಾನ
ಕಾಪಿಕಾಡು



**ಶ್ರೀ ದಿನೇಶ್ ರೈ ಕಳ್ಳಿಗೆ**
ಅಧ್ಯಕ್ಷರು, ಸೇವಾ ಸಮಿತಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ
ಕಾಪಿಕಾಡು



**ಶ್ರೀ ಗಣೇಶ್ ಕಾಪಿಕಾಡು**
ಪ್ರಧಾನ ಕಾರ್ಯದರ್ಶಿ, ಸೇವಾ ಸಮಿತಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ
ಕಾಪಿಕಾಡು



**ಜಗದೀಶ್ ಆಚಾರ್ಯ ತೊಕ್ಕೊಟ್ಟು**
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಪ್ರಚಾರ ಸಮಿತಿ
ಶ್ರೀ ಉಮಾಮಹೇಶ್ವರಿ ದೇವಸ್ಥಾನ
ಕಾಪಿಕಾಡು



**ಶ್ರೀ ರಾಘವ ಆರ್. ಉಚ್ಚಿಲ್**
ಪ್ರಧಾನ ಸಂಚಾಲಕರು, ಬ್ರಹ್ಮಕಲಶೋತ್ಸವ
ಪ್ರಚಾರ ಸಮಿತಿ, ಶ್ರೀ ಉಮಾಮಹೇಶ್ವರಿ
ದೇವಸ್ಥಾನ ಕಾಪಿಕಾಡು.

Ullalavani, Published by Ravi Bangera, Printed by DIGANTA MUDRANA LTD 5-184/185 NEAR INDUSTRIAL AREA YEYYADI MANGALARE, DAKSHINA KANNADA, KARNATAKA - 575008. News Editor: Mohan Kuthar.
Editorial Office at : Appachi Complex, Kuthar, Munnur Post, Someshwar Village, Ullal Tq - 575 017, Call : 9972528110. RNI:KNKAN/26/A0422. Email: ullalavani@gmail.com